ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ)

ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ 22 ಸಂಚಿಕೆ 9 ಫೆಬ್ರವರಿ 22-28, 1999 ರೂ. 2.00

ಆಮದು-ರಫ್ತು ನೀತಿಯ ವಿರುದ್ಧ ಪಕ್ಷಭೇದ ಮರೆತು ರೈತರು ಸಿಡಿದೇಳಬೇಕು

ಕರ್ನಾಟಕದಲ್ಲಿ ಇಂದು ರ್‍ಯಾಲಿಗಳ ಮೇಲೆ ರ್‍ಯಾಲಿಗಳು(ಮೆರವಣಿಗೆ) ಒಂದೊಂದು ಹತ್ತಾರು ಸಾವಿರ ಭಾಗವಹಿಸುತ್ತಿರುವ ರ್‍ಯಾಲಿಗಳು. ರೇಷ್ಮೆ ಆಮದು ವಿರುದ್ಧ ರೈತರ ಒಂದು ಬೃಹತ್ ರ್‍ಯಾಲಿ. ಅದಕ್ಕೆ ಪ್ರತಿಯಾಗಿ ಆಮದು ಪರವಾದ ಒಂದು ನೇಕಾರರ ರ್‍ಯಾಲಿ. ನಂತರ ಆಮದು ವಿರೋಧಿ, ಆಮದು ಪರವಾದ ಹೇಳಿಕೆಗಳು, ಪ್ರತಿ ಹೇಳಿಕೆಗಳು. ನೇಕಾರರು, ಕಾರ್ಮಿಕರು, ರೇಷ್ಮೆ ಬೆಳೆಗಾರರು ಸೇರಿ ನಡೆಸಿದ ವಿಚಾರ ಸಂಕಿರಣ, ಅದರಲ್ಲಿ ಪಶ್ಚಿಮ ಬಂಗಾಳದ ಸಚಿವರು, ಕರ್ನಾಟಕದ ರೇಷ್ಮೆ ಸಚಿವರು, ಮಾಜಿ ಸಚಿವರು, ಮಾಜಿ ಸಂಸತ್ ಸದಸ್ಯರು, ತಜ್ಞರು, ಇವರೆಲ್ಲಾ ವ್ಯಕ್ತಪಡಿಸಿದ ನೇಕಾರರ ಉದ್ದಿಮೆಯ ಬೆಳವಣಿಗೆಗೆ ಅನುಕೂಲವಾಗುವಂತೆ ಪ್ರತಿಪಾದಿಸಿದ ಸೀಮಿತ ನಿಯಂತ್ರಿತ ಆಮದು ನೀತಿ. ನಂತರ ಕಬ್ಬು, ತೊಗರಿ, ಟೋಮೋಟೋ ಬೆಲೆ ಇಳಿಕೆಗಳಿಂದ ಆತಂಕ.

ಈ ಎಲ್ಲಾ ಸಮಸ್ಯೆಗಳನ್ನು ಹೆಸರಿಸಿ ಜನತಾಧಳ ನಡೆಸಿದ ರ್‍ಯಾಲಿಯಲ್ಲಿ ಬಿಡುಗಡೆ ಮಾಡಿದ ಮಾಗ್ನಕಾರ್ಡ್(ರೈತರ 20 ಹಕ್ಕೊತ್ತಾಯಗಳು). ಈ ಹಕ್ಕೊತ್ತಾಯಗಳನ್ನು ಕೇಂದ್ರ ಸರ್ಕಾರ ಮಾನ್ಯ ಮಾಡದಿದ್ದರೆ ಇಡೀ ದೇಶದಲ್ಲಿ ಜನತಾದಳ ಚಳುವಳಿ ನಡೆಸಲಿದೆ ಎಂಬ ಘೋಷಣೆ ಜನತಾದಳದ ರ್‍ಯಾಲಿಯ ಪರ ವಿರೋಧ ಹೇಳಿಕೆಗಳು, ರ್‍ಯಾಲಿಯಲ್ಲಿಯೇ ನಡೆದ ಗದ್ದಲ. ಇವು ಕರ್ನಾಟಕದ ಪತ್ರಿಕೆಗಳಲ್ಲಿ ಮುಖಪುಟದಲ್ಲಿ ರಾರಾಜಿಸಿದ ಸುದ್ದಿಗಳು.

ಈ ಎಲ್ಲಾ ಚಳುವಳಿ, ಪ್ರತಿಭಟನೆಗಳು ಕರ್ನಾಟಕದಲ್ಲಿ ತೊಗರಿಬೆಳೆಗಾರ ರೈತರ ಆತ್ಮಹತ್ಯೆಗಳು, ಅದು ಕರ್ನಾಟಕದ ರೈತರಲ್ಲಿ ಮೂಡಿಸಿದ ಆತಂಕ, ಸಿರಾದಲ್ಲಿ ಕಡಲೆಕಾಯಿ(ಶೇಂಗಾ) ಬೆಳೆಗಾರರ ಮೇಲೆ ಗುಂಡೇಟುಗಳ ಹಿನ್ನೆಲೆಯಲ್ಲಿ ನಡೆಯುತ್ತಿದೆಯೆಂಬುದನ್ನು ನೆನಸಿಕೊಳ್ಳಬೇಕು. ತೊಗರಿಬೆಳೆಗಾರರ ಆತ್ಮಹತ್ಯೆ ಧಿಡೀರನೆ

ಜಿ.ಎನ್.ನಾಗರಾಜ್

ರೈತರ ಮೇಲೆ ಬಂದೆರಗಿದರೆ, ಆತ್ಮಹತ್ಯೆ ಮಾಡಿಕೊಳ್ಳಲು ಸಿದ್ಧರಿಲ್ಲದ ಕಡಲೆಕಾಯಿ ಬೆಳೆಗಾರರು ಪ್ರತಿಭಟಿಸಿ ಗುಂಡಿಗೆ ಬಲಿಯಾಗಿ ಹುತಾತ್ಮರಾದರು. ರೇಷ್ಮೆ ಬೆಳೆಗಾರರು ಆತ್ಮಹತ್ಯೆ ಮತ್ತು ಸಾವುಗಳು ತಮ್ಮ ಮೇಲೆ ಬಂದೆರಗಲಿರುವುದನ್ನು ಮೊದಲೇ ಅರಿತು ಹೋರಾಟಕ್ಕಿಳಿದಿದ್ದಾರೆ. ಈ ನಿಟ್ಟಿನಿಂದ ಅತ್ಯಂತ ಆರೋಗ್ಯಕರ ಬೆಳವಣಿಗೆ ಕರ್ನಾಟಕದ ರೈತ ಸಮುದಾಯ ಚಲಿಸಲಾರಂಭಿಸಿದೆ ಎಂಬುದರ ಸೂಚನೆ.

ಕರ್ನಾಟಕದ ರೈತರ ಈ ಎಚ್ಚರ, ಈ ಚಲನೆಯ ಮುಖ್ಯ ಕಾರಣ ಕೇಂದ್ರ ಸರ್ಕಾರದ ಆಮದು-ರಫ್ತು ನೀತಿ. ಇದರ ಫಲವಾಗಿ ದೇಶಾದ್ಯಂತ ಧಿಡೀರನೆ ಕುಸಿಯುವ, ಧಿಡೀರನೆ ಏಳುವ ಫಸಲಿನ ಬೆಲೆಗಳು. ಈರುಳ್ಳಿಯ ಉದಾಹರಣೆಯಂತೂ ನಮ್ಮ ಕಣ್ಣ ಮುಂದಿದೆ. ಈ ಆಮದು- ರಫ್ತು ನೀತಿ ದೇಶದ ಕೃಷಿ, ಉದ್ಯಮಗಳ ಹಿತವವನ್ನು ಕಡೆಗಣಿಸಿ ಅದರಲ್ಲಿ ತೊಡಗಿರುವ ಕೋಟ್ಯಾಂತರ ಜನ ಸಮುದಾಯಗಳ ಹಿತವನ್ನು ದುರ್ಲಕ್ಷಿಸಿ ಕೇವಲ ಕೆಲವರ ಹಿತಕ್ಕಾಗಿ ಅವರನ್ನು ಬಲಿಕೊಡುವ ಈ ನೀತಿ ರೈತರಲ್ಲಿ ಅತೃಪ್ತಿಯನ್ನು ಮೂಡಿಸುತ್ತಿದೆ.

ಆದರೆ ಇದಿನ್ನು ಆರಂಭವಷ್ಟೆ. ನರಸಿಂಹರಾವ್-ಮನಮೋಹನ್ ಸಿಂಗ್‌ರಿಂದ ಆರಂಭವಾದ ಈ

ಪುಟ 2 ನೋಡಿ

ಅಕಾಲಿದಳ, ತೆಲುಗುದೇಶಂನವರೇ! ನಿಮ್ಮ ಕಲಮು 356ರ ವಿರೋಧಿ ನೀತಿ ಎಲ್ಲಿದೆ?

ಕಲಮು 356ರ ಕರಾಳ ದುರ್ಬಳಕೆಯನ್ನು ಪಾರ್ಲಿಮೆಂಟಿನಲ್ಲಿ ಸೋಲಿಸಿ

ಬಿಜೆಪಿ ಕೊನೆಗೂ ಸಮತಾ ಪಾರ್ಟಿಯನ್ನು ಓಲೈಸಿ ತನ್ನ ಗುದ್ದುಗೆಯ ಆಸೆಯನ್ನು ತೀರಿಸಿಕೊಂಡಿದೆ. ಕಳೆದ ಸೆಪ್ಟೆಂಬರ್ 22 ರಂದು ಬಿಹಾರ ಸರ್ಕಾರ ವಜಾ ಮಾಡಲು ಅಧ್ಯಕ್ಷರಿಗೆ ಶಿಫಾರಸು ಮಾಡಿ ಅವರಿಂದ 'ಮಂಗಳಾರತಿ' ಮಾಡಿಸಿಕೊಂಡಿದ್ದ ನಿರ್ಣಯವನ್ನೇ ಪುನಃ ಅಧ್ಯಕ್ಷರಿಗೆ ಕಳಿಸುವ ಮೂಲಕ ಅವರ ಕೈಯನ್ನು ಕಟ್ಟಿ ಹಾಕಿದೆ.

ಉಚ್ಚ ಜಾತಿಯ ಭೂಮಾಲಕರ ರಣವೀರ ಸೇನಾ ದಲಿತರ ಮೇಲೆ ನಡೆಸಿರುವ ನರಮೇಧ ಎದುರಿಸಲು ಸಮಗ್ರ ರಾಜಕೀಯ ಆಡಳಿತಾತ್ಮಕ ಕ್ರಮಗಳ ಅಗತ್ಯತೆ ಇರುವುದು ನಿಜವಾದರೂ, ರಾಷ್ಟ್ರಪತಿ ಆಡಳಿತ ಪರಿಹಾರವಲ್ಲ ಎಂಬುದು ಅಷ್ಟೇ ನಿಜ. ರಾಷ್ಟ್ರಪತಿ ಆಡಳಿತ ಘೋಷಿಸಿ ಕೆಲವೇ ಗಂಟೆಗಳಲ್ಲಿ ಅದೇ ಜಿಲ್ಲೆಯಲ್ಲಿ ಇನ್ನೊಂದು ನರಮೇಧ ನಡೆದು ಇದನ್ನು ಈಗಾಗಲೇ ಸಿದ್ಧಪಡಿಸಿದೆ.

ಬಿಹಾರದಲ್ಲಿ ಕಲಮು 356 ರ ದುರ್ಬಳಕೆ ಸಮರ್ಥಿಸುವುದಾದರೆ, ಗುಜರಾತ್, ಮಹಾರಾಷ್ಟ್ರ ಸರ್ಕಾರಗಳು ಯಾವಾಗಲೋ ವಜಾ ಮಾಡಬೇಕಿತ್ತು. ಈ ಎರಡೂ ರಾಜ್ಯ ಸರ್ಕಾರಗಳು ಅಲ್ಪಸಂಖ್ಯಾತರ ಮೇಲೆ ಬರ್ಬರ ದಾಳಿ ಮಾಡುವವರನ್ನು ಸಾಕುತ್ತಿವೆ ಮಾತ್ರವಲ್ಲ ರಕ್ಷಿಸುತ್ತಿವೆ. ಇವುಗಳಲ್ಲಿ ಬಾಳಾಠಾಕ್ರೆ ಮುಂಬಯಿಯ 1991-92 ರ ಕೋಮು ಉನ್ಮಾದಕ್ಕೆ ನೇರ ಕಾರಣ ಎಂದು ಹೇಳಿರುವ ಶ್ರೀ ಕೃಷ್ಣ ಕಮಿಷನ್‌ನ ವರದಿಯನ್ನು ನಿರಾಕರಿಸಿದ ಮಹಾರಾಷ್ಟ್ರ ಸರ್ಕಾರದ ಪಾತ್ರ ಇವೆರೆಡರಲ್ಲಿ ಇನ್ನೂ ಗುರುತರವಾದದ್ದು.

ಬಿಹಾರದ ಗವರ್ನರ್ ಎಸ್.ಎಸ್. ಭಂಡಾರಿ ಅವರು ಆ ಪದವಿಗೆ ಆಯ್ಕೆಯಾದಾಗಿನಿಂದ ಅವರು ಸಂಶಯಾಸ್ಪದ ವ್ಯಕ್ತಿ. 1951 ರಲ್ಲಿ ಶ್ಯಾಮ ಪ್ರಸಾದ ಮುಖರ್ಜಿ ಆಗಿನ ಜನಸಂಘ ಕಟ್ಟಲು ಕಳಿಸಿದ್ದ ಪ್ರಥಮ ಆರೆಸ್ಸೆಸ್ ಪ್ರಚಾರಕರಲ್ಲಿ ಒಬ್ಬರು. ಆದ್ದರಿಂದಲೇ ಅವರು ಬಿಹಾರ ರಾಜ್ಯಪಾಲರಾದಾಗಲೇ ಬಿಹಾರ ಸರ್ಕಾರ ಉಳಿಯುವುದಿಲ್ಲ ಎಂದು ಜನ ಭಾವಿಸಿದ್ದರು. ಈಗ ಹಾಗೇ ಆಗಿದೆ.

ಆತನ ಸ್ವಭಾವಕ್ಕೆ ಅನುಗುಣವಾಗಿ, ಆರೆಸ್ಸೆಸ್ ಮಾದರಿಯಲ್ಲಿ ಶಾಂತಿಯುತ ಕಾನೂನುಬದ್ಧ ಪ್ರಜಾಸತ್ತಾತ್ಮಕ ರಾಜಕೀಯದ ದಮನದಿಂದಲೇ ಆತ ಆಡಳಿತ ಆರಂಭಿಸಿದ್ದಾನೆ. ಜೆಹನಾಬಾದ್ ಜಿಲ್ಲೆಯಲ್ಲಿ ನರಮೇಧವಾದ ಹಳ್ಳಿಗೆ ಸಿಪಿಐ(ಎಂ) ಪಾರ್ಲಿಮೆಂಟು ಸದಸ್ಯರ ನಿಯೋಗವೊಂದು ಭೇಟಿ ಮಾಡುವುದನ್ನು ಆತ ನಿಷೇಧಿಸಿದ್ದಾನೆ. ಮೊದಲೇ ಘೋಷಿಸಲಾಗಿದ್ದ ಹಾಗೂ ಅನುಮತಿ ಪಡೆದಿದ್ದ ಕಿಸಾನ್ ಸಭಾದ ರಾಜ್ಯ ಸಮ್ಮೇಳನದ ಸಂದರ್ಭದ ರ್‍ಯಾಲಿಯನ್ನು ಈತ ನಿಷೇಧಿಸಿದ್ದಾನೆ. ಬಿಜೆಪಿ, ಸಮತಾ ಪಾರ್ಟಿಗಳು ರಾಜ್ಯದಲ್ಲಿ ಮನಬಂದಂತೆ ನಡೆದುಕೊಳ್ಳಬೇಕಾದರೆ ಉಳಿದ ಎಲ್ಲಾ ಪಕ್ಷಗಳನ್ನು ಅಧಿಕಾರದಾಹಿ ರೀತಿಯಲ್ಲಿ ದಮನಗೊಳಿಸಲಾಗುತ್ತಿದೆ.

ಕಾಂಗ್ರೆಸ್ ಪಾರ್ಟಿ ಈ ಬಗ್ಗೆ ನಿಲುವು ದಿನೇ ದಿನೇ ಕುತೂಹಲಕಾರಿಯಾಗುತ್ತಿದ್ದು, ಅದರ ನಿಲುವು ಗೋಸುಂಬೆತನದ್ದಾಗಿದೆ. ಪಾರ್ಲಿಮೆಂಟಿನಲ್ಲಿ ಬಿಹಾರ ವಜಾಕ್ಕೆ ಒಪ್ಪಿಗೆ ಕೊಡುವ ನಿರ್ಣಯದಲ್ಲಿ ಕಾಂಗ್ರೆಸನ ಪಾತ್ರ ಅದಕ್ಕೆ ಒಂದು ಪರೀಕ್ಷೆ ಇದ್ದಂತೆ. ಅದರ ಗುಟ್ಟಾದ ಬೆಂಬಲ, ಕಾಂಗ್ರೆಸ್ ತನ್ನ ಬೇಳೆ ಬೇಯಿಸಿಕೊಳ್ಳಲು ಪ್ರಜಾಸತ್ತೆ ಬಲಿ ಕೊಡಲು ತಯಾರು ಎಂದು ತೋರಿಸಿಕೊಡುತ್ತದೆ.

ಬಿಹಾರ ಗವರ್ನರನ್ನು ಬದಲಾಯಿಸಿ ಒಬ್ಬ 'ರಾಜಕೀಯೇತರ' ನಿಷ್ಪಕ್ಷಪಾತದ ಗವರ್ನರನ್ನು ತರಲಾಗುವುದು ಎಂಬ ಅಡ್ವಾಣಿಯವರ ಹೇಳಿಕೆ ಇನ್ನೂ ತಮಾಷೆಯಾದದ್ದು. ಅಂದರೆ ಈವರೆಗೆ ಬಿಹಾರದ ಗವರ್ನರ್ ರಾಜಕೀಯ ಉದ್ದೇಶದಿಂದ, ಪಕ್ಷಪಾತಿ ಧೋರಣೆ ವಹಿಸಿದ್ದಾರೆ ಎಂದು ಒಪ್ಪಿಕೊಂಡಂತಾಗಿದೆ. ಈ ಹೇಳಿಕೆಯೊಂದೆ ಸಾಕು ಬಿಜೆಪಿಯನ್ನು ಖಂಡಿಸಲು . ಆದರೆ ಇದು ಕಾಂಗ್ರೆಸ್‌ನ್ನು ಓಲೈಸಲು ಪ್ರಯತ್ನಿಸಿದಂತಿದೆ - ಈ ಕ್ರಮದ ಮೂಲಕ. ಬಿಜೆಪಿ ನೀತಿ ರಹಿತ ಪಾರ್ಟಿ ಎಂದು ಜಗಜ್ಜಾಹೀರಾಗಿದೆ.

ಪಾರ್ಲಿಮೆಂಟಿನಲ್ಲಿ ಕಲಮು 356 ರ ಈ ದುರ್ಬಳಕೆ ತಡೆಯಲು ಪ್ರಜಾಸತ್ತಾತ್ಮಕ ಅಭಿಪ್ರಾಯ ಬಲವಾಗಬೇಕು. ಕಳೆದ ಬಾರಿ ರಾಷ್ಟ್ರಪತಿ 'ರಾಷ್ಟ್ರಪತಿ ಆಡಳಿತ' ಕ್ಕೆ ಮಂಜೂರು ಕೊಡದೆ ಹಿಂದಿರುಗಿಸಿದಾಗಿಂದ ಅಕಾಲಿದಳ, ತೆಲುಗುದೇಶಂ ಸ್ವಾಗತಿಸಿದ್ದು, ತೃಣಮೂಲ ಕಾಂಗ್ರೆಸ್ ಸಹ ತನ್ನದೇ ರೀತಿಯಲ್ಲಿ ಮಾಡಿತು. ಈ ಸಂದರ್ಭದಲ್ಲಿ ಅವರು ಪ್ರಜಾಸತ್ತಾತ್ಮಕ ಅಗತ್ಯಗಳಿಗೆ ಸ್ಪಂದಿಸದಿದ್ದರೆ ಜನರಿಂದ ಪ್ರತ್ಯೇಕವಾಗುವುದು ಖಂಡಿತ.

ಬಿಜೆಪಿಯ ಆಟಗಳು ಈಗಾಗಲೇ ಬಯಲಾಗಿವೆ. ಆರ್‌ಜೆಡಿ ಸಹ ತನ್ನ ತಪ್ಪುಗಳಿಂದ ಬಿಜೆಪಿಗೆ ಅನುಕೂಲ ಮಾಡಿಕೊಟ್ಟಂತಾಗಿದೆ ಎಂದು ಮರೆಯುವಂತಿಲ್ಲ. ಸಾಮಾನ್ಯ ಪ್ರಜಾಸತ್ತಾತ್ಮಕ ಚಟುವಟಿಕೆ ಮುಂದುವರೆಯುವಂತೆ, ವಿರೋಧ ಪಕ್ಷವನ್ನು ದಮನ ಮಾಡದಂತೆ ಮಾಡುವುದು ಇಂದಿನ ಅಗತ್ಯ. ○

ಬಿಪಿಎಲ್ ಮುಷ್ಕರ-ಲಾಕೌಟ್ ನಿಷೇಧ: ತಾತ್ಕಾಲಿಕ ಪರಿಹಾರಕ್ಕೆ ಸಿಪಿಐ(ಎಂ) ಒತ್ತಾಯ

ಬಿಪಿಎಲ್ ಕಾರ್ಖಾನೆಯಲ್ಲಿ ಕಳೆದ ಕೆಲವು ತಿಂಗಳುಗಳಿಂದ ಉಲ್ಬಣಗೊಂಡ ಕೈಗಾರಿಕಾ ಅಶಾಂತಿಯನ್ನು ಬಗೆಹರಿಸುವ ಅಂಗವಾಗಿ ಕಾರ್ಖಾನೆಯಲ್ಲಿ ಹೊರಗೀಲಿ(ಲಾಕೌಟ್) ಯನ್ನು ಹಾಗೂ ಮುಷ್ಕರವನ್ನು ನಿಷೇಧಿಸಿರುವುದಾಗಿ ಕಾರ್ಮಿಕ ಸಚಿವ ಬಿ.ಎಲ್.ಶಂಕರ್ ಅವರ ಹೇಳಿಕೆ ಪ್ರಕಟವಾಗಿದೆ. ಕಾರ್ಖಾನೆಯ ಆಡಳಿತ ವರ್ಗ ಕಾರ್ಮಿಕ ವಿರೋಧಿ ನೀತಿಯನ್ನು ಅನುಸರಿಸುತ್ತಿದೆ ಎಂಬ ಅಪಾದನೆ ಬಗ್ಗೆ ವಿವರಣೆ ನೀಡುವಂತೆ ಆಡಳಿತ ವರ್ಗಕ್ಕೆ ಷೋಕಾಸ್ ನೋಟಿಸ್ ನೀಡಲಾಗಿದೆ ಎಂದು ಸಹ ಸಚಿವರು ಹೇಳಿಕೆ ನೀಡಿದ್ದಾರೆ.

ಹಿಂದಿನ ಕಾರ್ಮಿಕ ಸಚಿವರು ಮತ್ತು ಕಾರ್ಮಿಕ ಇಲಾಖೆಯು ಕೈಗೊಳ್ಳಲು ನಿರ್ಧರಿಸಿದ್ದ ಕ್ರಮಗಳಲ್ಲಿ ಮುಷ್ಕರ ಮತ್ತು ಹೊರಗೀಲಿ ನಿಷೇಧದ ಈ ಕ್ರಮಗಳೂ ಸೇರಿದ್ದವು ಮಾತ್ರವಲ್ಲ ಕೈಗಾರಿಕಾ ವಿವಾದ ಕಾಯ್ದೆಯ ಕಾಲಂ 10-ಬಿ ಪ್ರಕಾರ ಕಾರ್ಮಿಕರಿಗೆ ತಾತ್ಕಾಲಿಕ ಪರಿಹಾರ ನೀಡುವಂತೆ ಆಡಳಿತ ವರ್ಗಕ್ಕೆ ಆದೇಶ ನೀಡುವ ಕ್ರಮವೂ ಸೇರಿತ್ತು. ಹಲವು ತಿಂಗಳುಗಳಿಂದ ಮುಷ್ಕರ ನಡೆಸುತ್ತಿದ್ದ ಕಾರ್ಮಿಕರಿಗೆ ತಾತ್ಕಾಲಿಕ ಪರಿಹಾರದಿಂದ ಸಹಾಯವಾಗುತ್ತಿತ್ತು. ಆದರೆ ಮುಖ್ಯಮಂತ್ರಿ ಜೆ.ಹೆಚ್.ಪಟೇಲರು ಬಿ.ಪಿ.ಎಲ್. ಆಡಳಿತ ವರ್ಗದ ಒತ್ತಡಕ್ಕೆ ಒಳಗಾಗಿ ಕಾರ್ಮಿಕ ಸಚಿವಾಲಯದಿಂದ ಬಿ.ಪಿ.ಎಲ್. ಫೈಲನ್ನು ತರಿಸಿಕೊಂಡು ಕಾರ್ಮಿಕರಿಗೆ 10-ಬಿ ಪ್ರಕಾರ ಪರಿಹಾರ ನೀಡಬೇಕೆಂಬ ಆದೇಶದ ಭಾಗವನ್ನು ತೆಗೆದು ಹಾಕಿದ್ದಾರೆ ಎಂಬ ಬಲವಾದ ಸಂದೇಹವಿದೆ. ಆದ್ದರಿಂದ ಕಾರ್ಮಿಕ ಸಚಿವ ಬಿ.ಎಲ್.ಶಂಕರ್ ಅವರು ಫೈಲನ್ನು ವಿವರವಾಗಿ ಪರಿಶೀಲಿಸಿ ಕಾರ್ಮಿಕರಿಗೆ 10-ಬಿ ಪ್ರಕಾರ ತಾತ್ಕಾಲಿಕ ಪರಿಹಾರ ತಪ್ಪದೆ ದೊರೆಯುವಂತೆ ಕ್ರಮ ಕೈಗೊಳ್ಳಬೇಕೆಂದು ಸಿಪಿಐ(ಎಂ) ಒತ್ತಾಯಿಸಿದೆ.

ಬಿಹಾರದಲ್ಲಿ ರಾಷ್ಟ್ರಪತಿ ಆಳ್ವಿಕೆ ಹೇರಿ ಸಂವಿಧಾನದ 356ನೇ ವಿಧಿಯನ್ನು ದುರುಪಯೋಗಪಡಿಸಿಕೊಂಡದ್ದನ್ನು ವಿರೋಧಿಸಿ ಬೆಂಗಳೂರಿನಲ್ಲಿ ಸಿಪಿಐ(ಎಂ) ಕಾರ್ಯಕರ್ತರು ಫೆಬ್ರವರಿ 13 ರಂದು ಮೈಸೂರು ಬ್ಯಾಂಕ್ ವೃತ್ತದಲ್ಲಿ ಪ್ರತಿಭಟನಾ ಪ್ರದರ್ಶನ ನಡೆಸುತ್ತಿರುವುದು.



ದೇಶದ ಕಷ್ಟ ಕೋಟಲೆಗಳಿಗೆ ಹೊಸ ಆರ್ಥಿಕ ನೀತಿಯೇ ಕಾರಣ

ಇದನ್ನು ಸಮೀಕ್ಷೆಯೊಂದು ಹೇಳಿದೆ. ಬಿಜೆಪಿ ಪೂರ್ವದ ಪರ್ಯಾಯ ಆರ್ಥಿಕ ಸಮೀಕ್ಷೆ ಈ ಮಾತನ್ನು ಹೇಳಿ ಪ್ರತಿಯೊಂದು ವಲಯದಲ್ಲೂ ಆಗುತ್ತಿರುವ ಆಗುವ ಅನಾಹುತಗಳನ್ನು ವಿವರವಾಗಿ ಚರ್ಚಿಸಿದ ಖ್ಯಾತ ಅರ್ಥಶಾಸ್ತ್ರಜ್ಞರು, ಸಮಾಜ ವಿಜ್ಞಾನಿಗಳು, ಮಾಜಿ ಅಧಿಕಾರಿಗಳನ್ನೊಳಗೊಂಡ ಸಂಘಟನೆಯೊಂದು ಈ ಸಮೀಕ್ಷೆ ನಡೆಸಿದೆ:

ಈ ಸಮೀಕ್ಷೆಯ ಬಿಡುಗಡೆಯ ಸಂದರ್ಭದಲ್ಲಿ ಮಾತನಾಡಿದ ಇಂಡಿಯನ್ ಇನ್ಸ್‌ಟಿಟ್ಯೂಟ್ ಆಫ್ ಪಬ್ಲಿಕ್ ಅಡ್ಮಿನಿಸ್ಟ್ರೇಷನ್‌ನ ಡಾ. ಕಮಲ್ ನಯಾನ್ ಶಿಬ್ರಾ ಅವರ ಪ್ರಕಾರ ಹೊಸ ಆರ್ಥಿಕ ನೀತಿ ಶ್ರೀಮಂತರನ್ನು ಇನ್ನು ಬಲಪಡಿಸಿ ಬಡವರನ್ನು ಹಿಂಡುವ ಕೆಲಸವನ್ನು ಮಾಡಿದೆ.

1991-92 ರಿಂದ 1997-98 ರ ವರೆಗೆ ಸರಾಸರಿ ವಾರ್ಷಿಕವಾಗಿ ಬರೀ ಎರಡು ಲಕ್ಷ ಉದ್ಯೋಗಗಳಷ್ಟೇ ಸಂಘಟಿತ ವಲಯದಲ್ಲಿ ಸೃಷ್ಟಿಯಾಗಿವೆಯಂತೆ ಇದಕ್ಕೆ ಪ್ರತಿಯಾಗಿ 10 + 12 ಕ್ಲಾಸುಗಳ ಮಟ್ಟದಲ್ಲಿ ಪ್ರತಿವರ್ಷ 60 ಲಕ್ಷ ಜನ ಪದವಿ ಪಡೆಯುತ್ತಿರುವರಂತೆ.

ಹಿಂದೆಂದಿಗಿಂತ ಕಡಿಮೆ ದರದ ಉದ್ಯೋಗ ಬೆಳವಣಿಗೆ ಕಂಡಿರುವ ಈ ಅವಧಿ ಸರ್ಕಾರದ ಲಾಭ ಬಡುಕತನ ಹಾಗೂ ಜನವಿರೋಧಿ ಧೋರಣೆಯನ್ನು ಎತ್ತಿ ತೋರಿಸಿದೆ ಎಂದು ಅವರು ಹೇಳಿದ್ದಾರೆ.

ಕೃಷಿ, ಪರಿಸರ, ನೀರು ಮತ್ತು ಜನಿ ಸಂಪನ್ಮೂಲಗಳು ಹಾಗೂ ಅಸಂಘಟಿತ ವಲಯಗಳ ವಿಶ್ಲೇಷಣೆ ಜನತೆಯ ಜೀವನ ಮಟ್ಟ ಕುಸಿದಿರುವುದನ್ನು ಅವರ ಆಹಾರ ಸುಭದ್ರತೆ ಹಾಳಾಗಿರುವುದನ್ನು ಸ್ಪಷ್ಟವಾಗಿ ತೋರಿಸುತ್ತದೆ ಎಂದು ಅವರು ಹೇಳಿದ್ದಾರೆ. ಹಣದುಬ್ಬರ ಜನಸಮಾನ್ಯರ ಬಳಕೆಯ ವಸ್ತುಗಳ ಬೆಲೆಗಳು ಗಗನಕ್ಕೇರಿರುವುದನ್ನು ತೋರಿಸಿದರೆ ಉತ್ಪಾದನಾ ವಲಯದ ಹೀನಾಯ ಸ್ಥಿತಿ ಈ ಮುಕ್ತ ಮಾರುಕಟ್ಟೆ ನೀತಿಯ ಸೂಕ್ತಸೂಕ್ತತೆ ಬಗ್ಗೆ ಸ್ಪಷ್ಟವಾಗಿ ಹೇಳುತ್ತದೆ.

ಹೊಸ ಸ್ವಾತಂತ್ರ್ಯ ಪೂರ್ತಿ ದುರುಪಯೋಗವಾಗಿ ಕಪ್ಪು ಹಣ ತೀರ ದೊಡ್ಡ ಪ್ರಮಾಣದಲ್ಲಿ ಬೆಳೆದಿದೆ. ಸ್ವಯಂ ಘೋಷಣೆಯ ಯೋಜನೆಯಂತಹ ಯೋಜನೆಗಳು ದೊಡ್ಡ ಹಗರಣಗಳಾಗಿಯೇ ಬೆಳೆದಿದ್ದು ಆಮೂಲಾಗ್ರವಾದ ತಪಾಸಣೆಯ ಅವಶ್ಯಕತೆ ಇದೆ ಎಂದು ಈ ಸಮೀಕ್ಷೆ ಹೇಳಿದೆ.

ಈ ವಿಷಯದ ಬಗ್ಗೆ ಚರ್ಚೆ ನಡೆಯಲಿ ಎಂದೇ ಈ ಸಮೀಕ್ಷೆಯನ್ನು ನಡೆಸಲಾಗಿದೆ ಎಂದು ಈ ಸಂಘಟನೆಯ ವಕ್ತಾರರು ಹೇಳಿದ್ದಾರೆ. ಗ್ರಾಮೀಣ, ನಗರ ಪ್ರದೇಶಗಳ ಅಸಮಾನ ಬೆಳವಣಿಗೆ ಪ್ರದೇಶಗಳ ಅಸಾಮಾನತೆ ಇವೆಲ್ಲ ಹೆಚ್ಚಾಗಿರುವುದು, ಅಂತರ್ರಚನಾ ಸೌಲಭ್ಯಗಳ ಕೊರತೆ ಈ ಹೊಸ ಆರ್ಥಿಕ ನೀತಿ ಹೇಗೆ ವಿಫಲವಾಗಿದೆ ಎನ್ನುವುದನ್ನು ತೋರಿಸಿ ಕೊಟ್ಟಿದೆ ಎಂದೂ ಈ ಸಂಘಟನೆಯ ವಕ್ತಾರರು ಹೇಳಿದ್ದಾರೆ.


ಉದ್ಯೋಗಗಳಿಗೆ ಹೊಡೆತ

ಇದು ಹೊಸ ಆರ್ಥಿಕ ನೀತಿಗಳ ನೇರ ಪರಿಣಾಮ. ಉತ್ಪಾದನಾ ವೆಚ್ಚವನ್ನು ಕಡಿಮೆ ಮಾಡಿ ಲಾಭ ಹೆಚ್ಚಿಸಿಕೊಳ್ಳುವ ಕಾರ್ಯದಲ್ಲಿ ಬಂಡವಾಳ ಶಾಹಿಗಳು ನಿರತರಾಗಿದ್ದಾರೆ ಸೋವಿಯತ್ ಯೂನಿಯನ್ನಿನ ವಿಘಟನೆಯ ನಂತರ ಸಮಾಜವಾದೀ ಪರ್ಯಾಯ ಎದ್ದು ಕಾಣುವಂತಿಲ್ಲ. ಹೀಗಿರುವಾಗ ಈ ಹೊಸ ಆರ್ಥಿಕ ನೀತಿಗಳೇ ಮೆರೆಯುತ್ತಿವೆ. ಈ ನೀತಿಗಳು ಬಂಡವಾಳಿಗರಿಗೆ, ಸಾಮ್ರಾಜ್ಯ ಶಾಹಿಗಳಿಗೆ ಲಾಭ ತಂದು ಕೊಡುವುದರ ಜೊತೆಗೆ ಜನ ಸಾಮಾನ್ಯರ ಹೊಟ್ಟೆಯ ಮೇಲೆ ಹೊಡೆಯುತ್ತಿವೆ.

ವೆಚ್ಚ ಕಡಿಮೆ ಮಾಡಲು ಆಧುನಿಕ ತಂತ್ರಜ್ಞಾನ ಅಳವಡಿಸಿಕೊಳ್ಳುವುದು ಒಂದು ದಾರಿ. ಹೊಸ ತಂತ್ರಜ್ಞಾನಕ್ಕೆ ಕಡಿಮೆ ಕೆಲಸಗಾರರು ಸಾಕು. ಅಂದರೆ ಇರುವ ಉದ್ಯೋಗಿಗಳ ಸಂಖ್ಯೆಯನ್ನು ಕಡಿಮೆ ಮಾಡಬೇಕು. ಹಲವು ಕಂಪನಿ ಗಳು ಈಗ ಈ ಕೆಲಸವನ್ನೇ ಮಾಡುತ್ತಿವೆ. ಕೆಳಗೆ ಯುಕೊಬ್ಯಾಂಕ್‌ನ ಉದಾಹರಣೆ ಇದೆ.

ಈಗ ಟಾಟಾಗಳ ಕಂಪನಿ ಟೆಸ್ಕೊ ಈ ಕಾರ್ಯಕ್ಕೆ ಕೈಹಾಕಿದೆ. ತನ್ನ 60,000 ಉದ್ಯೋಗಿಗಳ ಸಂಖ್ಯೆಯನ್ನು ಮುಂಬರುವ ಸಾಲಿನ ಕೊನೆಯ ವೇಳೆಗೆ 55000 ಕ್ಕೆ ಇಳಿಸುವ ಯೋಜನೆಯನ್ನು ಹಾಕಿ ಕೊಂಡಿದೆ. ಅಂದರೆ 5000 ಉದ್ಯೋಗಿ ಗಳು ಮನೆಗೆ ಹೋಗಲಿದ್ದಾರೆ. ಇದೇ ರೀತಿ ನೊಸಿಲ್ ಎಂಬ ಕಂಪನಿಯೂ ತನ್ನ ಉದ್ಯೋಗಿಗಳ ಸಂಖ್ಯೆಯನ್ನು ಕಡಿಮೆ ಮಾಡ ಹೊರಟಿದೆ.

ಹೀಗೆ ಬಹಳಷ್ಟು ಕಂಪನಿಗಳು ಈ ದಾರಿಯನ್ನು ಹಿಡಿಯುತ್ತಿವೆ. ಉದ್ಯೋಗವನ್ನು ಹೊರತು ಪಡಿಸುವ ಈ ಬೆಳವಣಿಗೆ ಇಂದಿನ ಹೊಸ ಬೆಳವಣಿಗೆ. ಇದರಿಂದ ಯಾರಿಗೆ ಲಾಭ ಯಾರಿಗೆ ಹಾನಿ ನೀವೇ ಯೋಚಿಸಿ.



ನಿಜವಾದ ದುಸ್ವಪ್ನ

ಯುಕೊ ಬ್ಯಾಂಕ್ ತನ್ನ 200 ಶಾಖೆಗಳನ್ನು ಮುಚ್ಚಲಿದೆ. ಈ ಸಾರ್ವಜನಿಕ ವಲಯದ ಬ್ಯಾಂಕ್‌ನ 7000 ಉದ್ಯೋಗಿಗಳು ಸ್ವಯಂ ನಿವೃತ್ತಿ ಎಂಬ ನಿರುದ್ಯೋಗ ಯೋಜನೆಗೆ ಬಲಿಯಾಗಲಿದ್ದಾರೆ. ಹಣಕಾಸು ವಲಯದ ಉದಾರೀಕರಣದ ಭಯಂಕರ ದುಸ್ವಪ್ನ ಈಗ ನಿಜವಾಗಲಿದೆ. ಹಣಕಾಸು ವಲಯ ಇಂತಹ ಹಲವು ಭಯಂಕರಗಳನ್ನು ನೋಡಲಿರುವ ಸೂಚನೆ ಇದು.

ಯುಕೊ ಬ್ಯಾಂಕಿನಲ್ಲಿ ವೇತನ ಹೆಚ್ಚಳಗಳಿಗೆ ಪ್ರತಿಬಂಧ ಹಾಕಲಾಗಿದೆ ಈ ನಿರ್ಧಾರವನ್ನು ಬ್ಯಾಂಕ್ ಹಾನಿಯಿಂದ ಹೊರಬಂದ ನಂತರ ಮಾತ್ರ ಪುನರ್ವಿಮರ್ಶಿಸಲಾಗುವುದಂತೆ. ಐದು ವರ್ಷಗಳ ಕಾಲ ಸತತವಾಗಿ ಹಾನಿಮಾಡಿರುವ ಶಾಖೆಗಳನ್ನು ಮುಚ್ಚಲಾಗುವುದು.

ಹೀಗೆ ಎಲ್ಲ ತರಹದ ನಿರ್ಬಂಧಗಳನ್ನು ಯುಕೊ ಬ್ಯಾಂಕಿನಲ್ಲಿ ತರಲಾಗುತ್ತಿದೆ. ಹಾಗಿದ್ದರೆ ಬ್ಯಾಂಕಿನ ಇಂದಿನ ಹಣಕಾಸು ಪರಿಸ್ಥಿತಿಗೆ ಬಹುತೇಕ ಉದ್ಯೋಗಿಗಳೇ ಕಾರಣರೆ? ಸಾಧ್ಯವೇ ಇಲ್ಲ. ಬಂಡವಾಳಿಗರಿಗೆ ಮತ್ತು ಭೂ ಮಾಲಿಕರಿಗೆ ಸಾಲ ನೀಡಿ ಅವುಗಳನ್ನು ವಜಾ ಮಾಡಿ ಬ್ಯಾಂಕುಗಳನ್ನೇ ಹಾಳುಗೆಡವಿ ಈಗ ಬ್ಯಾಂಕುಗಳ ಪರಿಸ್ಥಿತಿಗೆ ಸಾಮಾನ್ಯ ಉದ್ಯೋಗಿಗಳೇ ಕಾರಣ ಎಂಬಂತೆ ಅಭಿಪ್ರಾಯವನ್ನು ನೀಡಲಾಗುತ್ತಿದೆ. ನಿಜದಲ್ಲಿ ಭೂಮಾಲಿಕ ಬಂಡವಾಳಗರೇ ಬ್ಯಾಂಕುಗಳ ಹಣಕಾಸಿನ ಫಲಾನುಭವಿಗಳಲ್ಲವೆ?

ಬಗ್ಗಿದರೆ ತಲೆಯ ಮೇಲೇ ಮೊಟಕಿದರು

ಸಾಮ್ರಾಜ್ಯ ಶಾಹಿಗಳ ಸಹಜಗುಣ ಅದು. ಅಮೇರಿಕ ಭಾರತದ ಪೇಟೆಂಟ್ ಬಗೆಗಿನ ಸುಗ್ರೀವಾಜ್ಞೆಯ ವಿರುದ್ಧ ವಿಶ್ವವ್ಯಾಪಾರ ಸಂಸ್ಥೆಗೆ ಹೋಗುತ್ತಿದೆ. ಭಾರತದ ಪೇಟೆಂಟ್ ಸುಗ್ರಿವಾಜ್ಞೆಯೇ ದೇಶಕ್ಕೆ ಮಾರಕ ಎನ್ನುವುದು ಈಗಾಗಲೇ ಗೊತ್ತಿರುವ ವಿಷಯ. ಇದು ತಮಗೆ ಅನಾನುಕೂಲಕರ ಈ ಕಾಯಿದೆ ಇನ್ನಷ್ಟು ಉದಾರೀಕರಣ ಮಾಡಬೇಕಾಗಿತ್ತು ಎನ್ನುವುದು ಅಮೇರಿಕದ ವಾದ

ಈಗಾಗಲೇ ಪಾಸಾಗಿರುವ ಸುಗ್ರೀವಾಜ್ಞೆಯಲ್ಲಿ ಲೈಸನ್ಸನ್ನು ಅನಿವಾರ್ಯಗೊಳಿಸಿರುವುದನ್ನು ಮತ್ತು ಪೂರ್ಣ ವ್ಯಾಪಾರ ಹಕ್ಕುಗಳಿಗಾಗಿನ ಅರ್ಜಿಗಳನ್ನು ಡ್ರಗ್ ಕಂಟ್ರೋಲರ್ ಪರೀಕ್ಷಿಸುವುದರ ವಿರುದ್ಧ ಅಮೇರಿಕ ತಕರಾರು ಮಾಡಿದೆ. ಈ ಎರಡು ಟ್ರಿಪ್ಸ್‌ನ ಒಪ್ಪಂದವನ್ನೇ ಸಡಿಲಗೊಳಿಸುತ್ತವೆ. ಅನಿವಾರ್ಯ ಲೈಸೆನ್ಸ್‌ನಿಂದಾಗಿ ಭಾರತ ಸರ್ಕಾರ ಸಾರ್ವಜನಿಕ ಆಸಕ್ತಿ ಕಾಪಾಡಲು ಮಧ್ಯ ಪ್ರವೇಶಿಸುವ ಅವಕಾಶ ವಿರುತ್ತದೆ. ಇದಲ್ಲದೆ ಸರ್ಕಾರ ಕನಿಷ್ಟ ಬೆಲೆ ನಿರ್ಧರಿಸಲೂ ಅದು ಅವಕಾಶ ನೀಡುತ್ತದೆ. ಆಯಾ ಕಂಪನಿ ತಾನು ಕಂಡು ಹಿಡಿದ ಔಷಧಿಗೇ ಪೇಟೆಂಟ್ ಪಡೆಯಲು ಅರ್ಜಿ ನೀಡಿ ತಾನೇ ಇದನ್ನು ಕಂಡುಹಿಡಿದದ್ದು ಎನ್ನುವುದನ್ನು ಸಿದ್ಧಮಾಡಬೇಕಾಗುತ್ತದೆ.

ಭಾರತ ತನ್ನ ಕ್ರಮಗಳನ್ನು ಸಮರ್ಥಿಸಿಕೊಂಡಿದೆ. ಆದರೆ ಅಮೇರಿಕನ್ ಸಾಮ್ರಾಜ್ಯ ಶಾಹಿಯ ಪ್ರಬಲ ವಿಶ್ವ ವ್ಯಾಪಾರ ಸಂಸ್ಥೆಯಲ್ಲಿ ಬಲವಾಗಿರುವುದರಿಂದ ಅಮೇರಿಕ ಭಾರತಕ್ಕೆ ಸಾಕಷ್ಟು ತೊಂದರೆ ನೀಡುವ ನಿರ್ಧಾರದಲ್ಲಿರುವಂತೆ ಕಾಣುತ್ತದೆ. ○

ದುಸ್ಥಿತಿಯಲ್ಲಿ ಆರ್ಥಿಕ

ಉದಾರೀಕರಣದ ಆರ್ಥಿಕ ನೀತಿಗಳು ಜನಹಿತ ಮಾಡುವುದಾದರೆ ಈ ಮಾತು ಬರುವ ಅವಶ್ಯಕತೆಯೇ ಇರಲಿಲ್ಲ. ಆದರೆ ಆರ್ಥಿಕ ದುಸ್ಥಿತಿಯಲ್ಲಿದೆ ಎಂಬ ವಾಸ್ತವವನ್ನು ಉದಾರೀಕರಣವಾದಿಗಳೇ ಒಪ್ಪಿಕೊಳ್ಳು ತ್ತಾರೆ. ಉದಾರೀಕರಣ ಎಂತಹ ಪರಿಸ್ಥಿತಿಯನ್ನುಂಟುಮಾಡಿದೆ ಎಂಬುದಕ್ಕೆ ಇದೇ ಪುರಾವೆ. ಇರಲಿ ಕೇಂದ್ರದ ಹಣಕಾಸು ಮಂತ್ರಿಗಳು ಆಗಲೇ ಭಜೆಟ್ ಬಹಳ ಕಠೋರ ವಾಗಿರುತ್ತದೆ ಎಂದು ಹೇಳಿಯೇ ಬಿಟ್ಟಿದ್ದಾರೆ. ಈ ಸಾರಿಯ ಸರ್ಕಾರಿ ವೆಚ್ಚಗಳು ಹೆಚ್ಚಾಗಿರುವಾಗಲೇ ಕಂದಾಯ ಸಂಗ್ರಹಣೆಯು ಕಡಿಮೆಯಾಗಿದೆಯಂತೆ. ಸರ್ಕಾರಿ ವೆಚ್ಚ ವಿವಿಧ ತಿಂಗಳುಗಳಲ್ಲಿ ಶೇ. 40 ರಿಂದ ಶೇ 58 ರಷ್ಟು ಹೆಚ್ಚಾಗಿದೆಯಂತೆ.

ಕಂದಾಯ ಸಂಗ್ರಹಣೆ ಏಪ್ರಿಲ್ 98 ರಿಂದ ಡಿಸೆಂಬರ್ 98 ರ ವರೆಗಿನ ಅವಧಿಯಲ್ಲಿ ಬರೀ 99691 ಕೋಟಿ ರೂಪಾಯಿಗಳಷ್ಟಾಗಿದೆಯಂತೆ. ಇದು 1998-99 ನೇ ಸಾಲಿನ ಗುರಿಯ ಶೇ 61.5 ರಷ್ಟು ಮಾತ್ರ. ಅಂದರೆ ಇನ್ನುಳಿದ ಶೇ. 39.5 ರಷ್ಟು ಸಂಗ್ರಹಣೆ ಮುಂದಿನ ಮೂರು ತಿಂಗಳುಗಳಲ್ಲಿ ಆಗಬೇಕು.

ಇದು ಬಿಜೆಪಿ ಸರ್ಕಾರದ ಅಸಾಮರ್ಥ್ಯವನ್ನು ಎತ್ತಿ ತೋರಿಸುತ್ತದೆ. ಇಂತಹ ದುಸ್ಥಿತಿಯಿಂದ ದೇಶದ ಆರ್ಥಿಕವನ್ನು ಹೊರತರುವ ತಾಕತ್ತಂತೂ ಬಿಜೆಪಿಗೆ ಇಲ್ಲ. ಬದಲಿಗೆ ಇನ್ನಷ್ಟು ಹದಗೆಡಿಸುವ ಕೆಲಸವನ್ನಷ್ಟೇ ಅದು ಮಾಡುತ್ತಿದೆ. ಅಲ್ಲವೇ?

.... ರೈತರು ಸಿಡಿದೇಳಬೇಕು

ಪುಟ 1 ರಿಂದ

ನೀತಿಯನ್ನು ಕೇಂದ್ರದಲ್ಲಿರುವ ಬಿಜೆಪಿ ಸರ್ಕಾರ- ಮೊದಲೇ ದೊಡ್ಡ ವ್ಯಾಪಾರಗಾರರು, ಬಂಡವಾಳಶಾಹಿಗಳ ಪರವಾದ ಬಿಜೆಪಿ ಸರಕಾರ ಈ ಶ್ರೀಮಂತರಿಗೆ ಅನುಕೂಲವಾಗುವಂತೆ ಮತ್ತಷ್ಟು ತೀವ್ರತೆಯಿಂದ ಜಾರಿಗೆ ತರುತ್ತಿದೆ ಎನ್ನುವುದೇ ಈ ಅತೃಪ್ತಿಯ ಮೂಲದಲ್ಲಿರುವ ಕಾರಣ. ರೈತ ಸಮುದಾಯದ ಎಲ್ಲ ವಿಭಾಗಗಳನ್ನು ಈ ಆಮದು-ರಫ್ತು ನೀತಿ ಭಾದಿಸ ಲಾರಂಭಿಸಿದೆ. ತೆಂಗು ಬೆಳೆಗಾರರು, ರಬ್ಬರ್ ಬೆಳೆಗಾರರು ಇತ್ಯಾದಿ ಇನ್ನೂ ಅನೇಕ ಫಸಲಿನ ಬೆಳೆಗಾರರು ಇದರಲ್ಲಿ ಸೇರಿದ್ದಾರೆ. ಬಿಜೆಪಿ ಸರ್ಕಾರದಲ್ಲಿ ಆಮದು-ರಫ್ತು ನೀತಿ ಆದ್ಯಾನವಾಗಲು ಮುಖ್ಯ ಕಾರಣ ವಿಶ್ವ ವಾಣಿಜ್ಯ ಸಂಸ್ಥೆಯ ಒತ್ತಡಕ್ಕೆ, ಆ ವಿಶ್ವ ವಾಣಿಜ್ಯ ಸಂಸ್ಥೆಯಲ್ಲಿ ಅಮೇರಿಕ ಮಾಡಿದ ಅಪಾದನೆಗಳಿಗೆ ಬಲಿಯಾಗಿ ಭಾರತಕ್ಕೆ ಯಾವುದೇ ಕೃಷಿ ಉತ್ಪಾದನೆಯನ್ನು ಆಮದು ಮಾಡಿಕೊಳ್ಳಬೇಕಾದರೆ ಇದ್ದ ನಿರ್ಬಂಧಗಳನ್ನು ತೆಗೆದು ಹಾಕಲೊಪ್ಪಿರುವುದು. ಇದು 2005 ರ ವೇಳೆಗೆ ಭಾರತಕ್ಕೆ ಎಲ್ಲ ಕೃಷಿ ಉತ್ಪಾದನೆಗಳನ್ನು ಮುಕ್ತವಾಗಿ ಆಮದು ಮಾಡಿಕೊಳ್ಳಬೇಕೆಂದಿರುವ ಗ್ಯಾಟ್ ನಿರ್ಬಂಧಕ್ಕೆ ಅನುಗುಣವಾಗಿ ಭಾರತವನ್ನು ಹಂತಹಂತವಾಗಿ ತೆರೆಯುವುದು. ಇನ್ನು ಕೇವಲ 4-5 ವರ್ಷಗಳಲ್ಲಿ ಭಾರತದ ಎಲ್ಲಾ ಕೃಷಿ ಉತ್ಪಾದನೆಗಳ ಶೇ 5 ರಷ್ಟನ್ನು ಆಮದು ಮಾಡಿಕೊಳ್ಳಲೇಬೇಕೆಂಬ ಕಡ್ಡಾಯವಿದೆ ಆ ಒಪ್ಪಂದದಲ್ಲಿ. ಈಗಲೇ ಕೇವಲ ಕೆಲವು ಬೆಳೆಗಳ ಉತ್ಪನ್ನಗಳನ್ನು ಮುಕ್ತ ಆಮದಿಗೊಳಪಡಿಸಿರುವಾಗಲೇ ಹೀಗಾದರೆ ಎಲ್ಲ ಬೆಳೆಗಲ ಉತ್ಪನ್ನಗಳನ್ನು ಕಡ್ಡಾಯವಾಗಿ ಆಮದು ಮಾಡಿಕೊಳ್ಳಲೇ ಬೇಕಾಗಿರುವ ಪ್ರಸಂಗದಲ್ಲಿ ಏನಾಗಬಹುದು? ಇನ್ನು ಕೇವಲ 4-5 ವರ್ಷಗಳಲ್ಲಿ ಭಾರತದ ರೈತರನ್ನು ಕಾಡಿಸಲಿರುವ ಮಾರುಕಟ್ಟೆಯ ಕನಿಷ್ಟ ಪ್ರಮಾಣದಲ್ಲಿ ತೆರೆದಿಡುವ (Market access) ನೀತಿಯ ನಂತರ ದೇಶಾದ್ಯಂತ ರೈತರು ಪ್ರತಿಭಟಿಸದಿದ್ದರೆ ಉಳಿಗಾಲವಿಲ್ಲ ಎಂಬುದರ ಮುನ್ಸೂಚನೆ ಕಾಣಲಾರಂಭಿಸಿದೆ.

ರೈತರಲ್ಲಿ ಉಂಟಾಗುತ್ತಿರುವ ಈ ಅತೃಪ್ತಿಯನ್ನು ವಿವಿಧ ರಾಜಕೀಯ ಶಕ್ತಿಗಳು ಪ್ರತ್ಯಕ್ಷವಾಗಿ ಪರೋಕ್ಷವಾಗಿ ಬಳಸಿಕೊಳ್ಳಲು ಪ್ರಯತ್ನ ನಡೆಸಿವೆ. ಆದ್ದರಿಂದ ವಿವಿಧ ಸಮಯದಲ್ಲಿ ವಿವಿಧ ರ್‍ಯಾಲಿಗಳು ಈ ರ್‍ಯಾಲಿಗಳ ಪರ ವಿರೋಧ ಹೇಳಿಕೆಗಳು ರೈತರ ಅತೃಪ್ತಿಯ ಪ್ರಯೋಜನ ತಮಗೆ ಮಾತ್ರ ಸಿಗಬೇಕು, ತಾವು ಮಾತ್ರ ಚುನಾವಣೆಯಲ್ಲಿ ಗೆದ್ದುಬರಲು ಅವಕಾಶವಾಗಬೇಕು ಎಂಬ ಪಕ್ಷ ಪಕ್ಷಗಳ ಪಕ್ಷಪಾತದ ಸ್ಪರ್ಧೆಯಿಂದಾಗಿ ರೈತರ ಅತೃಪ್ತಿ ಅದರ ಎಲ್ಲಾ ತೀವ್ರತೆ ಹಾಗೂ ಗಾತ್ರದಲ್ಲಿ ಪ್ರತಿಬಿಂಬಿತವಾಗಲು ತಡೆಯಾಗಿದೆ ಎನ್ನುವಾಗಲೂ ರೈತರನ್ನು ಬೀದಿಗಿಳಿಸಲು, ಅವರಲ್ಲಿ ಹೋರಾಟದ ಎಚ್ಚರ ತರಲು ಸಾಧಕವಾಗಿದೆ. ರೈತರಲ್ಲಿ ಅತೃಪ್ತಿ ತೀವ್ರವಾಗಿದೆ. ತಾನು, ನೀನು ಎಂಬ ಮೇಲಾಟ ಅದನ್ನು ಸೂಚಿಸುತ್ತದೆ. ಈ ಅಂಶವನ್ನು ರೈತರ ಬದಲಾಗಿ ರಾಜಕೀಯ ಶಕ್ತಿಗಳ ಮೇಲಾಟ, ಅವರ ಗುಂಪುಗಾರಿಕೆ ಇವುಗಳನ್ನು ಮಾತ್ರ ಮೇಲೆ ತೋರಿಸುತ್ತಾ ಈ ಮಸ್ಯೆಗಳಿಗೆ ಅನ್ಯಾಯ ಮಾಡಿವೆ. ಜೊತೆಗೆ ರೈತರ ಪರಿಸ್ಥಿತಿಯ ವಿಶ್ಲೇಷಣೆ ಮಾಡುವ, ಬಿಂಬಿಸುವ ಪ್ರಯತ್ನವನ್ನೂ ಪತ್ರಿಕೆಗಳು ನಡೆಸುತ್ತಿಲ್ಲ.

ಅದೇ ಸಂದರ್ಭದಲ್ಲಿ ಆಳುವ ಬಿಜೆಪಿ ಸರಕಾರದ ಭಾಗವಾಗಿ, ರೈತರನ್ನು ನಾಶ ಮಾಡುವ ಆಮದು ನೀತಿಯ ಹರಿಕಾರನಾಗಿ ಲೋಕಶಕ್ತಿಯ ನಾಯಕ ಶ್ರೀ ಹೆಗ್ಗಡೆಯವರು ರೈತರ ಮೇಲೆ ನೇಕಾರರನ್ನು ಎತ್ತಿ ಕಟ್ಟುತ್ತಾ ಚಳುವಳಿಯನ್ನು ಒಡೆಯುವ ನೀತಿಯನ್ನು ಒಂದು ಕಡೆ ಅನುಸರಿಸುತ್ತಿದ್ದಾರೆ. ಮತ್ತೊಂದು ಕಡೆ ಯಾವುದೇ ರ್‍ಯಾಲಿ, ಚಳುವಳಿಗೆ ಮಣಿಯುವುದಿಲ್ಲ. ಈ ರೈತರ ವಿರೋಧಿ, ಉದ್ಯಮ ವಿರೋಧಿ ಆಮದು ನೀತಿಯನ್ನು ಮುಂದುವರೆಸುತ್ತೇನೆ ಎಂದು ಹೇಳುತ್ತಾ ರೈತರಿಗೆ ಸವಾಲು ಹಾಕುತ್ತಿದ್ದಾರೆ. ಈ ಸವಾಲನ್ನು ರೈತರು ಸ್ವೀಕರಿಸಬೇಕು ಪಕ್ಷಭೇದವಿಲ್ಲದೆ ಒಗ್ಗೂಡಿ ಸಿಡಿದೇಳಬೇಕು.

ಪಿ.ಎಫ್., ಪೆನ್‌ಶನ್ ಫಂಡ್ ಹಣ ದುರಪಯೋಗ ಖಂಡನೆ

ಪಿ.ಎಫ್., ಪೆನ್‌ಶನ್ ಫಂಡ್‌ನ ಹಣದ ಮೇಲೆ ಹೆಚ್ಚಿನ ಆದಾಯ ಬರುವಂತೆ ಅದನ್ನು ಸ್ಟಾಕ್ ಮಾರ್ಕೆಟಿನಲ್ಲಿ ತೊಡಗಿಸಬೇಕೆಂದು ಸರ್ಕಾರ ನೇಮಿಸಿದ ತಜ್ಞ ಸಮಿತಿ-ದವೆ ಸಮಿತಿಯ ಶಿಫಾರಸುಗಳನ್ನು ಸಿಐಟಿಯು ಕಾರ್ಯದರ್ಶಿ ವರದರಾಜನ್ ಖಂಡಿಸಿದ್ದಾರೆ. ಪಿ.ಎಫ್ ಪಾವತಿಗೆ ಕಾರ್ಮಿಕರಿಗೆ ಆದಾಯ ತೆರಿಗೆ ವಿಧಿಸುವ, ಪಾವತಿಗೆ ಹೆಚ್ಚಿನ ನಿರ್ಬಂಧಗಳನ್ನು ಹೇರುವ ಶಿಫಾರಸುಗಳನ್ನು ಅವರು ಖಂಡಿಸಿದ್ದಾರೆ. CBT(ಸೆಂಟ್ರಲ್ ಬೋರ್ಡ್ ಆಫ್ ಟ್ರಸ್ಟೀಸ್) ಒಂದು ತ್ರಿಪಕ್ಷೀಯ ಬೋರ್ಡ್. ಅದೇ ಪಿ.ಎಫ್, ಪೆನ್ಷನ್ ಫಂಡನ್ನು ನಿರ್ವಹಿಸುತ್ತಿದ್ದು, ಲೇಬರ್ ಖಾತೆಯ ಕೆಳಗೆ ಕಾಲಸ ಮಾಡುತ್ತದೆ. ಹಾಗಿರುವಾಗ ಈ ಬಗ್ಗೆ ಹಣಕಾಸು ಖಾತೆ, ಸಾಮಾಜಿಕ ನ್ಯಾಯ ಖಾತೆ ದವೆ ಸಮಿತಿಯನ್ನು ಹೇಗೆ ನೇಮಿಸಲು ಸಾಧ್ಯ. ಪಿ.ಎಫ್, ಪೆನ್ಷನ್ ಫಂಡ್‌ಗಳ ನಿರ್ವಹಣೆ ಬಗ್ಗೇ ಏನೇ ಸುಧಾರಣೆ ಮಾಡಬೇಕಿದ್ದರೂ CBT ಅದನ್ನು ನಿರ್ಧರಿಸಬೇಕು ಎಂದು ಅವರು ಹೇಳಿದ್ದಾರೆ. ದವೆ ಸಮಿತಿಯ ಶಿಫಾರಸು ಪಾಲಿಸಿದರೆ ಕಾರ್ಮಿಕರ ಬೆವರಿನ ಹಣ ಮಾರುಕಟ್ಟೆಯ ಸಟ್ಟಾ ವ್ಯಾಪಾರದಲ್ಲಿ ತೊಡಗಿ ಪೋಲಾದಿತು ಎಂದು ಎಚ್ಚರಿಸಿದ್ದಾರೆ.

ಬ್ರೆಕ್ಟ್ ಶತಮಾನೋತ್ಸವ ನಾಟಕೋತ್ಸವ - 99

ಖ್ಯಾತ ಜರ್ಮನ್ ಎಡಪಂಥೀಯ ನಾಟಕಕಾರ ಬೆಟ್ರೋಲ್ಟ್ ಬ್ರೆಕ್ಟರ ಶತಮಾನೋತ್ಸವ ಸಂದರ್ಭದಲ್ಲಿ (ಫೆ. 21 ರಿಂದ 26) ಸಮುದಾಯ ಆತನ ನಾಟಕಗಳ ಉತ್ಸವವೊಂದನ್ನು ಹಮ್ಮಿಕೊಂಡಿದೆ. ನಾಟಕೋತ್ಸವದ ಆರಂಭದಿನದಂದು (ಫೆ. 21) '21ನೇ ಶತಮಾನದ ಸಾಂಸ್ಕೃತಿಕ ಸವಾಲುಗಳು' ಎಂಬ ಬಗ್ಗೆ ವಿಚಾರ ಸಂಕಿರಣವಿರುತ್ತದೆ. ಸಮುದಾಯದ ಹಲವು ಶಾಖೆಗಳಲ್ಲದೆ, ಲಖ್ನೋದ 'ಇಪ್ಟಾ' ಮತ್ತು ಹೈದರಾಬಾದ್‌ನ ಸುರಭಿ ತಂಡಗಳು ನಾಟಕ ಆಡಲಿವೆ.

ಸಮುದಾಯ ಬೆಂಗಳೂರು 'ಗುಂಡು ತಲೆ ಚೂಪು ತಲೆ ಪ್ರಸಂಗ', ಸಮುದಾಯ ಹರಪನಹಳ್ಳಿ 'ಸಂಕನಕಟ್ಟೆ ಚಂದ್ರಿ', ಸಮುದಾಯ ಗುಲ್ಬರ್ಗ 'ಅಧೋಲೋಕದಲ್ಲಿ ಲ್ಯೂಕ್ಲಾಸ್', ಇಪ್ಟಾ ಲಖ್ನೋದಿಂದ 'ಅಪವಾದ್ ಔರ್ ನಿಯಮ್' ಮತ್ತು ಸುರಭಿ ಹೈದಾರಾಬಾದ್‌ನಿಂದ 'ಬಸ್ತಿ ದೇವತಾ ಮಾರಮ್ಮ' ನಾಟಕಗಳನ್ನು ಆಡಲಿದ್ದಾರೆ.

ಸತಿ ಸಮರ್ಥಕರಿಗೆ ಬಹಿರಂಗ ಶಿಕ್ಷೆ

ನಾವು ಮನುಷ್ಯ ವಿರೋಧಿ ಎಂದು ವಿರೋಧಿಸುತ್ತಿರುವ ಕ್ರಿಯೆಗಳೆಲ್ಲ ಮತ್ತೆ ಹಿಂಬಾಗಿಲಿಂದ ಭಾರತದ ನೆಲದಲ್ಲಿ ಬರುತ್ತಿದೆ. ರೂಪ್ ಕನ್ವರ್‌ಗಳನ್ನು ಜೀವಂತವಾಗಿ ಬಲವಂತವಾಗಿ ಸುಟ್ಟು ಸಾಯಿಸಿ ಅವಳ ದೇವಸ್ಥಾನಗಳನ್ನು ಕಟ್ಟಲಾಗುತ್ತಿದೆ. ಇಡೀ ದೇಶದ ಮನುಷ್ಯರು ಅದನ್ನು ವಿರೋಧಿಸಿದ್ದಾರೆ.

"1857 ರಲ್ಲಿಯೇ ನಿಷೇಧಿಸಲ್ಪಟ್ಟ ಸತಿ ಪದ್ಧತಿಯ ಪರ ಮಾತುಗಳನ್ನಾಡಲು ಎಷ್ಟು ಧೈರ್ಯ ಈ ಜನರಿಗೆ. ನಮ್ಮೆಲ್ಲರ ಬಲವಾದ ವಿರೋಧ ವ್ಯಕ್ತಪಡಿಸಿ ಇವರ ಸೊಲ್ಲಡಗಿಸಬೇಕು" ಫೆ. 18 ರಂದು ನಗರದಲ್ಲಿ ನಡೆದ ಸತಿ ಸಮರ್ಥನಾ ವಿರೋಧೀ ಕಾರ್ಯಕ್ರಮದಲ್ಲಿ ಹೇಮಲತಾ ಮಹಿಷಿಯವರು ಆಡಿದ ಮಾತುಗಳು. ವಿಶ್ವ ಹಿಂದೂ ಪರಿಷತ್‌ನ 8ನೇ ಧರ್ಮ ಸಂಸದ್ ಇತ್ತೀಚೆಗೆ ಅಹ್ಮದಾಬಾದಿನಲ್ಲಿ ಸಭೆ ಸೇರಿ ಧರ್ಮರಕ್ಷಣೆಗೆ ಕೊಟ್ಟ ಆದೇಶಗಳಲ್ಲಿ ಸತಿ ಸಹಗಮನ ಪದ್ಧತಿ ಪುನರಾರಂಭ ಕೂಡ ಒಂದು. ಈ ವರ್ಷದ ಯುಗಾದಿ ಹಬ್ಬದ ದಿನದಿಂದ ಪ್ರಾರಂಭವಾಗುವ ಯುಗವನ್ನು ಹಿಂದೂ ಯುಗವೆಂದು ಕರೆಯಲು ನಿರ್ಧರಿಸಿ ಧರ್ಮ ರಕ್ಷಣೆಗೆ ಆದರ ಸನಾತನ ಪರಂಪರೆಯ ಉಳಿವಿಗಾಗಿ ಸತಿ ಪದ್ಧತಿಯಂತಹ ಧರ್ಮರಕ್ಷಣಾ ಪರಂಪರೆಯನ್ನು ಪುನರಾರಂಭಿಸಲು ಅಲ್ಲಿ ಸೇರಿದ್ದ 50 ಮಂದಿ ಸಾಧ್ವಿಯರ ವಿರೋಧದ ನಡುವೆಯೂ ಸೂಚನೆ ನೀಡಲಾಗಿದೆ. ಇದನ್ನು ವಿರೋಧಿಸಿ ನಗರದಲ್ಲಿ ಇದೇ 18 ರಂದು ಪ್ರತಿಭಟನಾ ಮೆರವಣಿಗೆ, ಬಹಿರಂಗ ಸಭೆ ಏರ್ಪಡಿಸಲಾಗಿತ್ತು. ಮೈಸೂರು ಬ್ಯಾಂಕ್ ವೃತ್ತದಿಂದ ಸಂಜೆ ಮೆರವಣಿಗೆ ಹೊರಟು ಪುರಭವನದ ಎದುರು ಬಹಿರಂಗ ಸಭೆ ನಡೆಸಲಾಯಿತು.

ಸಭೆಯನ್ನುದ್ದೇಶಿಸಿ ಮಾತನಾಡುತ್ತ ಡಾ. ಜಿ ರಾಮಕೃಷ್ಣ ರವರು ವಿ.ಎಚ್.ಪಿ. ಮತ್ತದರ ಪರಿವಾರಗಳನ್ನು ದುಷ್ಟ ಕೂಟವೆಂದು ವರ್ಣಿಸಿ ಮಹಿಳೆಯರನ್ನು ಬೆಂಕಿಗೆ ಹಾಕುವ ಬದಲು ಅವರೇ ಬೆಂಕಿಗೆ ಬೀಳಲಿ, ಅದರಿಂದ ದೇಶಕ್ಕೆ ಒಳ್ಳೆಯದಾಗುತ್ತದೆ. ಹುಚ್ಚರು ರಾಜ್ಯಭಾರ ಮಾಡುವವರ, ಗುರುಗಳು, ಗಾಂಪರ ಮಧ್ಯ ನಾವು ಇದ್ದೇವೆ. ಸಂಘಪರಿವಾರದ ಮಹಿಳೆಯರು, ಭಜರಂಗಿಯರು ಗಿರಿರಾಜ ಕಿಶೋರರ ಬಗ್ಗೆ ಏನು ತೀರ್ಮಾನ ಕೈಗೊಳ್ಳುತ್ತಾರೆ. ನೀವು ಸಾಯುತ್ತೀರಾ? ಅಥವಾ ಅವರನ್ನು ಸಾಯಿಸುತ್ತಿರಾ ಎಂದು ಪ್ರಶ್ನಿಸಿದರು. ಸಂಘ ಪರಿವಾರ ಹೇಳುವ ಪರಂಪರೆ ಈ ದೇಶದ ಪರಂಪರೆಯಲ್ಲ. ಅವರದು ದುಷ್ಟ ಪರಂಪರೆ ಎಂದು ಅವರು ಹೇಳಿದರು. ಮತಾಂಧರು ಹೆಣ್ಣುಮಕ್ಕಳಿಗೆ ಹೆದರುವಷ್ಟು ಬೇರೆ ಯಾರಿಗೂ ಹೆದರುವುದಿಲ್ಲ. ಮಹಿಳೆಯರು ಜಾಗೃತರಾದರೆ ಅವರನ್ನು ಯಾವ ಶಕ್ತಿಯೂ ತಡೆಯಲಾರದು ಎಂದು ಪತ್ರಕರ್ತ ರಂಜಾನ್‌ದರ್ಗಾ ಹೇಳಿದರು. ರೂಪ್ ಕನ್ವರ್‌ಳ ಕುರಿತು ಪ್ರಸ್ತಾಪಿಸಿದ ಅವರು ಜ್ಞಾನ ತಪ್ಪುವ ಪಾನೀಯ ಕುಡಿಸಿ ಬಲವಂತವಾಗಿ ಸಾಯಿಸುವ ಕ್ರಿಯೆಯ ಹಿಂದೆ ಅವಳಿಗೆ ಸೇರಬೇಕಾದ ಆಸ್ತಿ- ಹಣವನ್ನು ಲಪಟಾಯಿಸುವ ಸಂಚಿರುತ್ತದೆ. ಇಂತಹ ಸತಿಯ ಉದಾಹರಣೆಗಳು ಕರ್ನಾಟಕದ ಉತ್ತರ ಭಾಗದಲ್ಲಿ ಕಂಡು ಬರುವ ಸತಿಕಲ್ಲುಗಳಿಂದ ಇಲ್ಲಿಯೂ ಅಂತಹ ಹೀನ ಕೃತ್ಯಗಳ ಸುಳಿವನ್ನು ನೀಡುತ್ತವೆ.



ಸತಿ ಸಮರ್ಥನಾ ವಿರೋಧಿ ವೇದಿಕೆ ಯವರಿಂದ ಪ್ರತಿಭಟನೆ

ವಿಜಯನಗರ ಸಾಮ್ರಾಜ್ಯದ ಯುದ್ಧದ ಸಂದರ್ಭದಲ್ಲಿ ಯುದ್ಧದಲ್ಲಿ ಮಡಿದ ಯೋಧರ ಹೆಂಡತಿಯರನ್ನು ಚಿತೆಗೆ ಹಾಕುವ ಪರಿಪಾಠವಿತ್ತು. ಇಂತಹ ಕ್ರೂರ ಪದ್ಧತಿಯ ವಿರುದ್ಧ ಹೋರಾಡಬೇಕು. ಯಾವುದೇ ಕೋಮು ಗಲಭೆ, ಯುದ್ಧಗಳಲ್ಲಿ ಮೊದಲ ಬಲಿ ಮಹಿಳೆ ಎಂದು ಅದರ ವಿರುದ್ಧ ಹೋರಾಡಬೇಕು ಎಂದರು.

ಶೂದ್ರ ಶ್ರೀನಿವಾಸ ರವರು ಮಾತನಾಡಿ ಎಲ್ಲ ಜನಾಂಗಗಳನ್ನು ಪ್ರೀತಿಸುವುದೇ ಮಾನವೀಯತೆ, ಸುಳ್ಳುಗಳನ್ನು ಮತ್ತೆ ಮತ್ತೆ ಹೇಳುವುದರಿಂದ ಸತ್ಯವಾಗಿಸಬಹುದು ಎಂದು ಮೂಲ ಭೂತವಾದಿಗಳು ನಂಬಿದ್ದಾರೆ. ಅದನ್ನು ಮುರಿಯಲು ಹೋರಾಟ ಮಾಡೋಣ ಎಂದರು.

ನಗರಗೆರೆ ರಮೇಶ ಮಾತನಾಡಿ ಮೂಲ ಭೂತವಾದಿಗಳು ತಮ್ಮ ಬತ್ತಳಕೆಯಿಂದ ಒಂದೊಂದೇ ಬಾಣವನ್ನು ತೆಗೆಯುತ್ತಿದ್ದಾರೆ. ಅದರಲ್ಲಿ ಸತಿ ಒಂದು ಎಂದು ವಿವರಿಸಿ ಬಿಹಾರದ ನರಹತ್ಯೆಯನ್ನು ಪ್ರಸ್ತಾಪಿಸಿ ಅಲ್ಲಿಯ ರಣವೀರ ಸೇನೆಯವರು ಮಹಿಳೆಯರನ್ನು ಯಾಕೆ ಕೊಂದಿದರೆಂದರೆ ನಕ್ಸಲೀಯರಿಗೆ ಜನ್ಮಕೊಡುವ ಜನ ಅವರು ಎಂದು ಉತ್ತರಿಸುತ್ತಾರೆ. ಇವೆಲ್ಲದರ ವಿರುದ್ಧ ಹೋರಾಡಬೇಕೆಂದು ಕರೆನೀಡಿದರು.

ಜಿ.ಕೆ. ಗೋವಿಂದ ರಾವ್ ಮಾತನಾಡಿ ಕೋಮುವಾದಿ ಶಕ್ತಿಗಳಿಂದ ರಾಷ್ಟ್ರವನ್ನು ರಕ್ಷಿಸುವ ದೊಡ್ಡ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ, ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ, ಜೆ.ಡಬ್ಲೂಪಿ., ಎಸ್.ಎಫ್.ಐ., ಡಿ.ವೈ.ಎಫ್.ಐ., ಬೆಂಗಳೂರು ನಗರ ಜಿಲ್ಲಾ ಮಹಾಮಂಡಳಿಗಳ ಒಕ್ಕೂಟಗಳ ಜಂಟಿ ಆಶ್ರಯದಲ್ಲಿ ಸತಿ ಸಮರ್ಥನಾ ವಿರೋಧಿ ವೇದಿಕೆ ರಚಿಸಿ ನಡೆಸಿದ ಈ ಹೋರಾಟದಲ್ಲಿ ಎಲ್ಲ ಸಂಘಟನೆಗಳ ಪ್ರತಿನಿಧಿಗಳು ಮಾತನಾಡಿದರು. ವಿಮಲಾ ಕೆ.ಎಸ್, ಲಕ್ಷ್ಮಿ ಕೆ.ಎಸ್, ಜಯ ಮೇರಿ, ಶ್ರೀನಿವಾಸ ಹಾಗೂ ಶಾಂತಾ ನಾಗರಾಜ್ ಎಲ್ಲರ ಒಕ್ಕೊರಲಿನ ಧ್ವನಿ ಒಂದೇ. ಕೋಮುವಾದವನ್ನು ಮೆಟ್ಟುತ್ತೇವೆ, ಸತಿ ಸಮರ್ಥಕರನ್ನು ಅವರ ಮೌಲ್ಯಗಳನ್ನು ನಾಶಮಾಡುತ್ತೇವೆ.

ಮೆರವಣಿಗೆಯ ಮುಂಬಾಗದಲ್ಲಿ ಗಿ.ರಾ.ಕಿ. (ಗಿರಿರಾಜ ಕಿಶೋರ) ಮತ್ತು ಕೋಮುವಾದಿ ಮೌಲ್ಯಗಳ ಶವಯಾತ್ರೆ ನಡೆಸಿ ಅವರ ಪ್ರತಿಕೃತಿ ದಹನ ಮಾಡಲಾಯಿತು. ಸತಿ ಸಮರ್ಥನಾ ವಿರೋಧಿ ವೇದಿಕೆ ಮುಂದೆ ಇಂತಹ ಹಲವಾರು ಚಟುವಟಿಕೆ ನಡೆಸಲು ಉದ್ದೇಶಿಸಿದೆ.

ಆಟೋಚಾಲಕರ ಸಮಾವೇಶ

ರಾಯಚೂರು ತಾಲೂಕು ಆಟೋ ಚಾಲಕರ 2ನೇ ಸಮಾವೇಶವು ಫೆಬ್ರವರಿ 7 ರಂದು ಎಪಿಎಂಸಿ ಸಭಾಂಗಣಾದಲ್ಲಿ ನಡೆಯಿತು. ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಜವಳಿ ಸಚಿವರಾದ ಎಂ.ಎಸ್. ಪಾಟೀಲ್ ಸಮಾವೇಶ ಉದ್ಘಾಟಿಸಿದರು. ನಂತರ ಮಾತನಾಡಿದ ಸಚಿವರು ಆಶ್ರಯ ಯೋಜನೆಯಡಿ ಆಟೋ ಚಾಲಕರಿಗಾಗಿ ಶೇಕಡವಾರು ಮನೆ ನೀಡಲು ಪ್ರಯತ್ನಿಸುತ್ತೇವೆ. ಆಟೋ ಚಾಲಕರು ಸಹಕಾರ ಸಂಘ ರಚಿಸಿಕೊಂಡರೆ ನ್ಯಾಯ ಬೆಲೆ ಅಂಗಡಿ ಕೊಡುವ ಭರವಸೆ ನೀಡಿದರು.

ಅಧ್ಯಕ್ಷತೆ ವಹಿಸಿದ್ದ ಜೆ.ಸುರೇಶ್ ಮಾತನಾಡಿ ಆಟೋಚಾಲಕರ ಬೇಡಿಕೆ ಈಡೇರಿಸುವಂತೆ ತುಂಬಾದಿನಗಳಿಂದ ಮುಚ್ಚಿರುವ ಸ್ಪಿನಿಂಗ್ ಮಿಲ್ ತೆರೆಯುವಂತೆ ನಗರದ ರಸ್ತೆಗಳನ್ನು ಶೀಘ್ರವಾಗಿ ದುರಸ್ತಿಗೊಳಿಸುವಂತೆ ಒತ್ತಾಯಿಸಿದರು. ಸಮಾರಂಭದಲ್ಲಿ ಸಿಪಿಐ(ಎಂ)ನ ಕಾರಿಯಪ್ಪ ಅಚ್ಚೊಳ್ಳಿ, ಸಿಐಟಿಯುವಿನ ರಸೂಲ್‌ಅಮ್ಮ ಸಂಘದ ಅಧ್ಯಕ್ಷರಾದ ಜಾಜ್ ಹುಸೇನ್ ನಗರ ಯುವ ಜನತಾ ದಳದ ಎಸ್. ಜನಾರ್ಧನ ರೆಡ್ಡಿ ಹಾಗೂ ಎಸ್.ಎಫ್.ಐನ ವೀರಭದ್ರ ಹಾಗೂ ಡಿ.ವೈ.ಎಫ್.ಐ. ಸಿದ್ಧಲಿಂಗಯ್ಯ ಮಾತನಾಡಿದರು.

ಹೊಸ ಪದಾಧಿಕಾರಿಗಳು:

ಗೌರವ ಧ್ಯಕ್ಷರು-ಜಿ. ಸುರೇಶ್, ಅಧ್ಯಕ್ಷರು- ಜಾಜ್ ಹುಸೇನ್ ಉಪಾದ್ಯಕ್ಷರು ಕೆ. ವಿರೇಶ ರೆಡ್ಡಿ ಜಹೀರ್ ಅಮ್ಮದ್, ಬಾಷಾ ಖಾನ್, ಪ್ರ. ಕಾರ್ಯದರ್ಶಿ ಹಾಜಿ ಇಬ್ರಾಹಿಂ ಸಂಘಟನಾ ಕಾರ್ಯದರ್ಶಿ ಎಂ. ಉರುಕುಂದಿ ಸಹ ಕಾರ್ಯದರ್ಶಿಗಳು ಬಿ. ಲಕ್ಷ್ಮಣ ಶಿವಕಟ್ಟಿ ಮುನಿ ಎಂ.ಸಿ. ಶಿವಕುಮಾರ್. ಖಜಾಂಚಿ ಪಂಪಣ್ಣ

ವಿದ್ಯಾರ್ಥಿ-ಯುವಜನರಿಗಾಗಿ ರಾಜಕೀಯ ಶಿಬಿರ

ಜನವರಿ 24 ರಂದು ಮೈಸೂರು ಜಿಲ್ಲೆಯ ಹುಣಸೂರಿನಲ್ಲಿ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿ.ವೈ.ಎಫ್.ಐ) ಮತ್ತು ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ.)ಗಳ ಪ್ರಮುಖ ಮುಂದಾಳುಗಳಿಗೆ ರಾಜಕೀಯ ಶಿಬಿರವನ್ನು ಏರ್ಪಡಿಸಲಾಗಿತ್ತು.

ಇಲ್ಲಿನ ದೇವರಾಜ ಅರಸ್ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆದ ಶಿಬಿರದಲ್ಲಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿಯ ಸದಸ್ಯರು ಹಾಗೂ ಶಾಸಕರೂ ಆದ ಜಿ.ವಿ. ಶ್ರೀರಾಮ ರೆಡ್ಡಿಯವರು ಇಂದಿನ ರಾಜಕೀಯ ಪರಿಸ್ಥಿತಿಯಲ್ಲಿ ವಿದ್ಯಾರ್ಥಿ ಯುವಜನರ ಮುಂದಿರುವ ಪರ್ಯಾಯಗಳು ಎಂಬ ವಿಷಯದ ಮೇಲೆ ಉಪನ್ಯಾಸ ನೀಡಿ ಮಾತನಾಡುತ್ತಾ ಕೋಮುವಾದ ಇಂದು ದೇಶದ ಐಕ್ಯತೆಗೆ ಮಾರಕವಾಗಿ ಪರಿಣಮಿಸಿದೆ, ಕಾಂಗ್ರೆಸ್‌ನ ದುರಾಡಳಿತ ಮತ್ತು ಕೋಮು ಶಕ್ತಿಗಳೊಂದಿಗೆ ಹೊಂದಾಣಿಗೆ ಮಾಡಿಕೊಂಡಿದ್ದಾರ ಫಲವಾಗಿ ಕೋಮು ಶಕ್ತಿಗಳು ಅಧಿಕಾರಕ್ಕೆ ಬರುವಂತಾಗಿದೆ ಎಂದು ತಿಳಿಸಿದರು. ಮುಂದುವರಿದು ಮಾತನಾಡಿದ ಶ್ರೀರಾಮ ರೆಡ್ಡಿಯವರು ಇಂದಿನ ನೈಜ ಜಾತ್ಯತೀತ ರಾಜಕೀಯ ಶಕ್ತಿಗಳು ಮಾತ್ರ ಪರ್ಯಾಯವಾಗಬಲ್ಲದು. ಆದ್ದರಿಂದ ವಿದ್ಯಾರ್ಥಿ ಯುವಜನರು ನೈಜ ಜಾತ್ಯಾತೀತ ಶಕ್ತಿಗಳನ್ನು ಬೆಳೆಸಲು ಶ್ರಮಿಸಬೇಕೆಂದು ಕರೆ ನೀಡಿದರು.

ಮಧ್ಯಾಹ್ನದ ಅಧಿವೇಶನದಲ್ಲಿ 'ವಿದ್ಯಾರ್ಥಿ ಯುವಜನ ಚಳುವಳಿ ಮುಂದಿರುವ ತುರ್ತ ಕರ್ತವ್ಯಗಳು' ಎಂಬ ವಿಚಾರದಲ್ಲಿ ಉಪನ್ಯಾಸ ನೀಡಿ ಶ್ರೀರಾಮರೆಡ್ಡಿಯವರು ಬಂಡವಾಳ ಶಾಹಿ ಸಮಾಜದ ಬದಲಾವಣೆಯ ಕೆಲಸ ಮಾಡುವ ತಾತ್ವಿಕ ಬದ್ಧತೆಯನ್ನು ಮೈಗೂಡಿಸಿಕೊಳ್ಳಬೇಕು ಎಂದರು.

40 ಜನ ಪ್ರಮುಖ ವಿದ್ಯಾರ್ಥಿ ಯುವಜನರು ಭಾಗವಹಿಸಿದ ಈ ಶಿಬಿರದ ಅಧ್ಯಕ್ಷತೆಯನ್ನು ಡಿ.ವೈ.ಎಫ್.ಐ. ಜಿಲ್ಲಾ ಉಪಾಧ್ಯಕ್ಷರಾದ ಕೆ. ಬಸವರಾಜು ವಹಿಸಿದ್ದರು. ಸಿ.ಪಿ.ಐ.(ಎಂ) ಪ್ರಾದೇಶಿಕ ಸಮಿತಿಯ ಸದಸ್ಯರಾದ ಮೋಹನ್ ಕುಮಾರ್ ಉಪಸ್ಥಿತರಿದ್ದರು.

ಕೇಂದ್ರ, ರಾಜ್ಯ ಸರ್ಕಾರಗಳ ಕಣ್ಣು ಮುಚ್ಚಾಲೆ ಆತಂಕದಲ್ಲಿ ಅಂಗನವಾಡಿ ನೌಕರರು

ಅಂಗನವಾಡಿ ನೌಕರರಿಗೆ ಉದ್ಯೋಗದ ಭದ್ರತೆ ಹಾಗೂ ಕನಿಷ್ಠ ವೇತನ ನೀಡುವಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕಣ್ಣು ಮುಚ್ಚಾಲೆ ಆಡುತ್ತಿದ್ದು ಇಂದಿನ ಬೆಲೆ ಏರಿಕೆಯ ಪರಿಸ್ಥಿತಿಯಲ್ಲಿ ಅಂಗನವಾಡಿ ನೌಕರರು ಆತಂಕದ ಸ್ಥಿತಿಯಲ್ಲಿದ್ದಾರೆಂದು ಶಾಸಕರಾದ ಜಿ.ವಿ. ಶ್ರೀರಾಮ ರೆಡ್ಡಿ ವಿವರಿಸಿದರು. ಅವರು ತುಮಕೂರು ಜಿಲ್ಲೆಯ ಮಧುಗಿರಿ ತಾಲೂಕು ಅಂಗನವಾಡಿ ನೌಕರರ ಸಮ್ಮೇಳನ ಉದ್ಘಾಟನೆ ಮಾತನಾಡುತ್ತಿದ್ದರು. ಮುಂದುವರಿದ ಅವರು ಬಲಿಷ್ಠ ಸಂಘಟನೆಯೊಡನೆ ಪ್ರಬಲ ಹೋರಾಟದ ಮೂಲಕ ಬೇಡಿಕೆ ಈಡೇರಿಸಿಕೊಳ್ಳುವಂತೆ ನೌಕರರಿಗೆ ಕರೆನೀಡಿದರು.

ಸಮ್ಮೇಳನದಲ್ಲಿ ಎಸ್.ಎಫ್.ಐ. ರಾಜ್ಯಾಧ್ಯಕ್ಷ ಕೆ.ಎನ್. ಉಮೇಶ್, ಮಧುಗಿರಿ ಟೈಮ್ಸ್‌ನ ಟಿ.ಎಂ. ಉಮೇಶ್, ಕೋದಂಡರಾವ್, ಮುಜೀಬ್ ಮೊದಲಾದವರು ಮಾತನಾಡಿದರು.

ಇದೇ ಸಂದರ್ಭದಲ್ಲಿ ಪುರಸಭಾ ಸದಸ್ಯರುಗಳಾದ ಜ್ಯೋತಪ್ಪ, ಎಂ.ಪಿ.ಗಣೇಶ್, ರತ್ನಮ್ಮ ಅಂಗನವಾಡಿ ನೌಕರರ ಸಂಘದ ಅಲ್ಲಾ ಬಕಾಶ್ ಉಪಸ್ಥಿತರಿದ್ದರು. ಅಧ್ಯಕ್ಷತೆಯನ್ನು ಎಸ್.ಡಿ.ಪಾರ್ವತಮ್ಮ ವಹಿಸಿದ್ದರು. ಶಕುಂತಲಾ ನಿರೂಪಿಸಿದರೆ, ಸತ್ಯಾ ಸ್ವಾಗತಿಸಿ ಬಿ.ಎನ್. ಪ್ರೇಮ ವಂದಿಸಿದರು.

ಬಿಹಾರ ರಾಷ್ಟ್ರಪತಿ ಆಳ್ವಿಕೆ ವಿರೋಧಿಸಿ ಮೆರವಣಿಗೆ

ಬಿಹಾರದ ಸರ್ಕಾರವನ್ನು ವಜಾಗೊಳಿಸಿ ರಾಷ್ಟ್ರಪತಿ ಆಡಳಿತ ಜಾರಿ ಗೊಳಿಸಿರುವ ಕೇಂದ್ರದ ಬಿಜೆಪಿ ಸರ್ಕಾರದ ಕ್ರಮ ವಿರೋಧಿಸಲು ಸಿಪಿಐ-ಸಿಪಿಐ(ಎಂ) ನೀಡಿದ ಕರೆಯ ಮೇರೆಗೆ ಬಂಟ್ವಾಳ ತಾಲೂಕು ಸಮಿತಿ ಫೆ. 15 ರಂದು ಪ್ರತಿಭಟನಾ ಮೆರವಣಿಗೆ ನಡೆಸಿತು. ಬಿ ನಾರಾಯಣ, ಬಿ ಸಂಜೀವ ಬಂಗೇರ, ಶೀನ ಬಂಗೇರ, ಎ. ರಾಮಣ್ಣ ಮುಂಚೂಣಿಯಲ್ಲಿದ್ದರು.

ಪ್ರತಿಭಟನಾ ಗಾರರನ್ನುದ್ದೇಶಿಸಿ ಬಿ. ವಾಸುಗಟ್ಟಿ ಮಾತನಾಡಿದರು ನಂತರ ತಹಸಿಲ್ದಾರರಿಗೆ ಮನವಿ ನೀಡಿ ಕೇಂದ್ರ ಸರ್ಕಾರದ ಕ್ರಮವನ್ನು ಖಂಡಿಸಿದರು.

ಕೋಮು ಸೌಹಾರ್ದತೆಗಾಗಿ ಧರಣಿ

ಇತ್ತೀಚೆಗೆ ಅಲ್ಪ ಸಂಖ್ಯಾತರ ಮೇಲೆ ಭಜರಂಗದಳ, ಶಿವಸೇನೆ, ವಿಶ್ವ ಹಿಂದೂ ಪರಿಷತ್ ಹಾಗೂ ಸಂಘ ಪರಿವಾರದವರು ನಡೆಸುತ್ತಿರುವ ದಾಳಿ ದಬ್ಬಾಳಿಕೆ ವಿರೋಧಿಸಿ, ಜನವರಿ 26 (ರಂದು ಸಿಪಿಐ(ಎಂ) ಶ್ರೀರಾಮಪುರದ ಕಾರ್ಯಕರ್ತರು ಅಂಬೇಡ್ಕರ್ ಪ್ರತಿಮೆ ಬಳಿ ಕೋಮು ಸೌಹಾರ್ದತೆ ಧರಣಿ ನಡೆಸಿದರು. ಧರಣಿಕಾರರನ್ನು ದ್ದೇಶಿಸಿ ಸಿಪಿಐ (ಎಂ) ಬೆಂಗಳೂರು ಜಿಲ್ಲಾ ಕಾರ್ಯದರ್ಶಿ ಪಿ. ಜಗನ್ನಾಥ, ಪಿ.ಕೆ. ಸುಬ್ರಮಣಿ ಮಾತನಾಡಿ ದೇಶದ ಸಂಕಷ್ಟವಾದ ನಿರುದ್ಯೋಗ ಬಡತನ ನಿವಾರಿಸುವ ಬದಲು ಕೇಂದ್ರ ಸರ್ಕಾರ ಅಲ್ಪಾಸಂಖ್ಯಾತರ ಮೇಲಿನ ದಾಳಿಗೆ ಕುಮ್ಮಕ್ಕು ನೀಡುತ್ತಿದೆ ಎಂದರು. ಇದೇ ಸಂದರ್ಭದಲ್ಲಿ ಸ್ಥಳಿಯ ಮುಖಂಡರಾದ ಚಂದ್ರಶೇಖರ್, ರೇವಣ್ಣ, ಪ್ರಗತಿಪರರಾದ ವಿನೋದ ಮುಖಾಂತವರು ಮಾತನಾಡಿದರು. ಸ್ಥಳಿಯ ಸಮಿತಿ ಕಾರ್ಯದರ್ಶಿ ಗೋಪಾಲ ಕೃಷ್ಣರ ನೇತೃತ್ವದಲ್ಲಿ ಧರಣಿ ಸತ್ಯಾಗ್ರಹ ನಡೆಯಿತು.

ಹರಿಯಿತು ನೀರು ನಿಂತಿತು ಧರಣಿ

ಸಿಂಧಗಿ: ಇಂಡಿ ಉಪನಾಲೆ 64 ನೇ ಕಿ.ಮೀ. ವರೆಗೆ ನೀರು ಬಿಡುವಂತೆ ಒತ್ತಾಯಿಸಿ ಸಿಂದಗಿಯ ಮೋರಟಗಿಯಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ ಕಾರ್ಯಕರ್ತರ ಧರಣಿ ಸತ್ಯಾಗ್ರಹ 20 ಸಾವಿರ ಎಕರೆ ಜಮೀನಿಗೆ ನೀರುಹರಿದ ನಂತರ ಜನವರಿ 21 ರಂದು ಮುಕ್ತಾಯ ಗೊಂಡಿತು.

ಅತಿವೃಷ್ಟಿಯ ಹಾನಿಗೆ ಪರಿಹಾರ, ರಸ್ತೆದುರಸ್ಥಿ ಬಸ್‌ಗಳ ಪುನರಾರಂಭ ವಿದ್ಯುತ್ ವಿನಿಮಯ ಕೇಂದ್ರದ ಸ್ಥಾಪನೆ, ಕೃಷಿ ಕೂಲಿಗಾರರಿಗೆ ಕೂಲಿಗಾಗಿ ಕಾಳು ಯೋಜನೆ ಜಾರಿ ಹಾಗೂ ನಾಲೆ ದುರಸ್ಥಿಗೊಳಿಸುವುದು ಸೇರಿದಂತೆ ಹಲವು ಬೇಡಿಕೆಗಳನ್ನಿಟ್ಟು ಧರಣಿ ಸತ್ಯಾಗ್ರಹ ಆರಂಭವಾಗಿತ್ತು.

ಜನವರಿ 21 ರಂದು ಧರಣಿ ಸ್ಥಳಕ್ಕೆ ಆಗಮಿಸಿದ ತಹಶಿಲ್ದಾರರು ಇಂಡಿ ಉಪನಾಲೆಗೆ ನೀರು ಬಿಡುಗಡೆ ಹಾಗೂ ನಾಲೆ ದುರಸ್ಥಿಗೆ 10 ಲಕ್ಷ ರೂ ಬಿಡುಗಡೆ ಗೊಳಿಸಿದರು. ಉಳಿದ ಬೇಡಿಕೆಗಳಿಗೆ ಸಂಬಂಧಿಸಿದಂತೆ ಫೆಬ್ರವರಿ 15 ರ ಒಳಗೆ ಕ್ರಮ ಕೈಗೊಳುವ ಭರವಸೆ ನೀಡಿದರು.

ಬಿಪಿಎಲ್ ಕಾರ್ಮಿಕರ ಬೇಡಿಕೆ ಈಡೇರಿಸಲು ಹಂಚು ಕಾರ್ಮಿಕರ ಒತ್ತಾಯ

ಕಳೆದ ಮೂರು ತಿಂಗಳುಗಳಿಂದ ಹೋರಾಟದಲ್ಲಿರುವ ಬಿಪಿಎಲ್ ಕಾರ್ಮಿಕರ ನ್ಯಾಯಯುತ ಬೇಡಿಕೆಗಳನ್ನು ಈಡೇರಿಸುವಂತೆ ಉತ್ತರ ಕನ್ನಡ ಜಿಲ್ಲಾ ಹಂಚು ಕಾರ್ಮಿಕರು ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಕಾರ್ಮಿಕರ ಸಂಘಕ್ಕೆ ಮಾನ್ಯತೆ ನೀಡಿ ಅವರ ಜೊತೆ ಮಾತುಕತತೆ ನಡೆಸಿ ಅವರ ಬೇಡಿಕೆಗಳನ್ನು ಪರಿಗಣಿಸದಿರುವ ಬಿಪಿಎಲ್ ಮಾಲೀಕನ ಮೇಲೆ ಮೊಕದ್ದಮೆ ದಾಖಲಿಸ ಬೇಕಾದ ರಾಜ್ಯ ಸರ್ಕಾರ ಕಾರ್ಮಿಕರ ಮೇಲೆ ಸುಳ್ಳು ಕೇಸು ಹಾಕಿಸಿ ನೂರಾರು ಮಹಿಳಾ ಕಾರ್ಮಿಕರನ್ನು ಜೈಲಿಗೆ ಕಳುಹಿಸಿರುವ ಕ್ರಮವನ್ನು ಖಂಡಿಸಿ ಉ. ಕನ್ನಡ ಜಿಲ್ಲಾ ಹಂಚು ಕಾರ್ಮಿಕರ ಸಂಘ ಮುಖ್ಯ ಮಂತ್ರಿಗಳಿಗೆ ಪತ್ರ ಬರೆದಿದೆ.

ಬಿಪಿಎಲ್ ಕಾರ್ಮಿಕರ ನ್ಯಾಯಯುತ ಹೋರಾಟಕ್ಕೆ ಸಂಪೂರ್ಣ ಬೆಂಬಲ ವ್ಯಕ್ತ ಪಡಿಸಿರುವ ಹಂಚು ಕಾರ್ಮಿಕರು, ಅಗತ್ಯ ಬಿದ್ದಲ್ಲಿ ಹಂಚು ಕಾರ್ಮಿಕರು ಅವರ ಬೆಂಬಲವಾಗಿ ಹೋರಾಟಕ್ಕಿಳಿಯ ಬೇಕಾಗುತ್ತದೆ ಎಂದು ಸರ್ಕಾರವನ್ನು ಎಚ್ಚರಿಸಿದೆ.

ಈ ವರ್ಷ ಬಜೆಟ್ ಹೇಗಿರಬೇಕು?

ಸೀತಾರಾಂ ಯೆಚೂರಿ

ಬಿಜೆಪಿ ನೇತೃತ್ವದ ಸರಕಾರದ ಹಣಕಾಸು ಮಂತ್ರಿಗಳು ತಮ್ಮ ಎರಡನೇ ಬಜೆಟ್ ಸಿದ್ಧತೆ ನಡೆಸಿದ್ದಾರೆ. ಈ ಬಜೆಟ್ ಹೇಗಿರುತ್ತದೆ ಎಂಬ ಬಗ್ಗೆ ಎಂದಿನಂತೆ ಊಹಾ-ಪೋಹ ಸಾಗಿದೆ. ಹಣಕಾಸುಮಂತ್ರಿಗಳೇ "ಇದು ಬಹಳ ಕಠಿಣವಾಗಿರುತ್ತದೆ" ಎಂದು ಸಂಕೇತ ನೀಡಿದ್ದಾರೆ. 'ಕಠಿಣ' ಎಂದರೆ ಜನಸಾಮಾನ್ಯರಿಗೆ ಕಠಿಣ ಎಂದರ್ಥ ಸಿರಿವಂತರಿಗಲ್ಲ, ಅದಿರಲಿ, ಅವರ ಹಿಂದಿನ ಬಜೆಟ್‌ನ ಪರಿಣಾಮ ಏನು? ಇದರಿಂದಾಗಿ ಮುಂದಿನ ಬಜೆಟ್ ಹೇಗಿರಬೇಕು? ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯರಾದ ಸೀತಾರಾಂ ಯಚೂರಿಯವರು ಇತ್ತೀಚೆಗೆ ಪ್ರಕಟಿಸಿದ ಅಂಕಿ ಅಂಶಗಳ ಆಧಾರದಲ್ಲಿ ವಿಶ್ಲೇಷಿಸಿದ್ದಾರೆ.

ದೇಶದ ಆರ್ಥಿಕವನ್ನು ಕುರಿತ ಡಿಸೆಂಬರ್ 1998ರ ವರೆಗಿನ ಅಂಕಿ-ಅಂಶಗಳನ್ನು ಮಹಾಲೆಕ್ಕ ಪರಿಶೋಧಕರು (CAG) ಇತ್ತೀಚೆಗೆ ಪ್ರಕಟಿಸಿದ್ದಾರೆ. ಇವು ನಾವು ಈ ಹಿಂದೆ ಹೇಳಿದ್ದನ್ನು ಸಾಬೀತು ಪಡಿಸಿವೆ. ಈ ಹಣಕಾಸು ಮಂತ್ರಿ ತನ್ನ ಹಿಂದಿನ ಅವತಾರದಲ್ಲಿ ಭಾರತದ ಚಿನ್ನವನ್ನು ಅಡವಿಟ್ಟಿದ್ದರು. ಈಗಿನ ಅವತಾರದಲ್ಲಿ (ಬಹುಶಃ ಅವರ ಕೊನೆಯ ಅವತಾರ ವಾಗ ಬಹುದೇನೋ) ದೇಶವನ್ನೇ ಅಡವಿಡುತ್ತಾರೆ ಎಂದು ಹೇಳಿದ್ದವು. ದುರದೃಷ್ಟವಶಾತ್ ಅದೀಗ ನಿಜವಾಗುತ್ತಿದೆ.

ಹಣಕಾಸು ಕೊರತೆ ಡಿಸೆಂಬರ್ ವೇಳೆಗೆ 73434 ಕೋಟಿ ರೂ.ಗಳಿಗೇರಿದೆ. ಕಳೆದ ವರ್ಷ ಈ ಅವಧಿಯಲ್ಲಿ ಇದು 41463 ಕೋಟಿ ರೂ. ಗಳಿತ್ತು. ಮಾರ್ಚ್ ವೇಳೆಗೆ ಇದು 91025 ಕೋಟಿ ರೂ.ಗಳಾಗುವುದು ಎಂದು ಅಂದಾಜು ಮಾಡಲಾಗಿದೆ.

ಮೋಜಿಗೆ ದುಂದುವೆಚ್ಚ

ಇದಕ್ಕೆ ಕಾರಣ ಪ್ರಸಕ್ತ ಸರಕಾರದ ದುಂದುವೆಚ್ಚ ಎಂಬುದೂ ಈ ಅಂಕಿ ಅಂಶಗಳಿಂದ ಕಂಡು ಬರುತ್ತದೆ. ಕಳೆದ ಬಜೆಟ್ಟಿನ ಖರ್ಚಿಗೂ 13.89 ಹೆಚ್ಚಳ ವಾಗಿತ್ತೆಂದು ಹೇಳಲಾಗಿತ್ತು. ಆದರೆ ವಾಸ್ತವವಾಗಿ ಅದು ದ್ವಿಗುಣಗೊಂಡಿದೆ. 26% ಆಗಿದೆ. ಈ ಖರ್ಚು ಕೂಡಾ ಯಾವ ತರದ್ದು? ಯೋಜನೇತರ ವೆಚ್ಚ 28.48% ಏರಿದೆ, ಯೋಜನಾ ವೆಚ್ಚ 18-6% ದಷ್ಟು ಮಾತ್ರ. ಆದರೆ ಈ ಸರಕಾರ ಖರ್ಚು ಮಾಡಿದ್ದು ಸಾಮಾಜಿಕ, ಆರ್ಥಿಕ ಅಗತ್ಯಗಳನ್ನು ಪೂರೈಸಲಿಕ್ಕಲ್ಲ. ಯಾವುದೇ ಪರಿವೆಯಿಲ್ಲದೆ ಮಾಡಿರುವ ದುಂದುವೆಚ್ಚವದು. ಈ ವಿಪರೀತ ದುಂದುವೆಚ್ಚದಲ್ಲಿ ಸರಕಾರದ ದುರಾಡಳಿತದೊಂದಿಗೆ ಏಕಪಕ್ಷೀಯವಾಗಿ ನಡೆಸಿದ ಪರಮಾಣು ಸ್ಫೋಟಕ್ಕಾಗಿಯೂ ಬಹಳ ಹಣ ಹೋಗಿದೆ.

ವಿದೇಶೀ ಮೂಲಗಳಿಂದ 2336 ಕೋಟಿ ಬರುತ್ತದೆಂದು ಅಂದಾಜು ಮಾಡಲಾಗಿತ್ತು. ಆದರೆ ವಾಸ್ತವವಾಗಿ ದೇಶದ 1283 ಕೋಟಿ ರೂ ಹೊರ ಹೋಗಿದೆ ಎಂಬುದು ಈ ಅಂಕಿ-ಅಂಶಗಳಿಂದ ಕಾಣುತ್ತದೆ. ದೇಶದೊಳಗೆ ಬಂದ ಹಣಕ್ಕಿಂತ ವಿದೇಶಿ ಸಾಲ ಮರುಪಾವತಿ ಮತ್ತು ಬಡ್ಡಿ ತೆರಲೆಂದು ದೇಶದಿಂದ ಹೊರ ಹೋದ ಹಣವೇ ಹೆಚ್ಚು ಎಂದು ಇದರರ್ಥ. ದೇಶವನ್ನು ಎಲ್ಲಿಯುವರೆಗೆ ಒತ್ತೆಯಿಡಲಾಗಿದೆ ಎಂಬುದನ್ನು ಇದು ತೋರಿಸುತ್ತದೆ.

ಸರಕಾರದ ಆದಾಯವೂ ಬಜೆಟ್ ಅಂದಾಜಿಗಿಂತ ಬಹಳ ಕಮ್ಮಿಯಿದೆ. ಸುಮಾರು 60% ರಷ್ಟು ಉಳಿದ ಮೂರು ತಿಂಗಳಲ್ಲಿ ಉಳಿದ 40% ಸರಿಪಡಿಸುವ ಸಾಧ್ಯತೆ ಇಲ್ಲವೇ ಇಲ್ಲ. ಅಂದರೆ ಒಂದೆಡೆ ಸರಕಾರದ ದುಂದುವೆಚ್ಚ ವಿಪರೀತ ಹೆಚ್ಚಿದೆ ಇನ್ನೊಂದೆಡೆ ಅದರ ಆದಾಯ ಇಳಿದಿದೆ. ತನ್ನ ದುಂದುವೆಚ್ಚಕ್ಕಾಗಿ ಅದು ದೊಡ್ಡ ಪ್ರಮಾಣದಲ್ಲಿ ಮಾರುಕಟ್ಟೆಯಿಂದ ಸಾಲ ತರುತ್ತಿದೆ. ದೇಶದ ಕೈಗಾರಿಕಾ ಬೆಳವಣಿಗೆಯು, ಆಹಾರ ಧಾನ್ಯ ಉತ್ಪಾದನೆಯ ಬೆಳವಣಿಗೆಯ ಪ್ರಮಾಣ ಇಳಿಯುತ್ತಿರುವಾಗ ಸರಕಾರ ಇಂತಹ ದುಂದುವೆಚ್ಚ ನಡೆಸುತ್ತಿರುವುದು ಕ್ರಿಮಿನಲ್ ಅಪರಾಧ.

ಹೀಗೆ ಈಗ ಎಂತಹ ಸ್ಥಿತಿಯೆಂದರೆ ಆರ್ಥಿಕ ಇಳಿಮುಖವಾಗುತ್ತಿರುವಾಗ ಸರಕಾರ ಯಾವ ಪರಿವೆಯೂ ಇಲ್ಲದೆ ತನ್ನ ಸಾಮರ್ಥ್ಯ ಮೀರಿ ಖರ್ಚು ಮಾಡಿ ಮೋಜು ಮಾಡುತ್ತದೆ.

ದುಡ್ಡಿದ್ದವರಿಗೆ ಬೇಕಿಲ್ಲ
ಬೇಕಿದ್ದವರಿಗೆ ದುಡ್ಡಿಲ್ಲ

ಇಂತಹ ಪರಿಸ್ಥಿತಿಯಲ್ಲಿ ಮುಂದಿನ ಬಜೆಟ್ ಹೇಗಿರಬೇಕಾಗಿದೆ? ಇದಕ್ಕೆ ಉತ್ತರ ಕಂಡು ಕೊಳ್ಳಬೇಕಾದರೆ ಮೊದಲು ಮೇಲೆ ಹೇಳಿದ ಪರಿಸ್ಥಿತಿ ಏಕೆ ಉಂಟಾಗಿದೆ ಎಂಬುದನ್ನು ಪರಿಶೀಲಿಸ ಬೇಕಾಗುತ್ತದೆ.

ವಿದೇಶದಿಂದ ಹೆಚ್ಚಿನ ಬಂಡವಾಳ ಆಕರ್ಷಿಸಿದರೆ ದೇಶೀ ಬಂಡವಾಳಶಾಹಿಗಳಿಗೆ ಕಡಿಮೆ ಖರ್ಚಿನಲ್ಲಿ ಬಂಡವಾಳ ದೊರೆಯುವಂತಾದರೆ ಆರ್ಥಿಕ ಸುಧಾರಿಸುತ್ತದೆ ಎಂಬುದು ಉದಾರೀಕರಣ ವಾದಿಗಳ ತರ್ಕ. ಆದರೆ ಭಾರತದ ಆರ್ಥಿಕದ ಈಗಿನ ಪರಿಸ್ಥಿತಿಯೆಂದರೆ ದುಡ್ಡಿದ್ದವರಿಗೆ ಇಲ್ಲಿ ಉತ್ಪಾದಿತ ಸರಕುಗಳು ಬೇಕಿಲ್ಲ ಸರಕು ಬೇಕಾದವರ ಬಳಿಯಲ್ಲಿ ದುಡ್ಡಿಲ್ಲ.

ಮುಂಬರುವ ಬಜೆಟ್ ಈ ಪರಿಸ್ಥಿತಿಯನ್ನು ಎದುರಿಸಬೇಕು.

● ಮೊದಲನೆಯದಾಗಿ ಸರಕಾರ ಸಾಮಾಜಿಕ -ಆರ್ಥಿಕ ಮೂಲರಚನೆಗಳಲ್ಲಿ ತೊಡಗಿರುವ ಬಂಡವಾಳ ಹೆಚ್ಚಬೇಕು. ಇದರಿಂದ ಉದ್ಯೋಗವಕಾಶವು ನಿರ್ಮಾಣವಾಗುತ್ತದೆ. ಒಳಗಿನ ಮಾರುಕಟ್ಟೆಯೂ ನಿರ್ಮಾಣವಾಗುತ್ತದೆ.

● ಎರಡನೆಯದಾಗಿ ಇದಕ್ಕಾಗಿ ಸರಕಾರ ತನ್ನ ಆದಾಯ ಹೆಚ್ಚಿಸಬೇಕು. ಇದಕ್ಕಾಗಿ ತೆರಿಗೆ ಆಧಾರವನ್ನು ವಿಸ್ತರಿಸಬೇಕು. ಗ್ರಾಮೀಣ ಕಾರ್ಮಿಕರ ಮೇಲೆ ತೆರಿಗೆ ಹಾಕಬೇಕು ಆಮದು-ರಫ್ತು ವ್ಯಾಪಾರದಲ್ಲಿನ ಅನಿಯಮಿತತೆಗಳಿಂದ ಸಾವಿರಾರು ಕೋಟಿ ರೂ.ಗಳು ಸೋರಿ ಹೋಗುವುದನ್ನು ನಿಲ್ಲಿಸಬೇಕು. ರಾಷ್ಟ್ರೀಕೃತ ಬ್ಯಾಂಕುಗಳಿಂದ ದೊಡ್ಡ ಉದ್ಯಮಿಗಳು ಪಡೆದು ಬಾಕಿಯಿಟ್ಟುಕೊಂಡು ಮನ್ನಾ ಮಾಡಿರುವ ಸಾಲಗಳ ವಸೂಲಾತಿಗೆ ಕ್ರಮ ಕೈಗೊಳ್ಳಬೇಕು. ಇಧು ಸುಮಾರು 40,000 ಕೋಟಿ ರೂ. ಗಳಿರಬೇಕೆಂದು ಅಂದಾಜು ಮಾಡಲಾಗಿದೆ.

● ಮೂರನೆಯದಾಗಿ ಆದಾಯ ಸಂಗ್ರಹಣೆಗೆ ನೇರ ತೆರಿಗೆಗಳನ್ನು ಹೆಚ್ಚಿಸಬೇಕೆ ಹೊರತು ಪರೋಕ್ಷ ತೆರಿಗೆಗಳನ್ನಲ್ಲ, ಏಕೆಂದರೆ ಪರೋಕ್ಷ ತೆರಿಗೆಗಳು ಸರಕುಗಳ ಬೆಲೆ ಹೆಚ್ಚಿಸಿ ಜನಗಳ ಕೊಳ್ಳುವ ಶಕ್ತಿಯನ್ನು ಇನ್ನಷ್ಟು ಕುಗ್ಗಿಸುತ್ತದೆ.

● ಕೊನೆಯದಾಗಿ ಕೆಲಸಕ್ಕಾಗಿ ಆಹಾರ ಮತ್ತು ನವೀನ ಮಾದರಿ ಕಾರ್ಯಕ್ರಮಗಳ ಮೂಲಕ ಹಾಗೂ ಗ್ರಾಮೀಣ ಮಾರುಕಟ್ಟೆಗಳನ್ನು ಬೃಹತ್ ಪ್ರಮಾಣದಲ್ಲಿ ವಿಸ್ತರಿಸಿ ಗ್ರಾಮೀಣ ಉದ್ಯೋಗವಕಾಶವನ್ನು ಮತ್ತು ಆಂತರಿಕ ಬೇಡಿಕೆಗಳನ್ನು ಹೆಚ್ಚಿಸಬೇಕು.

ವಿಷ ಚಕ್ರದಿಂದ
ಹೊರ ಬರುತ್ತದೆಯೇ?

ಆದರೆ ಪ್ರಸ್ತುತ ಸರಕಾರ ಹೀಗೆ ಮಾಡುತ್ತದೆಯೇ? ಅದರ ಇದುವರೆಗಿನ ಪ್ರವೃತ್ತಿಯನ್ನು ಕಂಡರೆ ಬಜೆಟ್ ಈ ದಿಕ್ಕನ್ನು ಹಿಡಿಯುವ ಸಾಧ್ಯತೆ ಇಲ್ಲವೆನ್ನಬಹುದು. ಈ ಸರಕಾರ ಕೊರತೆಯನ್ನು ತಗ್ಗಿಸುವ ಹೆಸರಲ್ಲಿ ತನ್ನ ಖರ್ಚುಗಳನ್ನು ಇಳಿಸುವ ನೆಪದಲ್ಲಿ ಇನ್ನಷ್ಟು ಸಬ್ಸಿಡಿಗಳನ್ನು ಖೋತಾ ಮಾಡುವ ಬಗ್ಗೆಯಷ್ಟೇ ಯೋಚಿಸ ಬಲ್ಲದು. ಇದು ಈಗಿನ ಕೈಗಾರಿಕಾ ಹಿಂಜರಿತವನ್ನು ಇನ್ನಷ್ಟು ಉಲ್ಬಣ ಗೊಳಿಸುತ್ತದೆ.

ಹೀಗೆ ನಾವೊಂದು ವಿಷ ಚಕ್ರದಲ್ಲಿ ಸಿಲುಕಿಕೊಂಡಿದ್ದೇವೆ. ಹಣಕಾಸು ಕೊರತೆ ತಗ್ಗಿಸಲು ಸರಕಾರ ತನ್ನ ಖರ್ಚನ್ನು ತಗ್ಗಿಸುತ್ತದೆ. ಸರಕಾರದ ಖರ್ಚು ಕಮ್ಮಿಯಾದರೆ ಆಂತರಿಕ ಬೇಡಿಕೆ ಕುಗ್ಗುತ್ತದೆ. ಇದರಿಂದ ಆರ್ಥಿಕ ಚಟುವಟಿಕೆ ಕುಗ್ಗುತ್ತದೆ; ಅದರಿಂದ ಸರಕಾರದ ಆದಾಯ ಕುಗ್ಗುತ್ತದೆ. ಅದರಿಂದಾಗಿ ಮುಂದಿನ ವ್ಯಾಪಾರ ಆದಾಯ ಮತ್ತು ಖರ್ಚಿನಲ್ಲಿನ ಅಂತರ ಹೆಚ್ಚುತ್ತದೆ. ಅದರಿಂದಾಗಿ ಸರಕಾರ ತನ್ನ ಖರ್ಚನ್ನು ಇನ್ನಷ್ಟು ಕಡಿತ ಮಾಡುತ್ತದೆ. ಈ ಚಕ್ರ ದೇಶವನ್ನು ಒತ್ತೆಯಿಡುವವರೆಗೂ, ದೇಶದ ಬಹುಪಾಲು ಜನ ದಟ್ಟದರಿದ್ರರಾಗುವವರೆಗೂ ಮುಂದು ವರಿಯುತ್ತದೆ. ಈ ದಿಕ್ಕನ್ನು ಬದಲಿಸಬೇಕು. ಹಾಗೆ ಬದಲಿಸ ಬೇಕಾದರೆ ಬಜೆಟ್‌ನ ಒತ್ತು ಈ ಮೊದಲು ಹೇಳಿದಂತಿರಬೇಕು. ಸರಕಾರ ಅದನ್ನು ಮಾಡಲು ಸಿದ್ಧವಿಲ್ಲದಿದ್ದರೆ, ಜನತೆ ಅದನ್ನು ಹೊರಹಾಕಬೇಕು.

ಅರ್ಥಶಾಸ್ತ್ರಜ್ಞರು ಏನನ್ನುತ್ತಾರೆ?

ಬಿಜೆಪಿ ನೇತೃತ್ವದ ಸರಕಾರ ದೇಶದ ಆರ್ಥಿಕದ ಪ್ರಮುಖ ಸಮಸ್ಯೆಗಳನ್ನು ಪರಿಹರಿಸುತ್ತದೆ ಅಥವಾ ತಡೆಯುಲಾದರೂ ಅದಕ್ಕೆ ಸಾಧ್ಯವಾಗುತ್ತದೆ ಎಂದೇನೂ ನಿರೀಕ್ಷೆಯಿರಲಿಲ್ಲ. ಆದರೆ ಗಮನಾರ್ಹ ಸಂಗತಿಯೆಂದರೆ ಈ ಸರಕಾರ ತನಗೆ ದೊರೆತ ಅಲ್ಪ ಅವಧಿಯಲ್ಲೂ ಈ ಪ್ರತಿಯೊಂದು ಸಮಸ್ಯೆಯನ್ನು ಇನ್ನಷ್ಟು ಹದಗೆಡಿಸಿದೆ. ಅಷ್ಟೇ ಅಲ್ಲ, ಈ ಪಟ್ಟಿಗೆ ಅದು ಸಂಪೂರ್ಣ ಹೊಸ ಸಮಸ್ಯೆಗಳನ್ನು ಸೇರಿಸಿದೆ. ಈ ಮೂಲಕ ಒಂದೆಡೆ ಮಿಲಿಟರೀ ಪರಮಾಣು ಕನಸು ಪ್ರದರ್ಶಿಸುವ ಇನ್ನೊಂದೆಡೆ ಅಂತರಾಷ್ಟ್ರೀಯ ಬಂಡವಾಳಕ್ಕೆ ಶರಣಾಗುವ ತನ್ನದೇ ಆದ ವಿಚಿತ್ರ ಮಿಶ್ರಣದ ಆರ್ಥಿಕ ದುಷ್ಪರಿಣಾಮಗಳನ್ನು ಅದು ಬಿಂಬಿಸಿದೆ......

.... ಈಗ ಸಿಗುವ ಸಾಕ್ಷ್ಯಾಧಾರಗಳಿಂದ ಹೇಳಬೇಕಾದರೆ ಹಣಕಾಸು ಇಲಾಖೆಯ ಬಳಿ ತುರ್ತು ಸಮಸ್ಯೆಗಳಾದ ಆರ್ಥಿಕ ಅಸಮತೋಲನ, ಕೈಗಾರಿಕಾ ಹಿಂಜರಿತ ಹಾಗೂ ವಿದೇಶೀ ವಿನಿಮಯ ಕೊರತೆಯನ್ನು ಹೇಗೆ ಎದುರಿಸಬಹುದೆಂಬ ಬಗ್ಗೆ ಹೊಸ ವಿಚಾರಗಳೇನೂ ಇದ್ದಂತಿಲ್ಲ. ಹೀಗಿರುವಾಗ ಈ ಸರಕಾರ ಈ ಹಿಂದೆ ಕಾಂಗ್ರೆಸ್(ಐ) ತೋರಿಸುತ್ತಿದ್ದ ಹಣಕಾಸು ತಂತ್ರಗಳನ್ನೇ ಅವಲಂಬಿಸ ಬೇಕಾಗಿ ಬಂದಿದೆ.

ಹಣಕಾಸು ಮಂತ್ರಿಗಳ ಬಜೆಟ್ ಮುನ್ನ ದಾವೋಸ್‌ನ 'ವಿಶ್ವ ಆರ್ಥಿಕ ವೇದಿಕೆ'ಯ ಸಭೆಗೆ ಧಾವಿಸಿದ್ದನ್ನು ದೊಡ್ಡದಾಗಿ ಹೇಳಿಕೊಳ್ಳಲಾಗುತ್ತಿದೆ. ಆದರೆ ಈ ಬಾರಿ ಬಜೆಟ್ ವೆಚ್ಚವನ್ನು ಸಮ್ಮಿಶ್ರ ಸರಕಾರ ಕಳೆದ ಕೆಲವು ತಿಂಗಳಲ್ಲಿ ತಾನು ಅತ್ಯಂತ ಹೆಚ್ಚು ದೃಢವಾದ ಆರ್ಥಿಕ ಉದಾರೀಕರಣವಾದಿ ಎಂದು ತೋರಿಸಿಕೊಳ್ಳಲು ಪ್ರಯತ್ನಿಸಿದರೂ ಭಾರತೀಯ ಹಣಕಾಸು ಮಂತ್ರಿಯನ್ನು ವಿಶ್ವದ ಮಾಧ್ಯಮ ನಿರ್ಲಕ್ಷಿಸಿತು. ಏಕೆಂದರೆ ಈ ಸರಕಾರದ ವಿಶ್ವಸನೀಯತೆಯೇ ಉಳಿದಿಲ್ಲ......

ಡಾ|| ಜಯತಿ ಘೋಷ್

★ ★ ★

ಭಾರತೀಯ ಆರ್ಥಿಕ ಈಗಿನ ಇಕ್ಕಟ್ಟಿನಿಂದ ಹೊರಬರಬೇಕಾದರೆ ವಿದೇಶಿ ಉತ್ಪಾದಕರು ತಮ್ಮ ಉತ್ಪಾದನೆಗಳನ್ನು ಇಲ್ಲಿ ತಂದು ರಾಶಿ ಹಾಕುವುದನ್ನು ತಡೆಯಬೇಕು. ಒಟ್ಟಾರೆಯಾಗಿ ಆಮದಿನ ಮೇಲೆ ಹಿಡಿತ ಹಾಕಬೇಕು. ಇದು ವ್ಯಾಪಾರ ಕೊರತೆಯನ್ನು ಇಳಿಸುತ್ತದೆ, ಈ ಮೂಲಕ ಕೈಗಾರಿಕಾ ಬೆಳವಣಿಗೆಗೆ ಪ್ರೋತ್ಸಾಹ ನೀಡಿ, ಅಬಕಾರಿ ಸುಂಕದ ಸಂಗ್ರಹವನ್ನು ಹೆಚ್ಚಿಸಿ ಹಣಕಾಸು ಕೊರತೆಯನ್ನು ಇಳಿಸುತ್ತದೆ. ಸರಕಾರ ವ್ಯಾಪಾರ ಕೊರತೆಯನ್ನು ಇಳಿಸಲು ಹಣಸಾಸು ಕೊರತೆಯನ್ನು ಸಾಧನವಾಗಿ ಬಳಸಬೇಕೆಂದಿದ್ದರೆ ನೇರವಾಗಿ ಆಮದನ್ನು ತಟ್ಟುವ ರೀತಿಯಲ್ಲಿ ಅದನ್ನು ಇಳಿಸಬೇಕು. ಉದಾಹರಣೆಗೆ, ಸರಕಾರದ ಖರ್ಚಿನಲ್ಲಿ ಆಮದು ಅಂಶಗಳು ಹೆಚ್ಚಿರುವ ಖರ್ಚುಗಳ ಬಾಬ್ತುಗಳನ್ನು ಇಳಿಸಬೇಕು ಅಥವಾ ಆಮದುಗಳನ್ನೇ ಬಳಸುವ ಸಿರಿವಂತರ ಮೇಲೆ ತೆರಿಗೆ ಹಾಕಬೇಕು. ಅದರ ಬದಲು ಬಡವರಿಗೆ ಕೊಡುವ ಸಬ್ಸಿಡಿಗಳನ್ನು ಕಡಿತ ಮಾಡಿ ಹಣಕಾಸು ಕೊರತೆಯನ್ನು ಇಳಿಸುವ ಕ್ರಮ ಪ್ರತಿಗಾಮಿಯಷ್ಟೇ ಅಲ್ಲ, ಅದು ವ್ಯಾಪಾರ ಕೊರತೆಯನ್ನೇನೂ ತಗ್ಗಿಸುವುದಿಲ್ಲ. ಏಕೆಂದರೆ ಬಡವರು ಬೆಲೆಯೇರಿಕೆಗಳಿಂದ ಕಡಿಮೆ ಬಳಸುವಂತಾದರೆ ಅದರಿಂದ ಆಮದು ಕಮ್ಮಿಯಾಗುವುದಿಲ್ಲ ಅಥವಾ ರಫ್ತು ಹೆಚ್ಚುವುದಿಲ್ಲ..........

ಆದರೆ ಸರಕಾರದ ಆರ್ಥಿಕ ಧೋರಣೆ ಬಡವರ ವಿರೋಧಿಯಷ್ಟೇ ಅಲ್ಲ, ಭ್ರಮಾತ್ಮಕ ಧೋರಣೆ ಕೂಡಾ. ಈ ಕ್ರಮ ಭ್ರಮೆ ಮೇಲ್ನೋಟಕ್ಕೆ ಕಾಣವುದಕ್ಕಿಂತಲೂ ಆಳವಾಗಿದೆ. ಬಡವರನ್ನು ಹಿಂಡಿದರೆ ವ್ಯಾಪಾರ ಕೊರತೆ ಕಮ್ಮಿಯಾಗುವುದಿಲ್ಲ, ಹಣಕಾಸು ಕೊರತೆಯೂ ಕಮ್ಮಿಯಾಗುವುದಿಲ್ಲ............

ಸಂಕ್ಷಿಪ್ತವಾಗಿ ಹೇಳುವುದಾದರೆ ಹಣಕಾಸು ಮಂತ್ರಿಗಳು ಮತ್ತು ಅವರ ಆರ್ಥಿಕಗಳ ಯೋಚನೆಗಳು ನೈತಿಕವಾಗಿ ಆಕ್ಷೇಪಾರ್ಹ ಮಾತ್ರವೇ ಅಲ್ಲ, ಅವು ಈಗಿನ ಆರ್ಥಿಕದ ಸ್ಥಿತಿ-ಗತಿಯ ಬಗ್ಗೆ ಭ್ರಮೆಗಳ ಮೇಲೆ ನಿಂತಿದೆ. ಆದ್ದರಿಂದ ಅವು ತಕ್ಷಣದ ಗುರಿಯನ್ನು ಈಡೇರಿಸುವುದಿಲ್ಲ.

- ಪ್ರೊ|| ಪ್ರಭಾತ್ ಪಟ್ನಾಯಕ್

★ ★ ★

ಕೈಚಳಕ, ಕಸರತ್ತುಗಳು/ ಸಮಸ್ಯೆಯನ್ನು ಪರಿಹರಿಸುವುದಿಲ್ಲ:

.... ಪಡಿತರ ವ್ಯವಸ್ಥೆಯಲ್ಲಿ ಆಹಾರಧಾನ್ಯಗಳ ಬೆಲೆಯೇರಿಕೆ ಸರಕಾರದ ಬಜೆಟ್ ಕೊರತೆಯನ್ನು ಕಮ್ಮಿಮಾಡಲಾಗುತ್ತಿದೆ ಎಂದು ತೋರಿಸುವ ಇನ್ನೊಂದು ಪ್ರಯತ್ನವಷ್ಟೆ. ಇಕ್ಕಟಗಳ ಮರು ಖರೀದಿಯಂತೆ ಆಹಾರ ಸಬ್ಸಿಡಿಗಳ ಮೂಲಕವೂ ಬೇರೆಯವರನ್ನು ಸುಲಿದು ಕೊರತೆ ಇಳಿಸುವ ಪ್ರಯತ್ನ ನಡೆದಿದೆ. ಆದರೆ ಇಲ್ಲಿ ಆ ಬೇರೆಯವರು ದೇಶದ ಬಡ ಜನತೆ. ವಿಶ್ವ ಬ್ಯಾಂಕ್ ಐ.ಎಂ.ಎಫ್. ವಿದೇಶೀ ಹೂಡಿಕೆದಾರರು ಹಾಗೂ ಮಾಧ್ಯಮಗಳನ್ನು ಖುಶಿಪಡಿಸಲು ಸರಕಾರ ಈ ಕೈಚಳಕ ತೋರಿಸುತ್ತಿದೆಯಷ್ಟೆ.........

ಬಜೆಟ್ ವರದಿಯ ಪ್ರಯತ್ನಗಳು ಏನನ್ನು ತೋರಿಸುತ್ತದೆ? ಈ ವರ್ಷ ಕೂಡಾ ಹಣಕಾಸು ಧೋರಣೆಯಲ್ಲಿನ ತಪ್ಪಿಸಬಹುದಾದ ಪ್ರವೃತ್ತಿಗಳನ್ನು ಸರಿಪಡಿಸಲು ಯಾವ ಪ್ರಯತ್ನಗಳೂ ನಡೆಯುವುದಿಲ್ಲ ಎಂಬುದನ್ನೇ ತೋರಿಸುತ್ತದೆ. ಸಮಸ್ಯೆಯನ್ನು ಮುಚ್ಚಿಹಾಕುವ ಹತಾಶ ಕಸರತ್ತುಗಳು ಮಾತ್ರ ಕಾಣುತ್ತವೆ. ಇವು ವಾಸ್ತವವಾಗಿ ಸಮಸ್ಯೆಯನ್ನು ಇನ್ನಷ್ಟು ತೀವ್ರಗೊಳಿಸುತ್ತವೆ.

-ಡಾ|| ಸಿ.ಪಿ. ಚಂದ್ರಶೇಖರ್

ಇದು ನಿಮಗೆ ಗೊತ್ತೆ?

■ ರೈಲ್ವೆ ಮಂತ್ರಿ ನಿತಿಶ್ ಕುಮಾರ್‌ರವರ ಬಿಹಾರ ಭೇಟಿಗಳಿಗೆ ಈ ವರ್ಷ ರೈಲು ಇಲಾಖೆ ಸುಮಾರು 100 ಕೋಟಿ ರೂ.ಗಳನ್ನು ಖರ್ಚು ಮಾಡಿದೆ.

■ ರಾಷ್ಟ್ರಪತಿ ಆಳ್ವಿಕೆ ಹೇರುವ ಮೊದಲೇ ಸುಮಾರು ಒಂದು ಡಝನ್ ಬಾರಿ ರೈಲ್ವೇ ಮಂತ್ರಿಗಳು ಪಾಟ್ನಾಕ್ಕೆ ಹೋಗಿಬಂದಿದ್ದಾರೆ.ಹೋಗುವುದು ವಿಶೇಷ ರೈಲಿನಲ್ಲೇ. ಇಂತಹ ಪ್ರತಿಯೊಂದು ಭೇಟಿಗೆ 5 ಲಕ್ಷ ರೂ. ಖರ್ಚಾಗಿದೆ.

■ ರೈಲು ಮಂತ್ರಿಗಳ ಭೇಟಿಯಲ್ಲಿ ಅವರೊಬ್ಬರೇ ಇರುವುದಿಲ್ಲ. ಪ್ರತಿ ಬಾರಿಯೂ ಹಿರಿಯ ರೈಲು ಅಧಿಕಾರಿಗಳ ದೊಡ್ಡ ತಂಡವೇ ಇರುತ್ತದೆ. ಇದರಿಂದ ಬಿಹಾರದ ದಾನಾಪುರ ಡಿವಿಜನ್‌ನಲ್ಲಿ ಅವರ ಭೇಟಿ ಕಾಲದಲ್ಲಿ ಕೆಲಸವೆಲ್ಲಾ ಸ್ಥಗಿತಗೊಳ್ಳುತ್ತದಂತೆ. 1998 ರಲ್ಲಿ ಈ ಡಿವಿಜನ್ನಿನಲ್ಲಿ 20 ಪ್ರಮುಖ, 39 ಸಣ್ಣ-ಪುಟ್ಟ ಅಪಘಾತಗಳಾಗಿವೆ. ಇದರಿಂದ ಪರಿಹಾರ, ರೈಲು ಡಬ್ಬಗಳಿಗೆ, ಹಳಿಗಳಿಗೆ ಹಾನಿ, ಆಧುನೀಕರಣದ ಹೆಸರಿನಲ್ಲಿ ರೈಲು ಇಲಾಖೆ ಭಾರೀ ಹಾನಿ ಅನುಭವಿಸಿವೆ. ಇವನ್ನೆಲ್ಲಾ ಈಗ ಬಡ ಪ್ರಯಾಣಿಕರು ತುಂಬಿಸಬೇಕು.

■ 1999-2000 ರೈಲು ಇಲಾಖೆಗೆ 9000 ಕೋಟಿ ರೂ. ಗಿಂತಲೂ ಹೆಚ್ಚು ಬೇಕೆಂದು ಅಂದಾಜು ಮಾಡಲಾಗಿದೆಯಂತೆ. ಇದರಲ್ಲಿ ಮಂತ್ರಿಗಳ ಬಜೆಟ್ಟಿನಿಂದ ಹೆಚ್ಚೆಂದರೆ 2500 ಕೋಟಿ ರೂ.ಗಳು ಬರಬಹುದು, ಆಂತರಿಕವಾಗಿ 2500 ಕೋಟಿ ರೂ. ಸಂಗ್ರಹಿಸಬಹುದು, 2600 ಕೋಟಿ ರೂ. ಗಳಷ್ಟು ಮಾರುಕಟ್ಟೆಯಿಂದ ಸಾಲ ಎತ್ತಬಹದು. ಉಳಿದ 1400 ಕೋಟಿ ರೂ.ಗಳಿಗಿಂತಲೂ ಹೆಚ್ಚು ಕೊರತೆಯನ್ನು ನೀಗಿಸುವುದು ಹೇಗೆ? ರೈಲು ಇಲಾಖೆ ಸಾಗಾಣಿಕೆ ದರಗಳನ್ನು ಏರಿಸುವ ಸಾಧ್ಯತೆ ಬಹಳ ಕಮ್ಮಿಯಾದ್ದರಿಂದ ಈ ಕೊರತೆ ಬಹಳ ಮಟ್ಟಿಗೆ ಪ್ರಯಾಣಿಕರ ದರ ಏರಿಕೆಗಳಿಗೇ ಇರಬೇಕು ಎಂದು ತೀರ್ಮಾನಕ್ಕೆ "ಕೆಲಸ ಮಾಡಲಾಗದ" ಬಿಜೆಪಿ ನೇತೃತ್ವದ ಸರಕಾರ ನಿಧಾನವಾಗಿ ಬಂದೇ ಬಿಟ್ಟಿದೆಯಂತೆ.

ಫೆಬ್ರವರಿ 25 ರಂದು ರೈಲು ಬಜೆಟ್ ಮಂಡಿಸಲಾಗುವುದು.

(ಕೃಪೆ: ಗಣಶಕ್ತಿ)

ಬಿಪಿಎಲ್ ಕಾರ್ಮಿಕರ ಹೋರಾಟ - ಇನ್ನೊಂದು ಕಾರ್ಖಾನೆ ಹೋರಾಟವಲ್ಲ. ಬಿಪಿಎಲ್ ರಾಜ್ಯದಲ್ಲಿ ಅತಿಹೆಚ್ಚು ಬಂಡವಾಳ ಹೂಡಿರುವ ಇಲೆಕ್ಟ್ರಾನಿಕ್ಸ್ ಉದ್ಯಮ. ಕೆಲವೇ ವರ್ಷಗಳಲ್ಲಿ ಹಲವು ಪಟ್ಟು ವಹಿವಾಟು ಹೆಚ್ಚಳ ಸಾಧಿಸಿದ ಈ ಉದ್ಯಮ ಅಷ್ಟೇ ಕ್ರೂರ ಕಾರ್ಮಿಕ ನೀತಿ ಹೊಂದಿದ್ದು ಈಗಿನ ಸನ್ನಿವೇಶದಲ್ಲಿ ಬಿಪಿಎಲ್ ಹೋರಾಟದ ಮಹತ್ವ ತಿಳಿಸುವ ಲೇಖನ

ಬಿಪಿಎಲ್ ಸಾಮ್ರಾಜ್ಯ ಮಣ್ಣಿನಿಂದ ಮಹಲಿಗೆ

ಪ್ರಕಾಶ್. ಕೆ

1972 ರಲ್ಲಿ ಬೆಂಗಳೂರಿನ ಕೆ.ಹೆಚ್ ರಸ್ತೆಯಲ್ಲಿ ಒಂದು ಎಲೆಕ್ಟ್ರಾನಿಕ್ಸ್ ಅಂಗಡಿಯ ಮಾಲೀಕನಾಗಿದ್ದ ಟಿ.ಪಿ.ಜಿ. ನಂಬಿಯಾರ್ ಬಹುಶಃ ಯೋಚಿಸಿರಲಿಕ್ಕಿಲ್ಲ - 20ನೇ ಶತಮಾನದ ಅಂತ್ಯದೊಳಗೆ ತಾನೊಬ್ಬ ಏಕಸ್ವಾಮ್ಯ ಬಂಡವಾಳದಾರನಾಗುತ್ತೇನೆಂದು!

ಕುರುಡು ಕಾಂಚಾಣದ ಅಟ್ಟಹಾಸದಲ್ಲಿ ಸಿಕ್ಕವರನ್ನು ತುಳಿಯುತ್ತ ಬೆಳೆದ ನಂಬಿಯಾರ್ (ಬಿಪಿಎಲ್ ಗ್ರೂಪ್)ನ ಆಸ್ತಿ ಈಗ ಕೇವಲ 2000 ಕೋಟಿ ರೂಗಳು! 25 ವರ್ಷಗಳ ಹಿಂದೆ ಒಬ್ಬ ಸಾಮಾನ್ಯ ವ್ಯಾಪಾರಸ್ಥ- ಉದ್ದಿಮೆದಾರನಾಗಿದ್ದ ನಂಬಿಯಾರನ ದುಷ್ಟ 'ಕೋಟೆ'ಗಳ ಸಾಮ್ರಾಜ್ಯದಲ್ಲಿ ನಲುಗಿದ ಜೀವಗಳೆಷ್ಟೋ! ನೆತ್ತರಲ್ಲಿ ನೆಂದ ಹೂಗಳೆಷ್ಟೋ! ಲೆಕ್ಕವೇನಾದರೂ ಇಡಲು ನಾಗರೀಕ ಕಾನೂನುಗಳಿದ್ದರಲ್ಲವೇ!

ಈ ಸದ್ಯ ಬಿಪಿಎಲ್ ಸಮೂಹಕ್ಕೆ ಬೆಂಗಳೂರು ಜಿಲ್ಲೆಯಲ್ಲಿ-18, ಮಂಡ್ಯ ಜಿಲ್ಲೆ ಮದ್ದೂರಿನಲ್ಲಿ-1, ತುಮಕೂರಿನ ದಾಬಸ್‌ಪೇಟೆಯಲ್ಲಿ-1, ಕೇರಳದ ಪಾಲ್ಘಾಟ್‌ನಲ್ಲಿ-3, ಉತ್ತರ ಪ್ರದೇಶದ ಘಜಿಯಾಬಾದ್ ಮತ್ತು ನೋಯಿಡಾದಲ್ಲಿ-2 ಫ್ಯಾಕ್ಟರಿಗಳಿವೆ. ಇವೆಲ್ಲವೂ ಬಿಪಿಎಲ್‌ನ ಸಮೂಹಕ್ಕೆ ಸೇರಿದ್ದರೂ ಕಾನೂನಾತ್ಮಕವಾಗಿ ಪ್ರತ್ಯೇಕ ಘಟಕಗಳನ್ನಾಗಿ ಮಾಡಲಾಗಿದೆ. ಸರ್ಕಾರಕ್ಕೆ ತೆರಿಗೆ ತಪ್ಪಿಸುವ ಸ್ಪಷ್ಟ ಮತ್ತು ನಾಜೂಕಿನ ಕ್ರಮ ಇದಾಗಿದೆ.

ಬೆಂಗಳೂರು ಜಿಲ್ಲೆಯಲ್ಲಿನ ಕೈಗಾರಿಕೆಗಳಲ್ಲಿ ಸುಮಾರು 10,000 ಕ್ಕಿಂತಲೂ ಹೆಚ್ಚು ಜನ ಕೆಲಸ ಮಾಡುತ್ತಿದ್ದಾರೆ. ಇವರ ವರ್ಗಗುಣದ ತಂತ್ರದ ಭಾಗವಾಗಿ ಇದರಲ್ಲಿ ಶೇ.50 ರಷ್ಟು ಕಾರ್ಮಿಕರಾದರೆ ಉಳಿದ ಶೇ. 50 ರಷ್ಟು ಕೆಲಸಗಾರರು ಅಧಿಕಾರಿ (STAF) ವರ್ಗವಾಗಿದ್ದಾರೆ, ಕಾರ್ಮಿಕರಲ್ಲಿ ಬಹುತೇಕ ಮಂದಿ ಮಹಿಳೆಯರಾಗಿದ್ದಾರೆ.

ಟಿ.ವಿ., ವಾಷಿಂಗ್ ಮೆಷಿನ್, ರೆಫ್ರಿಜರೇಟರ್ಸ್, ರೇಡಿಯೋ, ಟೇಪ್ ರೆಕಾರ್ಡರ್‌ಗಳು, ಸ್ಪೀಕರ್ಸ್, ಟೆಲಿಫೋನ್, ಗ್ಯಾಸ್‌ಸ್ಟವ್, ವಿಸಿಪಿ-ವಿಸಿಆರ್, ಬ್ಯಾಟರಿಗಳು, ಹೀಗೆ... ಎಲೆಕ್ಟ್ರಾನಿಕ್ ವಸ್ತುಗಳ ಉತ್ಪಾದನೆಯ ಸಾಮ್ರಾಜ್ಯವನ್ನೇ ಸೃಷ್ಟಿಸಿಕೊಂಡಿರುವ ಬಿಪಿಎಲ್ ಇಂದು ಭಾರತದ ಎಲೆಕ್ಟ್ರಾನಿಕ್ ಗ್ರಾಹಕ ವಸ್ತುಗಳ ಮಾರುಕಟ್ಟೆಯಲ್ಲಿ ಬಹುತೇಕ ಹಿಡಿತವನ್ನು ಹೊಂದಿದೆ. ದಿನವೊಂದಕ್ಕೆ 1000ಕ್ಕೂ ಹೆಚ್ಚು ರೆಫ್ರಿಜರೇಟರ್‌ಗಳನ್ನು 1500 ಕ್ಕೂ ಹೆಚ್ಚು ಬಣ್ಣದ ಟಿ.ವಿ.ಗಳನ್ನು ಉತ್ಪಾದಿಸುವ ಬಿಪಿಎಲ್‌ನ ವಾರ್ಷಿಕ ವಹಿವಾಟು 3000 ಕೋಟಿ ರೂಗಳಿಗೂ ಅಧಿಕ. ಕಡಿಮೆ ವೆಚ್ಚದ ಉತ್ಪಾದಕನೆಂದು ಹೆಸರು ಪಡೆದಿರುವ ಬಿಪಿಎಲ್ ಸಂಸ್ಥೆಯು ವಿಡಿಯೋಕಾನ್, ಫಿಲಿಪ್ಸ್, ಸ್ಯಾಮ್‌ಸಂಗ್ ಮುಂತಾದ ದೇಶೀ-ವಿದೇಶೀ ಕಂಪನಿಗಳ ಜೊತೆ ಪೈಪೋಟಿ ನಡೆಸುತ್ತಾ ಆಳುವ ವರ್ಗಗಳನ್ನು ಸಮರ್ಥವಾಗಿ ಬಳಸಿಕೊಳ್ಳುತ್ತಾ ಪರಿಸ್ಥಿತಿಯನ್ನು ತನ್ನ ಪರವಾಗಿ ರೂಪಿಸಿಕೊಳ್ಳುತ್ತಿರುವ ಭಾರತದ 45 ನೇ ಅತಿದೊಡ್ಡ ಬಂಡವಾಳದಾರನಾಗಿದೆ.

ಕರ್ನಾಟಕದ ಮಟ್ಟಿಗಂತೂ ಬಿಪಿಎಲ್ ಸಮೂಹ ಅತಿದೊಡ್ಡ ಬಂಡವಾಳದಾರ ಸಂಸ್ಥೆ. ಸಹಜವಾಗಿಯೇ ಜೆ.ಹೆಚ್. ಪಟೇಲರ ವರ್ಗಮಿತ್ರ.

ಕಾರ್ಮಿಕರ ನಿರ್ದಯ ಶೋಷಣೆ

ಎಂತಹವರನ್ನು ನೇಮಕ ಮಾಡಿಕೊಳ್ಳಬೇಕು ಎನ್ನುವುದರಿಂದ ಹಿಡಿದು ಕಾರ್ಮಿಕರು ಕಾರ್ಖಾನೆಯೊಳಗೆ ಏನು ಮಾತನಾಡಬೇಕು ಎಂಬಂತಹ ವಿಷಯಗಳವರೆಗೆ ಎಲ್ಲವನ್ನೂ ನಿಯಂತ್ರಣ ಮಾಡುವ ಅತ್ಯಂತ ಉಸಿರುಗಟ್ಟುವ ವಾತಾವರಣ ಬಿಪಿಎಲ್ ನಲ್ಲಿದೆ. ಮೂಲತಃ ಕೇರಳದವನಾದ ನಂಬಿಯಾರ್ ಕೇರಳದಲ್ಲಿ ಕಾರ್ಖಾನೆಗಳನ್ನು ಹೆಚ್ಚಿಗೆ ಸ್ಥಾಪಿಸದೇ ಬೆಂಗಳೂರಿನಲ್ಲಿ ಕೇಂದ್ರೀಕರಿಸಿರುವುದು -ಈ ರೀತಿ ವಿಪರೀತವಾಗಿ ಕಾರ್ಮಿಕರನ್ನು ಶೋಷಿಸಬಹುದೆಂಬ ಕಾರಣದಿಂದಲೇ.

18-25 ವಯೋಮಾನದವರನ್ನೂ ಮಾತ್ರ ಕೆಲಸಕ್ಕೆ ಇಟ್ಟುಕೊಳ್ಳುವುದು, ವಿವಾಹಿತರಾಗಿರಬಾರದೆನ್ನುವುದು (ಇನ್ನು, ಪ್ರೀತಿ ಪ್ರೇಮದ ಯೋಚನೆ ಮಾಡುವಂತೆಯೇ ಇಲ್ಲ) ಎಲ್ಲರನ್ನೂ ಟ್ರೈನಿಗಳೆಂದು ನೇಮಕ ಮಾಡಿಕೊಳ್ಳುವುದು, ಆಡಳಿತ ವರ್ಗದ ದೌರ್ಜನ್ಯಗಳ ವಿರುದ್ಧ ಏನಾದರೂ ಸೊಲ್ಲೆತ್ತಿದರೆ ಮರುಕ್ಷಣವೇ ಕಾರ್ಖಾನೆಯಿಂದ ತೆಗೆದು ಹಾಕುವುದು ಸಾಮಾನ್ಯ ಸಂಗತಿ, ಕೆಲಸದ ಸಂದರ್ಭದಲ್ಲಿ ಕಾರ್ಮಿಕರು ಪಿಸುಗುಟ್ಟುವಂತಿಲ್ಲ, ಅನಾರೋಗ್ಯ ವೆಂದೋ, ಅಕಸ್ಮಾತ್ ಗರ್ಭಿಣಿ ಮಹಿಳೆಯಾಗಿದ್ದು ವಿಶ್ರಾಂತಿಗೆಂದೋ ಒಂದು ನಿಮಿಷ ನೆಲಕ್ಕೆ ಕೈಯೂರುವಂತಿಲ್ಲ, ಕನಿಷ್ಟ ಕೂಲಿಯನ್ನು ಕೇಳುವಂತೆಯೇ ಇಲ್ಲ, ಇತರೆ ಸೌಲಭ್ಯಗಳನ್ನು ಬಯಸುವಂತೆಯೇ ಇಲ್ಲ, ಹೀಗೆ... ಹೆಜ್ಜೆ ಹೆಜ್ಜೆಗೂ, ಕ್ಷಣ ಕ್ಷಣಕ್ಕೂ ಆಡಳಿತ ವರ್ಗದ ಹದ್ದಿನ ಕಣ್ಣುಗಳು ಕಾರ್ಮಿಕರನ್ನು ಹಿಂಬಾಲಿಸುತ್ತಿರುತ್ತವೆ.

> **ಪೂರ್ಣವಾಗಿ ಬಿಪಿಎಲ್ ಮಾಲೀಕನ ಪರವಾದ ನಿಲುವನ್ನು ಪಟೇಲರು ತೆಗೆದುಕೊಂಡಿದ್ದಾರೆ. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯ ಕಾರ್ಯದರ್ಶಿಯವರು ಪಟೇಲರನ್ನು ಭೇಟಿಯಾಗಲು ಬಯಸಿದರೆ ಒಳಗಿದ್ದುಕೊಂಡೇ ಮಾತನಾಡದೆ ಕಳುಹಿಸುತ್ತಾರೆ ಎಂದರೆ ಪರಿಸ್ಥಿತಿ ಅರ್ಥವಾಗುತ್ತದೆ.**

ಯಾವ ಕಾನೂನುಗಳೂ ಬಿಪಿಎಲ್ ಆಡಳಿತ ವರ್ಗಕ್ಕೆ ಅನ್ವಯಿಸುವುದಿಲ್ಲ! ಕಾರ್ಮಿಕರಿಗೆ ಯಾವ ಪ್ರಜಾಸತ್ತಾತ್ಮಕ ಹಕ್ಕುಗಳೂ ಇಲ್ಲಿಲ್ಲ. 19ನೇ ಶತಮಾನದ ಕಾರ್ಮಿಕರನ್ನು ನಡೆಸಿಕೊಳ್ಳುವ ಹಾಗಿದೆ ಇಲ್ಲಿನ ಪರಿಸ್ಥಿತಿ. ಇಂತಹ ಅನಿರ್ಭಾಧಿತ ಶೋಷಣೆಯಿಂದಾಗಿಯೇ ಬಿಪಿಎಲ್ ಇಂದು ಎಲೆಕ್ಟ್ರಾನಿಕ್ಸ್ ಉದ್ದಿಮೆಯ ರಕ್ಕಸನಾಗಿ ಬೆಳೆದಿದೆ. ಕಾರ್ಮಿಕರ ದುಡಿಮೆಯಿಂದಾಗಿ ಬೆಳೆದು ಬಲಿತಿರುವ ನಂಬಿಯಾರ್ ಆ ಕಾರ್ಮಿಕರಿಗೆ ಕೆಲವು ಕನಿಷ್ಠ ಸವಲತ್ತುಗಳನ್ನೂ ನೀಡದಿರುವಷ್ಟು ಕ್ರೂರಿಯಾಗಿದ್ದಾನೆ.

ಈಗ ವರ್ಷಕ್ಕೆ 30 ಕೋಟಿ ರೂಗಳನ್ನು ಸಂಬಳಕ್ಕೆಂದು ಮನಸ್ಸಿಲ್ಲದ ಮನಸ್ಸಿನಿಂದ ಖರ್ಚು ಮಾಡುವ ನಂಬಿಯಾರ್ ಜಾಹೀರಾತುಗಳಿಗೆಂದು ವರ್ಷಕ್ಕೆ 100 ಕೋಟಿ ರೂಗಳಿಗೂ ಹೆಚ್ಚು ವ್ಯಯಿಸುವ ಉದಾರಿಯಾಗಿದ್ದಾನೆ. ಬಿಪಿಎಲ್ ಗ್ರೂಪ್‌ನಿಂದ ಒಟ್ಟಾರೆ ವಾರ್ಷಿಕ 200 ಕೋಟಿ ರೂಗಳಿಗೂ ಹೆಚ್ಚು ಲಾಭ ಮಾಡುವ ನಂಬಿಯಾರ್‌ಗೆ, ಕಾರ್ಮಿಕರಿಗೆ ನಯಾ ಪೈಸೆ ಕೊಡಲೂ ಮನಸ್ಸಿಲ್ಲ ಎನ್ನುವುದು ವಾಸ್ತವ ಸಂಗತಿ.

ಶೋಷಣೆ ವಿರುದ್ಧ ಸಿಡಿದು ಬಂದ ಸಂಘಟನೆ

ನವೆಂಬರ್ 19, 1998 ರಂದು ಬೆಂಗಳೂರು ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ಕಾರ್ಖಾನೆಗಳ ಸುಮಾರು 4000 ಕಾರ್ಮಿಕರು ಮುಷ್ಕರಕ್ಕೆ ಇಳಿದಾಗ ಬಹುಶಃ ನಂಬಿಯಾರ್ ಈ ರೀತಿ ಆಗಬಹುದೆಂದು ಎಣಿಸಿರಲಿಲ್ಲ. ಇಷ್ಟು ವರ್ಷಗಳ ನಂತರ ನಿರ್ದಯ ಶೋಷಣೆಯ ವಿರುದ್ಧ ಕಾರ್ಮಿಕ ವರ್ಗ ಒಂದಾಗಿತ್ತು. ಬಿಪಿಎಲ್ ಗ್ರೂಪ್ ಕಾರ್ಮಿಕರ ಸಂಘ ಸಿಐಟಿಯು ನೇತೃತ್ವದಲ್ಲಿ ರಚನೆಯಾಗಿತ್ತು. ನಂಬಿಯಾರ್ ಕನಸಿನಲ್ಲೂ ಎಣಿಸದಿದ್ದ ಸಂಗತಿಯೊಂದು ಘಟಿಸಿತ್ತು ಅದು ಅವನಿಗೆ ಕ್ರೂರ ವಾಸ್ತವವಾಗಿತ್ತು.

ಹೆಚ್ಚಿದ ದಾಳಿಗಳು ಮತ್ತು ಹೋರಾಟಗಳು

ತಾನು ಭಾವಿಸಿರದೇ ಇದ್ದ ಘಟನೆಯೊಂದು ಸಂಭವಿಸಿದಾಗ ಅದನ್ನು ಪ್ರಜಾಸತ್ತಾತ್ಮಕವಾಗಿ ಪರಿಗಣಿಸುವ ಬದಲಿಗೆ ಕ್ರೂರ ವಿಧಾನಗಳಿಂದ ಎದುರಿಸಲು ಸದೆ ಬಡಿಯಲು ಬಿಪಿಎಲ್ ಆಡಳಿತ ತೀರ್ಮಾನಿಸಿತು. ಪರಿಣಾಮವೇನೆಂದರೆ- ಸುಮಾರು 500 ಕಾರ್ಮಿಕರ ವಜಾ, 300 ಕಾರ್ಮಿಕರ ಅಮಾನತು, 600 ಕ್ಕೂ ಹೆಚ್ಚು ಸುಳ್ಳು ಕೇಸುಗಳು, 47 ಕಾರ್ಮಿಕರ ರಿಟ್ರೆಂಚ್‌ಮೆಂಟ್ 633 ಕಾರ್ಮಿಕರು ಜೈಲಿಗೆ (ಈಗಲೂ 15 ಕಾರ್ಮಿಕರು ಸೆಂಟ್ರಲ್ ಜೈಲಿನಲ್ಲಿದ್ದಾರೆ). .... ಹೀಗೆ ಕಾರ್ಮಿಕರ ಹೋರಾಟವನ್ನು ತೀವ್ರವಾಗಿ ದಮನ ಮಾಡುವ ಪ್ರಯತ್ನ. ಇದರಲ್ಲೆಲ್ಲಾ ಪೊಲೀಸ್ ಇಲಾಖೆಯ ನೇರ ಹಸ್ತಕ್ಷೇಪ ಸರ್ಕಾರದ ಕುಮ್ಮಕ್ಕು.

ಇಷ್ಟಕ್ಕೂ ಕಾರಣವಾದ ಸಂಘದ ಬೇಡಿಕೆಗಳಾದರೂ ಏನು?

ಸಂಘವನ್ನು ಮಾನ್ಯಮಾಡಬೇಕು, ಅಕ್ರಮವಾಗಿ ತರಬೇತಿ ಹೆಸರಿನಲ್ಲಿ ಕಾರ್ಮಿಕರನ್ನು ದುಡಿಸಿಕೊಳ್ಳುತ್ತಿರುವುದನ್ನು ನಿಲ್ಲಿಸಬೇಕು, ಕಾನೂನು ಉಲ್ಲಂಘನೆ ಮಾಡಿರುವ ಮಾಲೀಕರ ವಿರುದ್ಧ ಸರ್ಕಾರ ಕಾನೂನು ರೀತಿ ಕ್ರಮ ಕೈಗೊಳ್ಳಬೇಕು ಇತ್ಯಾದಿ...

25-30 ವರ್ಷಗಳಿಂದ ಮಾಡುತ್ತಿದ್ದ ಅಭಾಧಿತ ಸುಲಿಗೆಗೆ ತಡೆ ಸೃಷ್ಟಿಯಾಗುತ್ತಿದೆ ಎಂಬುದೇ ಇಷ್ಟೆಲ್ಲಾ ಅಮಾನುಷ

> **ಆರ್ಥಿಕತೆಯ ಜಾಗತೀಕರಣ, ವ್ಯಾಪಾರ ಮತ್ತು ಉದ್ದಿಮೆಯ ಉದಾರೀಕರಣ ಮತ್ತು ಅಂತರ ರಾಷ್ಟ್ರೀಯ ಪೈಪೋಟಿಯನ್ನು ಮಾಡುವ ರೀತಿಯಲ್ಲಿ ವ್ಯಾಪಾರ, ಸೇವೆ ಮತ್ತು ಕೈಗಾರಿಕೆಗಳಲ್ಲಿನ ಕೆಲಸದ ಸ್ಥಿತಿ, ಸಮಯ ಮತ್ತು ವಿಧಾನಗಳನ್ನು ಬದಲಾಯಿಸಬೇಕೆಂದು ಬಿಪಿಎಲ್ ಬಯಸುತ್ತಿದೆ.**

ಕ್ರಮಗಳಿಗೆ ಕಾರಣವಾಗಿದೆ. ಮುಷ್ಕರದಲ್ಲಿರುವ ಕಾರ್ಮಿಕರ ಮೇಲಿನ ಅದರಲ್ಲೂ ಹೆಣ್ಣುಮಕ್ಕಳನ್ನೂ ಲೆಕ್ಕಿಸದೆ- ಪೊಲೀಸರ ಲಾಠಿಚಾರ್ಜ್, ಹಿಂಸೆ, ದೌರ್ಜನ್ಯಗಳ, ಸುಳ್ಳು ಮೊಕದ್ದಮೆಗಳನ್ನು ವಿರೋಧಿಸಿ, ಬಿಪಿಎಲ್ ಆಡಳಿತವರ್ಗದ ವಿರುದ್ಧ ಕೈಗಾರಿಕಾ ವಿವಾದ ಕಾನೂನು ಪ್ರಕಾರ ಸರ್ಕಾರ ತೀವ್ರ ಕ್ರಮ ಕೈಗೊಳ್ಳದಿರುವುದನ್ನು ವಿರೋಧಿಸಿ, ಮಾಲೀಕರ ಪರವಾಗಿ ವರ್ತಿಸುತ್ತಿರುವ ಕಾರ್ಮಿಕ ಇಲಾಖೆ ಮತ್ತು ಸರ್ಕಾರದ ನೀತಿಗಳ ವಿರುದ್ಧ ಕಾರ್ಮಿಕರ ಸಂಘವು ಹಂತ ಹಂತವಾಗಿ ಹೋರಾಟಗಳನ್ನು ನಡೆಸಿದೆ. ಸತತವಾಗಿ 3 ತಿಂಗಳಿಂದ ಒಂದಲ್ಲಾ ಒಂದು ಹೋರಾಟ ನಡೆದಿದೆ.

ಜನವರಿ 27 ರಿಂದ ಸಂಘದ ಅಧ್ಯಕ್ಷರಾದ ಆರ್. ಶ್ರೀನಿವಾಸ್‌ರವರಿಂದ ಪ್ರಾರಂಭಗೊಂಡ ಅನಿರ್ದಿಷ್ಟ ಉಪವಾಸ ಸತ್ಯಾಗ್ರಹ ಈಗಲೂ ಇತರೆ ಕಾರ್ಮಿಕರಿಂದ ಮುಂದುವರಿದಿದೆ. ಮುಖ್ಯಮಂತ್ರಿ ಮನೆಮುಂದೆ ಪ್ರತಿಭಟಿಸಲು ತೆರಳಿದಾಗ ಅನಗತ್ಯವಾದ 144 ಸೆಕ್ಷನ್‌ಗಳನ್ನು ಹಾಕಿ ಸುಮಾರು 300 ಮಹಿಳಾ ಕಾರ್ಮಿಕರನ್ನೂ ಸೇರಿದಂತೆ 639 ಕಾರ್ಮಿಕರನ್ನು 7 ದಿನಗಳ ಕಾಲ ಜೈಲುವಾಸಕ್ಕೆ ನೂಕಲಾಗಿದೆ. ಸಿಐಟಿಯುನ ಮುಖಂಡರಾದ ಮೀನಾಕ್ಷಿ ಸುಂದರಂ, ಗೋಪಾಲಗೌಡ, ವರಲಕ್ಷ್ಮಿ, ಗೌರಮ್ಮ ಮತ್ತು ಸಂಘದ ಕಾರ್ಯದರ್ಶಿ ಟಿ.ಕೆ.ಎಸ್ ಕುಟ್ಟಿ ಇವರನ್ನೂ ಸಹ ಜೈಲಿಗೆ ಹಾಕಲಾಗಿತ್ತು. ಇದಲ್ಲದೆ ಪ್ರತಿನಿತ್ಯ ತೆಗೆದ ಮೆರವಣಿಗೆಗಳೆಷ್ಟೋ, ನೀಡಿದ ಮನವಿಗಳೆಷ್ಟೋ, ಲೆಕ್ಕವಿಟ್ಟವರಿಲ್ಲ. ಮಂತ್ರಕ್ಕೆ ಮಾವಿನಕಾಯಿ ಉದುರುವುದೇ ಎನ್ನುವ ಸ್ಥಿತಿಯನ್ನು ನಿರ್ಮಿಸಲಾಗಿದೆ.

ಹೀಗೆ ಮೆರವಣಿಗೆಗಳು, ಮನವಿಗಳು, ಮಾತುಕತೆಗಳು, ಚರ್ಚೆಗಳು ಜೈಲುವಾಸಗಳು ನಡೆದರೂ ಎಂತಹ ಹೋರಾಟಕ್ಕೂ ಆಡಳಿತವರ್ಗ-ಸರ್ಕಾರ ಬಗ್ಗುತ್ತಿಲ್ಲ. ಬದಲಿಗೆ ಸಂಘವೇ ಕಾನೂನುಬಾಹಿರ ಎಂಬ ಹಠಮಾರಿ ಧೋರಣೆಯನ್ನು ಆಡಳಿತ ವರ್ಗ ತಳೆದಿದೆ. ಇಂತಹ ಅಭಿಪ್ರಾಯವನ್ನೇ ಕಾರ್ಮಿಕ ಕಮೀಷನರ್ ಲೂಕೋಸ್ ವಲ್ಲತ್ತರೈ ಹೇಳುತ್ತಾರೆಂದರೆ ಕಾರ್ಮಿಕ ಇಲಾಖೆ ಎಲ್ಲಿದೆಯೆಂದು ತಿಳಿಯಲು ಕಷ್ಟವಾಗುವುದಿಲ್ಲ. ಬಿಪಿಎಲ್ ಸಮೂಹ ಎಂಬುದು ಕಾನೂನುಬದ್ಧ ಸಮೂಹವಲ್ಲವಾದ್ದರಿಂದ ಒಂದೊಂದು ಘಟಕದ ಜೊತೆಯೂ ಪ್ರತ್ಯೇಕ ಮಾತುಕತೆ ಮಾಡಬೇಕೆಂದು ವಾದಿಸುತ್ತಿದ್ದ ಆಡಳಿತವರ್ಗ ಈಗ ಅದಕ್ಕೂ ಸಿದ್ಧವಿಲ್ಲವಾಗಿದೆ.

ಆಳುವ ವರ್ಗ ಮತ್ತು ಬಂಡವಾಳದಾರರ ನಂಟು:

ರಾಜ್ಯದಲ್ಲಿ ಅತ್ಯಂತ ದಮನಕಾರಿ ಆಡಳಿತ ಅನುಭವಿಸಿದ್ದು ಗುಂಡೂರಾವ್ ಸರ್ಕಾರದ ಅವಧಿಯಲ್ಲಿ. ಕಾರ್ಮಿಕ ವರ್ಗದ ಮೇಲಾಗಲೀ, ರೈತರ ಮೇಲಾಗಲೀ, ಅಥವಾ ಇತರೆ ಯಾವುದೇ ಪ್ರಜಾಸತ್ತಾತ್ಮಕ ಚಳುವಳಿಗಳನ್ನಾಗಲೀ ಕ್ರೂರವಾಗಿ ದಮನಿಸುವ ಪ್ರವೃತ್ತಿ ಆಗ ಇತ್ತು. ಅದರ ಫಲವನ್ನು ಗುಂಡೂರಾವ್ ಅನುಭವಿಸಿದರು, ಅಂತಹುದೇ ನೀತಿ ಈಗ ಜೆ.ಹೆಚ್. ಪಟೇಲರ ಅವಧಿಯಲ್ಲಿ ಕಾಣುತ್ತಿದ್ದೇವೆ. ಪೂರ್ಣವಾಗಿ ಬಿಪಿಎಲ್ ಮಾಲೀಕನ ಪರವಾದ ನಿಲುವನ್ನು ಪಟೇಲರು ತೆಗೆದುಕೊಂಡಿದ್ದಾರೆ. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯ ಕಾರ್ಯದರ್ಶಿಯವರು ಪಟೇಲರನ್ನು ಭೇಟಿಯಾಗಲು ಬಯಸಿದರೆ, ಒಳಗಿದ್ದುಕೊಂಡೇ ಮಾತನಾಡದೆ ಕಳುಹಿಸುತ್ತಾರೆ ಎಂದರೆ ಪರಿಸ್ಥಿತಿ ಅರ್ಥವಾಗುತ್ತದೆ.

ಉಪಮುಖ್ಯಮಂತ್ರಿ ಸಿದ್ಧರಾಮಯ್ಯನವರು ಕಾರ್ಮಿಕ ಇಲಾಖೆಯನ್ನೂ ಹೊಂದಿದ್ದಾಗ ಅವರು ಹೊರಡಿಸಲು ತಯಾರಿಸಿದ್ದ ಮಧ್ಯಂತರ ಆಜ್ಞೆಯನ್ನು ರಾತ್ರೋರಾತ್ರಿ ಬದಲಾಯಿಸಿ (ಅವರ ಖಾತೆಯನ್ನೂ ಕಿತ್ತು ಹಾಕಿದ್ದು ಮತ್ತೊಂದು ವಿಷಯ) ಪಟೇಲರೇ ನೇರವಾಗಿ ಮಾಲೀಕರ ಪರವಾದ ಆಜ್ಞೆಗೆ ಕಾರಣರಾದರು. ಈ ವಿಚಾರದಲ್ಲಿ ಮುಖ್ಯಮಂತ್ರಿಯವರ ಕಾರ್ಯದರ್ಶಿ ಬಿ.ಎಸ್. ಪಾಟೀಲ್, ಕಾರ್ಮಿಕ ಕಾರ್ಯದರ್ಶಿ ವಿಶ್ವನಾಥನ್ (ಈತ ಹಿಂದೆ ಕೈಗಾರಿಕಾ ಕಾರ್ಯದರ್ಶಿಯಾಗಿದ್ದಾಗ ನಂಬಿಯಾರ್‌ನ ಗಳಸ್ಯ ಕಂಠಸ್ಯನಾಗಿದ್ದ), ಕಾರ್ಮಿಕ ಕಮೀಷನರ್ ಲುಕೋಸ್ ವಲ್ಲತ್ತರೈ, ಪೊಲೀಸ್ ಕಮೀಷನರ್ ರೇವಣ್ಣಸಿದ್ಧಯ್ಯ ಇವರೆಲ್ಲಾ ಪೂರ್ಣವಾಗಿ ನಂಬಿಯಾರ್‌ನ ಹಣದ ಋಣ ತೀರಿಸುವ ಕೆಲಸಕ್ಕೆ ಪೂರ್ತಿಯಾಗಿ ನಿಂತುಬಿಟ್ಟಿದ್ದಾರೆ. ಹಲವಾರು ಕೋಟಿರೂಗಳ ಚಲಾವಣೆಯಾಗಿದೆ. ಕಾರ್ಮಿಕ ಇಲಾಖೆ, ಪೋಲೀಸ್ ಇಲಾಖೆ ಕೈಗಾರಿಕಾ ಇಲಾಖೆ ಎಲ್ಲವೂ ಬಂಡವಾಳದಾರರ ಪರವಾಗಿ ಪರಿವರ್ತನೆಯಾಗಿದೆ. ನಂಬಿಯಾರ್ ಮಾಡಬೇಕಾದ ಎಲ್ಲಾ ವಾದಗಳನ್ನು ಈ ಇಲಾಖೆಗಳೇ ಮಾಡುತ್ತಿವೆ.

ಬದಲಾಗುತ್ತಿರುವ ಸನ್ನಿವೇಶದಲ್ಲಿ ಬಿಪಿಎಲ್ ಹೋರಾಟ

ತೀವ್ರವಾಗಿ ಬದಲಾಗುತ್ತಿರುವ ತಂತ್ರಜ್ಞಾನವನ್ನು ಆಧರಿಸಿದ ಉತ್ಪಾದನಾ ವಿಧಾನವು ಇಡೀ ಆರ್ಥಿಕತೆಯನ್ನು ಅಲುಗಾಡಿಸುತ್ತಿದೆ.

ಆರ್ಥಿಕತೆಯ ಜಾಗತೀಕರಣ, ವ್ಯಾಪಾರ ಮತ್ತು ಉದ್ದಿಮೆಯ ಉದಾರೀಕರಣ ಮತ್ತು ಅಂತರ ರಾಷ್ಟ್ರೀಯ ಪೈಪೋಟಿಯನ್ನು ಮಾಡುವ ರೀತಿಯಲ್ಲಿ ವ್ಯಾಪಾರ, ಸೇವೆ ಮತ್ತು ಕೈಗಾರಿಕೆಗಳಲ್ಲಿನ ಕೆಲಸದ ಸ್ಥಿತಿ, ಸಮಯ ಮತ್ತು ವಿಧಾನಗಳನ್ನು ಬದಲಾಯಿಸಬೇಕೆಂದು ಇದು ಬಯಸುತ್ತಿದೆ.

ಪುಟ 7 ಕ್ಕೆ

ಬಿಹಾರದ ನಾರಾಯಣಪುರ ನರಮೇಧ ನಡೆದದ್ದು ಹೇಗೆ? ನಡೆಯಿತೇಕೆ?

ಸಿಪಿಐ(ಎಂ) ನ ಬಿಹಾರ ರಾಜ್ಯ ಸಮಿತಿಯ ನಾಲ್ವರು ಸದಸ್ಯರ ನಿಯೋಗ ವೊಂದು ಫೆಬ್ರವರಿ 12 ರಂದು ಗಯಾ ಜಿಲ್ಲೆಯ ನಾರಾಯಣಪುರ ಗ್ರಾಮಕ್ಕೆ ಬೇಟಿ ನೀಡಿದ ಮೇಲೆ ಮರುದಿನ ಒಂದು ವರದಿ ಯನ್ನು ಕೊಟ್ಟಿದೆ. ನಮ್ಮ ಓದುಗರಿಗಾಗಿ ಇಲ್ಲಿ ಕೊಡುತ್ತಿದ್ದೇವೆ.

ಫೆಬ್ರವರಿ 10 ರ ರಾತ್ರಿ ಸುಮಾರು 9 ಗಂಟೆಯ ಸಮಯ. ಸುಮಾರು 50-60 ಬಂದೂಕುಧಾರಿಗಳು ಇದ್ದಕ್ಕಿದ್ದಂತೆ ಹಳ್ಳಿಯ ಮೇಲೆ ಎರಗಿದರು. ಮನೆಗಳ ಬಾಗಿಲುಗಳನ್ನು ಒಡೆದರು, ಸಿಕ್ಕಾಪಟ್ಟೆ ಗುಂಡು ಹಾರಿಸಿದರು. ಹೆಂಗಸರು ಮಕ್ಕಳು ಇದ್ದಾರೆ ಎಂದೂ ನೋಡಲಿಲ್ಲ. ಬಾಗಿಲು ಒಡೆಯಲೂ ಅವರು ಹೆಚ್ಚು ಕಷ್ಟ ಪಡಬೇಕಾಗಿರಲಿಲ್ಲ. ಏಕೆಂದರೆ ಆ ಹಳ್ಳಿಯ ಒಂದೆರಡು ಮನೆಗಳನ್ನು ಬಿಟ್ಟರೆ ಬೇರೆಲ್ಲಾ ಹುಲ್ಲು ಹೊದಿಕೆಯ ತಾತ್ಕಾಲಿಕ ಗುಡಿಸಲುಗಳು. ಈ ಗ್ರಾಮ ನಿವಾಸಿಗಳ ಶೋಚನೀಯ ಸ್ಥಿತಿಯ ದ್ಯೋತಕಗಳು. ಮಾನವಕುಲದ ಶತ್ರುಗಳ ಗುಂಡುಗಳಿಂದ ಆ ಬಡ ಜನರನ್ನು ಕಾಪಾಡುವ ಶಕ್ತಿ ಆ ಗುಡಿಸಲುಗಳ ಬಾಗಿಲುಗಳಿಗಿರಲಿಲ್ಲ. 11 ಮಂದಿ ಸ್ಥಳದಲ್ಲೇ ಕುಸಿದು ಪ್ರಾಣ ಬಿಟ್ಟರು. ಇನ್ನುಳಿದವರು ನಂತರ ಸತ್ತರು. ಏಳು ಮಂದಿಗೆ ಗಂಭೀರ ಗಾಯ ಗಳಾದವು. ಗಯಾ ಜಿಲ್ಲೆಯ ಗಡಿಯಲ್ಲಿರುವ ಈ ಹಳ್ಳಿ 1991 ರಿಂದ ಸಾಮಾಜಿಕ ಮತ್ತು ಆರ್ಥಿಕ ಸೆಳೆತದ ಹಿಡಿತದಲ್ಲಿದೆ. ಅದರ ಮೊದಲು ದಲಿತರು, ಕೃಷಿಕೂಲಿಕಾರರು ಸಮೀಪ ಭೂಮಿಹಾರ್ ಜಾತಿಯ ಭೂಮಾಲಿಕರ ಗದ್ದೆಗಳಲ್ಲಿ ದುಡಿಯುತ್ತಿದ್ದರು. ದಿನಕ್ಕೆ ಸಿಗುತ್ತಿದ್ದ ಕೂಲಿ 750 ಗ್ರಾಂ ಆಹಾರಧಾನ್ಯ. ಈ ಶೋಷಣೆಯ ವಿರುದ್ಧ ಕೃಷಿ ಕೂಲಿಕಾರರು ಚಳುವಳಿ ನಡೆಸಿದರು. ನಂತರ ದಿನಕ್ಕೆ 2.5 ಕೆ.ಜಿ. ಸಿಗಲಾರಂಭಿಸಿತು. ಅಲ್ಲದೆ ಹಳ್ಳಿಯ ಪೂರ್ವ ಭಾಗದಲ್ಲಿದ್ದ 18 ಬೀಘಾ ಸಾಗುವಳಿ ಮಾಡದ ಭೂಮಿಯನ್ನು ಆಕ್ರಮಿಸಿ ಕೃಷಿ ಕೂಲಿಕಾರರು ಅಲ್ಲಿ ತಮ್ಮ ಮನೆಕಟ್ಟಲು ಪ್ರಯತ್ನಿಸಿದರು. ಭೂಹೀನ ಕೃಷಿ ಕೂಲಿಗಾರರು ಸ್ವಂತ ಮನೆ ಹೊಂದುವುದೇ? ಭೂಮಿಹಾರ್ ಭೂ ಮಾಲಿಕರಿಗೆ ಇದನ್ನು ಸಹಿಸಲಾಗಲಿಲ್ಲ. ಇಟ್ಟಿಗೆಗಳನ್ನು ಲೂಟಿ ಮಾಡಿದರು, ಗುಡಾರಗಳನ್ನು ಬಲವಂತದಿಂದ ಕಿತ್ತುಹಾಕಿದರು. ಬಿಹಾರ ಸರಕಾರ ಈ ಭೂಹೀನ ಕಾರ್ಮಿಕರ ಮರುವಸತಿಗೆ ಏನೂ ಮಾಡಲಿಲ್ಲ.

ಆಗಲೇ ಸಾಮಾಜಿಕ ದಮನಕ್ಕೆ ಒಳಗಾಗಿದ್ದ ಈ ಬಡ ಜನರು ವಿರೋಧದ ಧನಿ ಎಬ್ಬಿಸಲಾರಂಭಿಸಿದಂತೆ ಭೂಮಿಹಾರರ ದಬ್ಬಾಳಿಕೆಯೂ ಹೆಚ್ಚಿತು. 1991 ರಲ್ಲೇ ಸಾವನ ಬೀಘಾ ನರಮೇಧ ನಡೆದಾಗ ಅದರಲ್ಲಿ ಈ ಊರಿನವರೂ ಇದ್ದರು. ಇಡೀ ಗಯಾ ಜೆಹಾನಾ ಬಾದ್ ಪ್ರದೇಶದಲ್ಲಿ ಸಾಮಾನ್ಯ ದುರ್ಬಲ ವಿಭಾಗಗಳ ಜನ ದನಿ ಎತ್ತರಿಸಿದಾಗಲೆಲ್ಲಾ ಭೂಮಿಹಾರರು ಮತ್ತಿತರ ಪಟ್ಟಭದ್ರ ಹಿತಾಸಕ್ತಿಗಳು ನಿರ್ದಯವಾಗಿ ಆ ದನಿಯನ್ನು ಹತ್ತಿಕ್ಕಿದ್ದಾರೆ. ನಾಲ್ಕು ವರ್ಷ ಗಳ ಹಿಂದೆ ಇದೇ ಗಯಾ ಜಿಲ್ಲೆಯಲ್ಲಿ ಈ ದುರುಳರು ಸಿಪಿಐ(ಎಂ) ಕಾರ್ಯಕರ್ತ ಕಾಮ್ರೇಡ್ ರಾಮಶೀಶ್ ಪಾಸ್ವಾನನ್ನು ಕೊಂದಿದ್ದರು.

ಕಾನೂನು- ವ್ಯವಸ್ಥೆ ಹದಗೆಡುತ್ತಿರುವಾಗ ಭೂಮಿಹಾರ್ ಭೂಮಾಲಿಕರ ಪರವಾಗಿ ಕೆಲಸ ಮಾಡುವ ಗೂಂಡಾ ಜನಗಳಿಗೆ ಸುಗ್ಗಿ. ಅವರಿಗೆ ಬಿಜೆಪಿ-ಸಮತಾಕೂಟದ ಪೋಷಣೆ ದೊರೆಯಿತು. ಈಗ ಈ ಎರಡು ಪಕ್ಷಗಳು ದಲಿತರ ಕೊಲೆಗಳಿಗೆ ಮೊಸಳೆ ಕಣ್ಣೀರು ಹಾಕುತ್ತಿವೆ. ರಾಜಕೀಯ ಲಾಭ ಪಡೆಯಲು ಮುಂದಾಗಿವೆ.

ರಣವೀರ ಸೇನೆ ಮತ್ತೆ ಮತ್ತೆ ಬೆದರಿಕೆ ಒಡ್ಡಿದ್ದರೂ ಕೇವಲ 15 ದಿನಗಳ ಹಿಂದೆ ಶಂಕರ್ ಬೀಘಾ ಹತ್ಯಾಕಾಂಡ ನಡೆದಿದ್ದರೂ ರಾಜ್ಯ ಸರಕಾರ ಇಂತಹ ಘಟನೆಗಳ ಪುನ ರಾವರ್ತನೆಯಾಗದಂತೆ ಕ್ರಮ ಕೈಗೊಳ್ಳುವಲ್ಲಿ ಶೋಚನೀಯವಾಗಿ ವಿಫಲವಾಯಿತು. ರಣವೀರ ಸೇನೆಯ ಗೂಂಡಾಗಳು ಈ ಅಸಹಾಯಕ ದಲಿತರ ಕೊಲೆಮಾಡಲು ಬಿಟ್ಟಿತು.

ನಾರಾಯಣಪುರದ ಜನ ಈ ಅಮಾನುಷ ಹತ್ಯೆಗಳಿಂದ ಜನ ವಿಚಲಿತ ರಾಗಿದ್ದಾರೆ. ರಾಜ್ಯ ರಾಜಕೀಯ ಪಕ್ಷಗಳ ಇಬ್ಬಂದಿತನವನ್ನು ಕಂಡು ರೋಸಿ ಹೋಗಿದ್ದಾರೆ. ಲಾಲೂ ಮತ್ತು ರಾಬ್ಡಿ ದೇವಿ ಈ ಗ್ರಾಮಕ್ಕೆ ಭೇಟಿ ನೀಡಿದಾಗ ಅವರ ವಿರುದ್ಧ ಘೋಷಣೆ ಕೂಗಿದರು. ಕೇಂದ್ರ ಮಂತ್ರಿಗಳಾದ ಜಾರ್ಜ್ ಫೆರ್ನಾಂಡೀಸ್, ನಿತೀನ್ ಕುಮಾರ್ ಬಂದಾಗ ಜನಗಳ ಪ್ರತಿಕ್ರಿಯೆ ಇನ್ನೂ ತೀವ್ರವಾಗಿತ್ತು. ರಣವೀರ ಸೇನೆಯ ಪೋಷಕರು ನೀವು ಎಂದು ಜನ ಅವರನ್ನು ದೂಷಿಸಿದರು.

ಕೊಲೆ ಹಂತಕರನ್ನು ತಕ್ಷಣ ಹಿಡಿದು ಶಿಕ್ಷಿಸಬೇಕು. ಜಿಲ್ಲಾ ಆಡಳಿತ ನಿಷ್ಕ್ರಿಯವಾಗಿತ್ತು. ಆದ್ದರಿಂದ ಜಿಲ್ಲಾ ಆಡಳಿತದ ವಿರುದ್ಧ ಶಿಕ್ಷಾ ಕ್ರಮಗಳನ್ನು ಕೈಗೊಳ್ಳಬೇಕು. ತೊಂದರೆಗೀಡಾದ ಕುಟುಂಬಗಳಿಗೆ ತಕ್ಷಣ ಪರಿಹಾರ ನೀಡಬೇಕು. ಸಾಗುವಳಿ ಮಾಡದಿರುವ ಭೂಮಿಯ ಕಾಗದ ಪತ್ರಗಳನ್ನು ತಕ್ಷಣ ವಿಳಂಬವಿಲ್ಲದೆ ದಲಿತರಿಗೆ ನೀಡಬೇಕು. ಈ ಪ್ರದೇಶದ ಜನಗಳ ಸುರಕ್ಷತತೆಗೆ ಸಾಕಷ್ಟು ವ್ಯವಸ್ಥೆ ಮಾಡಬೇಕು.



ರಣವೀರ ಸೇನೆಯ ಧಾಳಿಗೆ ತುತ್ತಾಗಿ ರೋಧಿಸುತ್ತಿರುವ ನಾರಯಣಪುರದ ಗ್ರಾಮದ ಒಂದು ಬಡ ಕುಟುಂಬದ

ಬಿಹಾರದಲ್ಲಿ ರಾಷ್ಟ್ರಪತಿ ಆಳ್ವಿಕೆಯಡಿ ದಮನ ತಂತ್ರ

ಸಿಪಿಐ(ಎಂ) ಖಂಡನೆ

ರಾಷ್ಟ್ರಪತಿ ಆಳ್ವಿಕೆಯಡಿ ಬಿಹಾರದ ಆಡಳಿತ ದಮನ ತಂತ್ರ ಬಳಸುತ್ತಿದೆ, ಸಾಮಾನ್ಯ ಪ್ರಜಾಸತ್ತಾತ್ಮಕ ಚಟುವಟಿಕೆಗಳನ್ನು ತಡೆಯಲಾಗುತ್ತಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಖಂಡಿಸಿದೆ.

ಅಖಿಲ ಭಾರತ ಕಿಸಾನ್ ಸಭಾ ತನ್ನ ರಾಜ್ಯ ಸಮ್ಮೇಳನದ ಸಂದರ್ಭದಲ್ಲಿ ಫೆಬ್ರವರಿ 17 ರಂದು ಮಧುಬನಿಯಲ್ಲಿ ಒಂದು ಸಾರ್ವಜನಿಕ ಸಭೆಯನ್ನು ಯೋಜಿಸಿತ್ತು. ಇದನ್ನು ಸಾರ್ವಜನಿಕವಾಗಿ ಪ್ರಕಟಿಸಿ ಮೊದಲೇ ಅನುಮತಿ ಪಡೆಯಲಾಗಿತ್ತು. ಆದರೂ ಅದನ್ನು ನಡೆಸಬಾರದು ಎಂದು ಆದೇಶ ನೀಡಿದೆ. ಅದೇ ವೇಳೆಗೆ ಬಿಜೆಪಿ-ಸಮತಾ ಪಕ್ಷಗಳಿಗೆ ಈ ಅವಕಾಶ ನೀಡಲಾಗಿದೆ.

ಇಷ್ಟೇ ಅಲ್ಲ, ರಣವೀರ ಸೇನೆ ದಲಿತರ ಕಗ್ಗೊಲೆ ನಡೆಸಿದ ನಾರಾಯಣಪುರಕ್ಕೆ ಹೋಗಲು ಸಿಪಿಐ(ಎಂ) ಸಂಸತ್ ಸದಸ್ಯರ ತಂಡಕ್ಕೆ ಪರವಾನಗಿ ನೀಡಲಿಲ್ಲ. ಮೊದಲೇ ಜಿಲ್ಲಾ ಮ್ಯಾಜಿಸ್ಟ್ರೇಟ್ ಮತ್ತು ಪೋಲೀಸ್ ಸೂಪರಿಟೆಂಡೆಂಟರಿಗೆ ತಿಳಿಸಿದ್ದರೂ ನಾರಾಯಣಪುರ ತಲುಪಿದ ಸಂಸತ್ ಸದಸ್ಯರಿಗೆ ರಣವೀರ ಸೇನೆಯ ದುರುಳತನಕ್ಕೆ ಈಡಾದವರನ್ನು ಭೇಟಿಯಾಗಲು ಬಿಡಲಿಲ್ಲ.

ರಾಜ್ಯದಲ್ಲಿ ಸಾಮಾನ್ಯ ರಾಜಕೀಯ ಚಟುವಟಿಕೆಗಳ ಕುತ್ತಿಗೆ ಹಿಸುಕುವ ಇಂತಹ ಪ್ರಯತ್ನಗಳನ್ನು ಬಲವಾಗಿ ಖಂಡಿಸಿರುವ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಭಯೋತ್ಪಾದಕ ರಾಜ್ಯಭಾರ ಹೇರುವ ಬಿಜೆಪಿಯ ಪ್ರಯತ್ನಕ್ಕೆ ಜನ ತಕ್ಕ ಉತ್ತರ ನೀಡುತ್ತಾರೆ ಎಂದು ಎಚ್ಚರಿಸಿದೆ.

(ಐಎನ್‌ಎನ್)

ಬಿಹಾರಾ ಸರ್ಕಾರದ ವಜಾ ವಿರುದ್ಧ ಪ್ರತಿಭಟನೆ

ಸಿಪಿಐ(ಎಂ) - ಸಿಪಿಐ ಜಂಟಿ ಕರೆಯ ಮೇರೆಗೆ ದೇಶದೆಲ್ಲೆಡೆ ಬಿಹಾರ ಸರ್ಕಾರವನ್ನು 356ನೇ ಕಲಮನ್ನು ದುರುಪಯೋಗ ಪಡಿಸಿಕೊಂಡು ವಜಾ ಮಾಡಿರುವುದನ್ನು ಬಲವಾಗಿ ವಿರೋಧಿಸಿ ಪ್ರತಿಭಟನೆಗಳು ನಡೆದಿವೆ. ಕೆಲವು ವರದಿಗಳು

ದಿಲ್ಲಿ: ಸಂಸದ್ ಮಾರ್ಗದಲ್ಲಿ ನೂರಾರು ಮಂದಿ ಮತ ಪ್ರದರ್ಶನ ನಡೆಸಿದರು. ಸಿಪಿಐ(ಎಂ) ಪೊಲಿಟ್ ಬ್ಯೂರೋ ಸದಸ್ಯ ಎಂ.ಕೆ.ಪಂಧೆ ಹಾಗೂ ದಿಲ್ಲಿ ರಾಜ್ಯ ಕಾರ್ಯದರ್ಶಿ ಪಿ.ಎಂ.ಎಸ್. ಗ್ರೆವಾಲ್ ಮಾತನಾಡಿ 356ನೇ ಕಲಮಿನ ದುರುಪಯೋಗವನ್ನು ಬಲವಾಗಿ ಖಂಡಿಸಿದರು. ಒಂದೆಡೆ ಕುಖ್ಯಾತ ರಣವೀರ್ ಸೇನೆಯನ್ನು ಬಲವಾಗಿ ಬೆಂಬಲಿಸುತ್ತಾ ಇನ್ನೊಂದೆಡೆ ಅದರದೇ ದುಷ್ಕೃತ್ಯಗಳನ್ನು ನೆವ ಮಾಡಿ ಬಿಹಾರ ಸರ್ಕಾರವನ್ನು ವಜಾ ಮಾಡುವ ಬಿಜೆಪಿಯ ಗೋಸುಂಬೆತನವನ್ನು ಅವರು ಬಯಲಿಗೆಳೆದರು. ಬಿಜೆಪಿ ಎಂ.ಪಿ. ಮನೆಯಲ್ಲಿ ಸಿಪಿಐ(ಎಂ) ಶಾಸಕ ಅಜಿತ್ ಸರ್ಕಾರ್‌ರ ಹಂತಕನ ಬಂಧನ ಬಿಜೆಪಿ ಕ್ರಿಮಿನಲ್‌ಗಳು ಮತ್ತು ರಣವೀರ್ ಸೇನೆಯ ನಡುವಿನ ಸಂಪರ್ಕಗಳನ್ನು ಸ್ಪಷ್ಟವಾಗಿ ಸಾಬೀತು ಪಡಿಸಿದೆ ಎಂದ ಅವರು ಈ ಬಗ್ಗೆ ಉನ್ನತ ಮಟ್ಟದ ತನಿಖೆಯಾಗಬೇಕು ಎಂದರು. ಮಹಾರಾಷ್ಟ್ರ, ಗುಜರಾತ್, ಒರಿಸ್ಸಾಗಳಲ್ಲಿ ಕೋಮುವಾದಿ ಅಪರಾಧ ಎಸಗಿದವರನ್ನು ಬಿಜೆಪಿ ನಾಚಿಕೆಯಿಲ್ಲದೆ ರಕ್ಷಿಸುತ್ತಿದೆ ಎಂದು ಅವರು ಟೀಕಿಸಿದರು.

ಬಿಹಾರ: 'ಭೂತ'ವನ್ನು ಕಿತ್ತುಕೊಂಡರು!

ಫೆಬ್ರವರಿ 14 ರಂದು ಪಾಟ್ನಾದಲ್ಲಿ ಸಿಪಿಐ(ಎಂ) ಒಂದು ಮೆರವಣಿಗೆ ನಡೆಸಿ ಡಾಕ್ ಬಂಗ್ಲಾ ಚೌಕ್‌ನಲ್ಲಿ ಅಟಲ್ ಬಿಹಾರಿ ವಾಜಪೇಯಿ ಸರಕಾರದ ಭೂತದರ್ಶನ ಮಾಡುವ ಯೋಜನೆಯಿತ್ತು. ಮೆರವಣಿಗೆಯ ದಾರಿಯುದ್ದಕ್ಕೂ ಸಿಆರ್‌ಪಿ, ಆರ್.ಎ.ಎಫ್, ಬಿಹಾರ ಪೋಲೀಸ್ ಬೆದರಿಕೆಯೊಡ್ಡಿದರು. ಡಾಕ್ ಬಂಗ್ಲಾ ಚೌಕ್‌ನಲ್ಲಿ ವಾಜಪೇಯಿ ಸರಕಾರದ 'ಭೂತ' ವನ್ನು ಕಿತ್ತುಕೊಂಡರು.

ಸಿಪಿಐ(ಎಂ) ಕಾರ್ಯಕರ್ತರು, ಮುಖಂಡರು ಅಲ್ಲೇ ಸಾರ್ವಜನಿಕ ಸಭೆ ನಡೆಸುವುದಾಗಿ ಕೂತರು. ಪೋಲೀಸ್ ಪಡೆಗಳು ಸುತ್ತುವರೆದು ಪಕ್ಷದ ಬಾವುಟ, ಬ್ಯಾನರುಗಳನ್ನು ಕಿತ್ತುಕೊಳ್ಳಲು ಪ್ರಯತ್ನಿಸಿದರು. ಕಾರ್ಯಕರ್ತರು ಅದಕ್ಕೆ ಅವಕಾಶ ನೀಡಲಿಲ್ಲ. ಪೋಲೀಸ್ ಬಲಪ್ರಯೋಗವನ್ನು ಎದುರಿಸಿ ಸಭೆ, ಮತಪ್ರದರ್ಶನ ಮುಂದುವರೆಯಿತು. ಪೋಲೀಸ್ ರಾಜ್ಯ ಪ್ರಜಾಪ್ರಭುತ್ವದ ಬುಡಮೇಲು, ಬಿಜೆಪಿಯ-ಸಂಘ ಪರಿವಾರದ ಫ್ಯಾಸಿಸ್ಟ್ ಅಜೆಂಡಾದ ವಿರುದ್ಧ ಘೋಷಣೆಗಳು ಮೊಳಗಿದವು.

ನಂತರ ಮತ್ತೆ ಮೆರವಣಿಗೆ ಅಲ್ಲಿಂದ ಆರಂಭವಾಗಿ ಮುಂದೆ ಸಾಗಿತು. ರಾಜ್ಯದ ಇತರೆಡೆಗಳಿಂದಲೂ ಮತ ಪ್ರದರ್ಶನಗಳು, ಮೆರವಣಿಗೆಗಳು ನಡೆದ ಸುದ್ದಿಗಳು ಬರುತ್ತಿವೆ.

ಬಿಹಾರದಲ್ಲಿ ರಾಷ್ಟ್ರಪತಿ ಆಳ್ವಿಕೆ ಹೇರಿಕೆಯ ವಿರುದ್ಧ ಹೋರಾಟವನ್ನು ಮುಂದುವರೆಸಲು ಸಿಪಿಐ(ಎಂ) ರಾಜ್ಯ ಸಮಿತಿ ನಿರ್ಧರಿಸಿದೆ.

ಒರಿಸ್ಸಾ: ಭುವನೇಶ್ವರದಲ್ಲಿ ಸಿಪಿಐ(ಎಂ) ರಾಷ್ಟ್ರೀಯ ಹೆದ್ದಾರಿಯಲ್ಲಿ ರಾಸ್ತಾರೋಕೋ ನಡೆಸಿದರು. ಸ್ಥಳೀಯ ಸಮಿತಿ ಕಾರ್ಯದರ್ಶಿ ಸುರೇಶ್ ಗೌತ್ರೇಯ ಹಾಗೂ ಡಿವೈಎಫ್‌ಐ ರಾಜ್ಯ ಕಾರ್ಯದರ್ಶಿ ಯುದಿಷ್ಠಿರ ಬೆಹ್ರಾರವರನ್ನು ಪೋಲೀಸರು ಬಂಧಿಸಿದರು.

ಕಟಕ್‌ನಲ್ಲಿ ಪ್ರತಿಭಟನಾ ಸಭೆಯನ್ನುದ್ದೇಶಿಸಿ ರಾಜ್ಯ ಕಾರ್ಯದರ್ಶಿ ಜನಾರ್ಧನ್ ಪತಿ ಹಾಗೂ ಜಿಲ್ಲಾ ಕಾರ್ಯದರ್ಶಿ ಸುಭಾಷ್ ಸಿಂಗ್ ಮಾತನಾಡಿದರು. ರೂರ್ಕೆಲಾ, ಬಹ್ರಾಂಪುರ್, ಭದ್ರರ್, ರಾಜಂಗ್ ಪುರ ಇತ್ಯಾದಿ ಕಡೆಗಳಲ್ಲೂ ಪ್ರತಿಭಟನೆಗಳು ನಡೆದವು.

ಕ್ರೈಸ್ತ ಧರ್ಮಾವಲಂಬಿಗಳ ಗುಪ್ತ ಸರ್ವೆ

ಸಂವಿಧಾನವನ್ನು ಉಲ್ಲಂಘಿಸುವ ಗುಜರಾತ್ ಸರ್ಕಾರದ ಇನ್ನೊಂದು ಕ್ರಮ

ಗುಜರಾತಿನ ಗುಪ್ತಚರ ಪೋಲೀಸ್ ಮಹಾನಿರ್ದೇಶಕರು ಹೊರಡಿಸಿರುವ ಒಂದು 14 ಅಂಶಗಳ ಸುತ್ತೋಲೆ ನಗ್ನ ಪಕ್ಷಪಾತವನ್ನು, ಕ್ರೈಸ್ತ ಕೋಮಿನ ವಿರುದ್ಧ ಗುಜರಾತ್ ಸರ್ಕಾರ ಗುರಿಯಿಟ್ಟಿರುವುದನ್ನು ತೋರಿಸಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಖಂಡಿಸಿದೆ. ಎಲ್ಲಾ ಕ್ರೈಸ್ತರ ಸರ್ವೆ ನಡೆಸಿ ಕ್ರೈಸ್ತ ಮಿಶನರಿಗಳ 'ತಂತ್ರೋಪಾಯ'ಗಳ ಬಗ್ಗೆ ವರದಿ ಮಾಡಬೇಕೆಂದು ಈ ಸುತ್ತೋಲೆ ಪೋಲೀಸರಿಗೆ ನಿರ್ದೇಶನ ನೀಡಿದೆ. ವಿದೇಶಗಳಿಂದ ಅವರು ಎಷ್ಟು ಹಣ ಕೇಳಿದ್ದಾರೆ, ಎಷ್ಟು ಪಡೆದಿದ್ದಾರೆ ಎಂದೂ ಮಾಹಿತಿ ಪಡೆಯಬೇಕು, 'ಕ್ರಿಮಿನಲ್ ನಿಲುವಿನ' ಕ್ರೈಸ್ತರ ಬಗ್ಗೆ, ಕಾಗದ ಪತ್ರಗಳನ್ನು ಸಂಗ್ರಹಿಸಬೇಕು ಎಂದೂ ಪೋಲೀಸರಿಗೆ ಹೇಳಲಾಗಿದೆಯಂತೆ.

ಕೇಶುಭಾಯಿ ಪಟೇಲ್ ಮಂತ್ರಿ ಮಂಡಲ ಆರ್.ಎಸ್. ಎಸ್.- ವಿಹೆಚ್‌ಪಿಗಳ ಕ್ರೈಸ್ತ-ವಿರೋಧಿ ಪ್ರಚಾರಕ್ಕೆ ಸಕ್ರಿಯ ಬೆಂಬಲ ನೀಡುತ್ತಿದೆ ಯೆಂಬುದಕ್ಕೆ ಅಲ್ಪಸಂಖ್ಯಾತರ ಹಕ್ಕುಗಳನ್ನು ತುಳಿಯಲಾಗುತ್ತಿದೆ ಎಂಬುದಕ್ಕೆ ಪೋಲೀಸ್ ಸುತ್ತೋಲೆ ಇನ್ನೊಂದು ಸಾಕ್ಷಿ. ಗುಜರಾತಿನ ಬಿಜೆಪಿ ಸರಕಾರ ಕ್ರೈಸ್ತರ ವಿರುದ್ಧ ಪ್ರಭುತ್ವ ಯಂತ್ರವನ್ನು ಬಳಸಿ ಸಂವಿಧಾನವನ್ನು ಉಲ್ಲಂಘಿಸುತ್ತಿದೆ ಎಂದು ಖಂಡಿಸಿರುವ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಇಂತಹ ಒಂದು ಸರಕಾರದ ಅಸ್ತಿತ್ವವೇ ಸುಪ್ರಿಂಕೋರ್ಟ್ ಸಂವಿಧಾನದ ಮೂಲಭೂತ ಲಕ್ಷಣ ಎಂದು ಹೇಳಿರುವ ಧರ್ಮನಿರಪೇಕ್ಷ ತತ್ವದ ಒಂದು ನಗ್ನ ಉಲ್ಲಂಘನೆ ಎಂದಿದೆ.

ವಾಜಪೇಯಿ ಸರಕಾರ ಗುಜರಾತಿನಲ್ಲಿ ನಡೆಯುತ್ತಿರುವುದು ತನಗೆ ಗೊತ್ತಿಲ್ಲವೆಂಬಂತೆ ನಡೆಸಲು ಸಾಧ್ಯವಿಲ್ಲ. ಸಂವಿಧಾನವನ್ನು ಎತ್ತಿಹಿಡಿಯಲು ತಕ್ಷಣ ಈ ರಾಜ್ಯದಲ್ಲಿ ಮಧ್ಯಪ್ರವೇಶಿಸಿ ಆಡಳಿತ ಎಲ್ಲಾ ಕೋಮುಗಳ, ನಾಗರೀಕರ ಹಕ್ಕುಗಳನ್ನು ರಕ್ಷಿಸುವಂತೆ, ಕಾಪಾಡುವಂತೆ ಮಾಡುವುದು ಅಗತ್ಯ ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಹೇಳಿದೆ.

ಬಿಜೆಪಿ ಸಂಸದನ ಮನೆಯಲ್ಲಿ ಕಾಂ. ಅಜಿತ್ ಸರ್ಕಾರ್ ಹಂತಕ

ಬಿಹಾರದಲ್ಲಿ ಬಿಜೆಪಿ ಗೂಂಡಾ ಶಾಮೀಲು ಬಯಲು

ಬಿಹಾರದ ಕುಖ್ಯಾತ ಗೂಂಡಾ ರಾಜನ್ ತಿವಾರಿಯವರನ್ನು ದಿಲ್ಲಿ ಪೋಲೀಸರು ರಾಜಸ್ಥಾನದ ಬಿಜೆಪಿ ಸಂಸತ್ ಸದಸ್ಯ ಗಂಗಾರಾಮ್ ಕೋಡಿಯ ಅಧಿಕೃತ ನಿವಾಸದಲ್ಲಿ ಬಂಧಿಸಿದ್ದಾರೆ. ಇದು ಬಿಹಾರದಲ್ಲಿ ಬಿಜೆಪಿ ಮತ್ತು ಕ್ರಿಮಿನಲ್ ಮಂದಿಯ ನಡುವೆ ಶಾಮೀಲನ್ನು ಬಯಲಿಗೆಳೆದಿದೆ ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಹರ್ಕಿಶನ್ ಸಿಂಗ್ ಸುರ್ಜಿತ್ ಹೇಳಿದ್ದಾರೆ.

ದಿಲ್ಲಿ ಪೋಲಿಸರ ಪ್ರಕಾರ ಶ್ರೀ ಪ್ರಕಾಶ್ ಶುಕ್ಲಾ ಎಂಬ ಭೀಕರ ಗೂಂಡಾನ ಸಹಯೋಗಿ. ಕಳೆದ ವರ್ಷ ಜೂನ್‌ನಲ್ಲಿ ಬಿಹಾರದ ಸಿಪಿಐ(ಎಂ) ಶಾಸಕ ಅಜಿತ್ ಸರ್ಕಾರ್‌ರವರ ಕೊಲೆಯಲ್ಲಿ ಈತ ಶಾಮೀಲಾಗಿದ್ದವ ಸ್ವತಃ ತಿವಾರಿಯೇ ಮಾಜಿ ಎಂ.ಪಿ. ಪಪ್ಪೂ ಯಾದವ್‌ನಿಂದ 5 ಲಕ್ಷ ರೂ ಹಾಗೂ ಎಕೆ-47 ರೈಫಲ್ ಪಡೆದುದಾಗಿಯೂ ಕೊಲೆಯ ನಂತರ ಅದನ್ನು ಹಿಂದಿರುಗಿಸಿದುದಾಗಿಯೂ ಒಪ್ಪಿ ಕೊಂಡಿದ್ದಾನೆ.

ಕಾಂ. ಅಜಿತ್ ಸರ್ಕಾರ್ ಭೂಮಾಲಿಕ ದಮನದ ವಿರುದ್ಧ ಭೂಹೀನ ಮತ್ತು ಬಡ ರೈತರ ಹಲವಾರು ಹೋರಾಟಗಳಿಗೆ ನೇತೃತ್ವ ನೀಡುತ್ತಿದ್ದವರು. ಭೂಮಾಲಿಕರಿಗೆ ಬಿಜೆಪಿ, ಸಮತಾ ಕೂಟದ ಬೆಂಬಲವಿತ್ತು. ಬಿಹಾರದಲ್ಲಿ ನರಮೇಧ ನಡೆಸುತ್ತಿರುವ ನಿಷೇದಿತ ರಣವೀರ ಸೇನೆಗೆ ಬೆಂಬಲ ನೀಡುತ್ತಿರುವುದೂ ಇದೇ ರಾಜಕೀಯ ಕೂಟ ಎಂದಿರುವ ಸುರ್ಜಿತ್ ಕಾಂ. ಅಜಿತ್ ಸರ್ಕಾರ್‌ರನ್ನು ಮುಗಿಸುವ ಅಪರಾಧ ಎಸಗಿದವರಿಗೆ ಮಾತ್ರವಲ್ಲ ಅವರೊಂದಿಗೆ ಶಾಮೀಲಾದವರಿಗೂ ಕಠಿಣ ಶಿಕ್ಷೆ ವಿಧಿಸಬೇಕು ಎಂದು ಒತ್ತಾಯಿಸಿದ್ದಾರೆ.

○

ಗುಂಪು-15 ಒಂಬತ್ತನೇ ಶೃಂಗ ಸಭೆ

15 ವಿಕಾಸಶೀಲ ದೇಶಗಳ ಸಂಘಟನೆ ಗುಂಪು-15 (ಅಥವಾ ಜಿ.15) ರ ಒಂಬತ್ತನೇ ಶೃಂಗ ಸಭೆ ಕ್ಯೂಬಾದ ನೆರೆಯ ದೇಶವಾದ ಕೆರ್ರಿಬಿಯಾನ್ ದ್ವೀಪಗಳಲ್ಲಿರುವ ಮೊಂಟೆಗೊ ಬೇ ಎಂಬ ಪಟ್ಟಣದಲ್ಲಿ ನಡೆಯಿತು. ಇತ್ತೀಚಿನ ಬ್ರಜಿಲ್ ರಶ್ಯನ್ ಬಿಕ್ಕಟ್ಟು ಮತ್ತು ಹಿಂದಿನ ದಕ್ಷಿಣ-ಪೂರ್ವ ಏಶ್ಯಾದ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ನಡೆಯಿತು. ಈ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ವಿಕಾಸಶೀಲ ದೇಶಗಳ ಸಮಸ್ಯೆಗಳ ಬಗ್ಗೆ (ಅದರಲ್ಲೂ ಜಾಗತೀಕರಣ ದಿಂದುಂಟಾದ) ಚರ್ಚೆ ನಡೆದು ಒಂದು ಹೇಳಿಕೆ ನೀಡಲಾಯಿತು. ಆದರೆ ಈ ಬಿಕ್ಕಟ್ಟನ್ನು ಎದುರಿಸುವುದು ಹೇಗೆ? ವಿಕಸಿತ ದೇಶಗಳ ಜತೆ ಆ ಬಗ್ಗೆ ಯಾವ ವಿಷಯಗಳ ಬಗ್ಗೆ ನಿರ್ದಿಷ್ಟವಾಗಿ ಚೌಕಾಶಿಯಲ್ಲಿ ತೊಡಗಬೇಕು ಎಂದು ನಿರ್ಧರಿಸುವುದರಲ್ಲಿ ಸಫಲವಾಗಿಲ್ಲ. ಸಾಮ್ರಾಜ್ಯಶಾಹಿ ದೇಶಗಳ ಗುಂಪು-7(ಜಿ-7 ಅಮೆರಿಕ, ಬ್ರಿಟನ್, ಫ್ರಾನ್ಸ್, ಇಟಲಿ, ಜಪಾನ್, ಜರ್ಮನಿ, ಕೆನಡಾ) ಜತೆ ಅಂತರ್ರಾಷ್ಟ್ರೀಯ ಹಣಕಾಸು ವ್ಯವಸ್ಥೆಯಲ್ಲಿ ಸುಧಾರಣೆ ಬಗ್ಗೆ ಮಾತುಕತೆ ನಡೆಸಬೇಕು ಎಂದಿದೆ. ನವಂಬರ್‌ನಲ್ಲಿ ವಿಶ್ವ ವಾಣಿಜ್ಯ ಸಂಸ್ಥೆ (WTO) ಯ ಸಭೆಗೆ ಪೂರ್ವಭಾವಿಯಾಗಿ ಈ ಮಾತುಕತೆಗೆ ತಯಾರಿ ಮತ್ತು ಸಾಮಾನ್ಯ ಪ್ರಸ್ತಾವ ತಯಾರಿಸಲು ಭಾರತ ಸಭೆಯ ಆತಿಥ್ಯನಾಗಲು ಕೊಟ್ಟ ಸಲಹೆಯನ್ನು ಅಂಗೀಕರಿಸಲಾಯಿತು. ಹಣಕಾಸು ವ್ಯವಸ್ಥೆಯಲ್ಲಿ ಅಲ್ಲೋಲ ಕಲ್ಲೋಲದ ಬಗ್ಗೆ ವಿಕಾಸ ಶೀಲ ದೇಶಗಳು ತೆಗೆದುಕೊಳ್ಳಬಹುದಾದ ಕ್ರಮಗಳ ಬಗ್ಗೆ ಶೃಂಗ ಸಭೆ ಚರ್ಚೆ ಮಾಡಿತು; ಸಮಾಜದ ಅತ್ಯಂತ ದಟ್ಟ ದರಿದ್ರದ ಮೂಲಭೂತ ಅವಶ್ಯಕತೆಯನ್ನು ಪೂರೈಸುವುದು, ಸಾಮಾಜಿಕ ಭದ್ರತೆ ಒದಗಿಸುವುದು ಬೆಳವಣಿಗೆಯ ನೀತಿಯ ಅವಿಭಾಜ್ಯ ಅಂಗವಾಗಿರಬೇಕು ಎಂದು ಹೇಳಿಕೆ ಒತ್ತಾಯಿಸಿದೆ. ಹಣಕಾಸು ಬಂಡವಾಳದ ಜೂಜಿನ ಇತ್ತೀಚಿನ ಅವಾಂತರಗಳ ಬಗ್ಗೆ ಹೆಚ್ಚಾಗಿ ಚರ್ಚಿಸಿದ ಶೃಂಗಸಭೆ ಅವುಗಳು ಹೇಗೆ ವಿಕಾಸಶೀಲ ದೇಶಗಳನ್ನೇ ಹೆಚ್ಚಾಗಿ ಭಾದಿಸಿವೆ ಎಂದು ಅರ್ಥಮಾಡಿಕೊಂಡಿದೆ.


ಕ್ಲಿಂಟನ್ ವಿರುದ್ಧ ಮಹಾಭಿಯೋಗ ರದ್ದು

ಕ್ಲಿಂಟನ್ ವಿರುದ್ಧ ಲೈಂಗಿಕ ಹಗರಣದ ಆಪಾಧನೆಯ ಆಧಾರದ ಮೇಲೆ ಹೂಡಲಾದ ಮಹಾಭಿಯೋಗ ಸೆನೆಟ್ ನಾಮಂಜೂರು ಮಾಡುವ ಮೂಲಕ ರದ್ದಾಗಿದೆ. ಅಧ್ಯಕ್ಷರ ಮೇಲಿನ ಮಹಾಭಿಯೋಗದ ಮಂಜೂರು ಆಗಬೇಕಾದರೆ ನಿರ್ಣಯಕ್ಕೆ ಮೂರನೇ ಎರಡು ಭಾಗ ಬಹುಮತ ಇರಬೇಕು. ಆದರೆ ಈ ನಿರ್ಣಯಕ್ಕೆ ಸರಳ ಬಹುಮತವೂ ಸಿಗದೆ ಅದು ಬಿದ್ದು ಹೋಗಿದೆ. ಕ್ಲಿಂಟನ್ ಇಂತಹ ಮಹಾಭಿಯೋಗ ಎದುರಿಸಿದ ಎರಡನೇ ಅಧ್ಯಕ್ಷ. ಇಂತಹ ಮೊದಲ ಸನ್ನಿವೇಶದಲ್ಲೂ ಅಧ್ಯಕ್ಷರ ಪದಚ್ಯುತಿ ಆಗಿರಲಿಲ್ಲ. ಈ ಸೆನೆಟ್ ನಿರ್ಧಾರದ ಜತೆ, 13 ತಿಂಗಳುಗಳಿಂದ ಅಮೇರಿಕದ ಸಾರ್ವಜನಿಕ ಜೀವನವನ್ನು ಅನಗತ್ಯ ಪ್ರಮಾಣದಲ್ಲಿ ಆವರಿಸಿಕೊಂಡಿದ್ದ ಮೊನಿಕಾ ಹಗರಣದ ಮೇಲೆ ತೆರೆ ಎಳೆದಂತೆ ಆಗಿದೆ. ಅದಕ್ಕಿಂತ ಹೆಚ್ಚಾಗಿ ರಿಪಬ್ಲಿಕನ್ ಪಾರ್ಟಿ ಫ್ಯಾಸಿಸ್ಟ್ ಕೂಟ ಮತ್ತು ಆಳುವ ವರ್ಗದ ಉನ್ನತ ವಲಯಗಳು ಅಮೆರಿಕದ ಸಾಮಾನ್ಯ ಜನತೆಯ ಸಮಸ್ಯೆಗಳಿಂದ ವಿಮುಖ ಮಾಡಲು, ಜನರ ತೀರ್ಪನ್ನು ಹುಸಿಗೊಳಿಸಲು, ಸಂವಿಧಾನ ಬಾಹಿರವಾಗಿ ಅಧ್ಯಕ್ಷ ಪದವಿಯನ್ನು ಕಸಿದುಕೊಳ್ಳಲು ಹೂಡಿದ ಪಿತೂರಿಯ ಕರಾಳ ಅಧ್ಯಾಯದ ಮೇಲೂ ತೆರೆ ಬಿದ್ದಂತಾಗಿದೆ.

ಕ್ಲಿಂಟನ್-ಮೊನಿಕಾ ನಡುವಣ ಲೈಂಗಿಕ ಸಂಬಂಧದ ಬಗ್ಗೆ ಈ ಹಗರಣ ಎಂದು ಮೇಲ್ನೋಟಕ್ಕೆ ಕಂಡು ಬಂದರೂ ಇದು ಭಾರಿ ರಾಜಕೀಯ ಪ್ರಶ್ನೆಯಾದದ್ದು ಈ ಪಿತೂರಿಯಿಂದಾಗಿ. ಈ ಬಗ್ಗೆ ಜನ ಏನೆನ್ನುತ್ತಾರೆ ಎಂದು ಜನಸಮೀಕ್ಷೆಗಳಿಂದ ಚುನಾವಣೆಗಳಲ್ಲಿ ಗೊತ್ತಾಗಿದ್ದರೂ ಅದನ್ನು ತಿರಸ್ಕರಿಸುವ ರಿಪಬ್ಲಿಕನ್ ಪಕ್ಷಕ್ಕೆ ಇದು ಭಾರಿ ಮುಖಭಂಗ. ರಿಪಬ್ಲಿಕನ್ ಪಕ್ಷದ ಒಂದು ವಿಭಾಗ ಕ್ಲಿಂಟನ್‌ಗೆ ವಾಗ್ದಂಡನೆ ನೀಡುವ ದ್ವಿಪಕ್ಷೀಯ ರಾಜಿಸೂತ್ರದ ಆಧಾರದ ಮೇಲೆ ಮುಖಭಂಗ ತಪ್ಪಿಸಿಕೊಳ್ಳಲು ಪ್ರಯತ್ನಿಸಿತ್ತು. ಆದರೆ ಇನ್ನೊಂದು ಭಾಗ ಕ್ಲಿಂಟನ್‌ರನ್ನು ಪದಚ್ಯುತಿಗೊಳಿಸುವ ಸಣ್ಣ ಸಾಧ್ಯತೆಯನ್ನು ಬಿಡಲು ತಯಾರಿರಲಿಲ್ಲ.

ಕಿಟಕಿ ಕಂಪನಿಗಳಿಗೆ ಚೀನಾ ಎಚ್ಚರಿಕೆ

ಚೀನಾದ ಸರ್ಕಾರ ಎಲ್ಲಾ ಅಪಾಯಗಳನ್ನು ಸ್ಥಳಿಯ ಕಂಪನಿಗೆ ತಳ್ಳಿ ಎಲ್ಲಾ ಲಾಭಗಳನ್ನು ತಮ್ಮದಾಗಿಸುವ ಕಿಟಕಿ ಕಂಪನಿಗಳನ್ನು ಎಚ್ಚರಿಸಿ ಹೇಳಿಕೆ ನೀಡಿದೆ. ಚೀನಾದಲ್ಲಿ ಅತ್ಯಂತ ದೊಡ್ಡ ಪ್ರಮಾಣದಲ್ಲಿ ವಿದೇಶಿ ಹಣಕಾಸು ಬಂಡವಾಳ ಹೂಡಲಾಗಿದ್ದ GITIC (ಗುವಾಗ್ ಡೊಂಗ್ ಅಂತರಾಷ್ಟೀಯ ಟ್ರಸ್ಟ್ ಮತ್ತು ಹೂಡಿಕೆ ಕಾರ್ಪೊರೇಶನ್) ದೀವಾಳಿಯ ಹಿನ್ನೆಲೆಯಲ್ಲಿ ಅಂತರ್ರಾಷ್ಟ್ರೀಯ ಹಣಕಾಸು ವಲಯಗಳಲ್ಲಿ ಚೀನಾ ಸರ್ಕಾರದ ಟೀಕೆಗೆ ಇದು ಉತ್ತರವಾಗಿತ್ತು. ಹಣ ಸಂದಾಯದ ಸಾಮರ್ಥ್ಯದ ಅಂದಾಜು ಮಾಡದೆ ಸಾಲ ಕೊಟ್ಟಿದ್ದರಿಂದ ಹೀಗಾಗಿದೆ ಅಂತಹ ವಿದೇಶಿ ಕಂಪನಿಗಳ ತಪ್ಪಿಗೆ ನಾವು ಹೊಣೆಯಲ್ಲ. ಇಂತಹ ಕಂಪನಿಗಳ ಹಣ ಸಂದಾಯ ಸಾಮರ್ಥ್ಯದ ಸರಿಯಾದ ಅಂದಾಜು ಮಾಡದೆ ಬರಿ ಸ್ಥಳೀಯ ಸರ್ಕಾರದ ಗ್ಯಾರಂಟಿ ಮೇಲೆ ಎಲ್ಲವನ್ನು ಅವಲಂಬಿಸಿದ್ದು GITIC ದೀವಾಳಿಯಾದರೆ ಆ ನಷ್ಟವನ್ನೆಲ್ಲಾ ಸ್ಥಳೀಯ ಸರ್ಕಾರ ತುಂಬಿಕೊಡುತ್ತದೆ ಎಂದು ನಿರೀಕ್ಷಿಸಿದ್ದವು. ಇದು ಸರಿಯಲ್ಲ ಎಂದು ಹೇಳಿಕೆ ಖಾರವಾಗಿ ಖಂಡಿಸಿದೆ.



ಜ್ಯೂಗಳ ದಾಸ್ಯ- ಶ್ರಮಕ್ಕೆ ಪರಿಹಾರ ಕೊಡಲು ತಯಾರಾಗಿರುವ ಕಂಪನಿ

ಜರ್ಮನಿಯ ವೊಲ್ಕ್ಸ್‌ವಾಗೆನ್ ಯುರೋಪಿನ ಅತಿದೊಡ್ಡ ಮೋಟಾರು ಕಾರು ಕಂಪನಿ- ಇದು ಎರಡನೇ ಮಹಾ ಯುದ್ಧದ ಸಮಯದಲ್ಲಿ ನಾಜಿ ಬಂಧನ ದಲ್ಲಿದ್ದ ಏಳು ಸಾವಿರ ಜ್ಯೂ ಕೈದಿಗಳ ದಾಸ್ಯ- ಶ್ರಮವನ್ನು ಮಿಲಿಟರಿ ಉತ್ಪಾದನೆಗೆ ಬಳಸಿ ಸೂಪರ್ ಲಾಭ ಗಳಿಸಿತ್ತು. ಇದಕ್ಕಾಗಿ ಅದು ನಾಜಿ ಜೈಲುಗಳು ಕೈದಿಗಳನ್ನು ಕೊಂಡು ಕೊಂಡಿತ್ತು. ಹಗಲು ರಾತ್ರಿ ದುಡಿದು, ಹೊಟ್ಟೆಗಿಲ್ಲದೆ ಈ ಏಳು ಸಾವಿರ ಕಾರ್ಮಿಕ ರಲ್ಲಿ ಹೆಚ್ಚಿನವರು ಸತ್ತಿದ್ದರು. ಮಹಾ ಯುದ್ಧದ ನಂತರ ತನ್ನ ಹೆಸರಿಗೆ ಕಳಂಕ ತಗಲಬಾರದೆಂದು ಪರಿಹಾರ ಕೊಡುವುದಾಗಿ ಮುಂದೆ ಬಂದಿತ್ತು. ಈ ರೀತಿ ದಾಸ್ಯ ಶ್ರಮವನ್ನು ಬಳಸಿದ್ದ ಎಲ್ಲಾ ಜರ್ಮನ್ ಕಂಪನಿಗಳು ಪರಿಹಾರ ಕೊಡುವವರೆಗೆ ಅದನ್ನು ಸ್ವೀಕರಿ ಸುವುದಿಲ್ಲ ಎಂದಿತ್ತು. ಈಗ ಇಂತಹ ಜರ್ಮನ್ ಕಂಪನಿಗಳು ಒಂದು ಸಾಮಾನ್ಯ ವಿಧಿ ತಯಾರಿಸುವ ವೊಲ್ಕ್ಸ್‌ವಾಗೇನ್ ಅದಕ್ಕೆ ತನ್ನ ಪಾಲು ಕೊಡಲಿದೆ.

ಜಗತ್ತಿನ ಮೂರರಲ್ಲಿ ಒಬ್ಬ ನಿರುದ್ಯೋಗಿ

ಇದು 1998-99ರ ಸಾಲಿನ ವಿಶ್ವ ಉದ್ಯೋಗ ವರದಿಯಲ್ಲಿ ವಿಶ್ವಸಂಸ್ಥೆಯ ಕಾರ್ಮಿಕ ಇಲಾಖೆ ILO ದ ಅಂಕೆ ಸಂಖ್ಯೆ. ಈ ವರದಿಯಲ್ಲಿರುವ ಇತರ ಹಲವು ಅಂಶಗಳು ಅಷ್ಟೇ ದಂಗು ಬಡಿಸುವಂತಹವು. ಕೆಲವು ಪ್ರಮುಖ ಅಂಶಗಳೆಂದರೆ

- ಜಗತ್ತಿನ ನಿರುದ್ಯೋಗಿ ಅಥವಾ ಅರೆ-ಉದ್ಯೋಗಿಗಳ ಸಂಖ್ಯೆ ನೂರು ಕೋಟಿ - ಮೂವರಲ್ಲಿ ಒಬ್ಬ. ಈ 100 ಕೋಟಿಯಲ್ಲಿ 15 ಕೋಟಿ ಪೂರ್ಣ ನಿರುದ್ಯೋಗಿಗಳು. ಈ ಪೂರ್ಣ ನಿರುದ್ಯೋಗಿಗಳಲ್ಲಿ 1 ಕೋಟಿ ಇತ್ತೀಚಿನ ಏಶ್ಯಾನ್ ಬಿಕ್ಕಟ್ಟು ಒಂದರ ಪರಿಣಾಮ.
- 15 ರಿಂದ 24 ವರ್ಷದ ವರೆಗಿನ ಯುವಜನರು 6 ಕೋಟಿ ನಿರುದ್ಯೋಗಿಗಳು
- ನಾಲ್ವರಲ್ಲಿ ಒಬ್ಬ (75 ಕೋಟಿ ಜನ) ಅರೆ-ಉದ್ಯೋಗಿ ಆದರೆ ಆತನಿಗೆ ಹೊಟ್ಟೆ ತುಂಬುವಷ್ಟು ಆದಾಯ ಇಲ್ಲ.

ಅಮೆರಿಕನ್ ಉಕ್ಕಿನ ಕಾರ್ಮಿಕರ ಪ್ರದರ್ಶನ

ಅಮೇರಿಕ ಉಕ್ಕನ್ನು ಆಮದು ಮಾಡುವುದನ್ನು ಪ್ರತಿಬಂಧಿಸಬೇಕೆಂದು ಒತ್ತಾಯಿಸಿ ಆ ದೇಶದ ಉಕ್ಕಿನ ಕಾರ್ಮಿಕರು ಭಾರಿ ಪ್ರದರ್ಶನಗಳನ್ನು ನಡೆಸಿದ್ದಾರೆ. ದೇಶದಲ್ಲೇ ಉಕ್ಕು ತಯಾರಾಗುತ್ತಿರುವಾಗ ಅಗ್ಗದ ಉಕ್ಕು ಆಮದಿಸುತ್ತಿರುವುದರಿಂದ ಕಾರ್ಮಿಕರ ಹಲವು ಉಕ್ಕಿನ ಕಾರ್ಖಾನೆಗಳ ಲೇ ಆಫ್ ಮುಚ್ಚುವಿಕೆ ಆರಂಭಿಸಿರುವುದರ ಬಗ್ಗೆ ಪ್ರತಿಭಟಿಸಿದ್ದಾರೆ ಅಂತರ್ರಾಷ್ಟ್ರೀಯ ಉಕ್ಕಿನ ಬೆಲೆ ಕುಸಿದಿದ್ದು ಅಮೆರಿಕದ ಉಕ್ಕಿನ ಕೈಗಾರಿಕಾ ಕಾರ್ಮಿಕರು ತೀವ್ರ ಸಮಸ್ಯೆ ಎದುರಿಸುತ್ತಿದಾರೆ.

ಬಿ.ಪಿ.ಎಲ್ ಸಾಮ್ರಾಜ್ಯ ....

ಪುಟ 5 ರಿಂದ

ಆದ್ದರಿಂದ, ಬಹಳ ಮುಖ್ಯವಾಗಿ, ಭವಿಷ್ಯದ ಶ್ರಮ ಮಾರುಕಟ್ಟೆಯ ಅಗತ್ಯ ಮತ್ತು ಬೇಡಿಕೆಗೆ ಅನುಗುಣವಾಗಿ ಈಗಿರುವ ಕಾರ್ಮಿಕ ಕಾನೂನುಗಳನ್ನು ಬದಲಾಯಿಸಬೇಕೆಂದು ಜಗತ್ತಿನ ಬಂಡವಾಳಶಾಹಿಗಳ ಒತ್ತಡ ಹೆಚ್ಚುತ್ತಿದೆ. ಭಾರತದಲ್ಲೂ ಇಂತಹ ಕಾನೂನುಗಳನ್ನು ಜಾರಿಗೆ ತರಲು ಪ್ರಯತ್ನ ಹೆಚ್ಚುತ್ತಿದೆ. ಇತ್ತೀಚೆಗೆ ಬಿಜೆಪಿ ಕೇಂದ್ರ ಸರ್ಕಾರ ಎರಡನೇ ರಾಷ್ಟ್ರೀಯ ಕಾರ್ಮಿಕ ಆಯೋಗವನ್ನು ರಚಿಸಲು ತೀರ್ಮಾನಿಸಿದ್ದು ಮೇಲಿನ ಉದ್ದೇಶದಿಂದಲೇ ಎಂಬುದು ಸ್ಪಷ್ಟ.

"ನಮ್ಮ ಪೈಪೋಟಿ ಹೈದರಾಬಾದ್ ನೊಂದಿಗಲ್ಲ, ಬೆಂಗಳೂರು ಜಗತ್ತಿನ ಮೆಗಾಸಿಟಿಗಳಲ್ಲಿ ಒಂದಾಗಲು" ಎಂದು ಪಟೇಲರು ಪದೇ ಪದೇ ಹೇಳುವುದು ಇದೇ ಹಿನ್ನೆಲೆಯಲ್ಲಿ ಎಂಬುದನ್ನು ಗಮನಿಸಬೇಕಾಗಿದೆ. ಬಿಪಿಎಲ್ ಮಾಲೀಕರೊಂದಿಗಿನ ಪಟೇಲ್ ಸರ್ಕಾರದ ನಂಟು, ಮತ್ತು ದಮನಕಾರಿ ಕಾರ್ಮಿಕ ವಿರೋಧಿ ನೀತಿಗಳು ಇದಕ್ಕಾಗಿಯೇ ಬರುತ್ತಿವೆ.

ಎಲೆಕ್ಟ್ರಾನಿಕ್ ಉದ್ಯಮದಲ್ಲಿ ಮಹಿಳಾ ಕಾರ್ಮಿಕರ ಕೆಲಸದ ಅವಧಿಯನ್ನು ವಿಸ್ತರಿಸುವುದು, ಒಟ್ಟಾರೆ ಕೆಲಸದ ಅವಧಿಯನ್ನು 12 ಗಂಟೆಗೆ ಹೆಚ್ಚಿಸುವುದು ರಾತ್ರಿ ಪಾಳಿಗಳಲ್ಲೂ ಕೆಲಸ ಮಾಡಿಸಬೇಕೆನ್ನುವುದು,

ರಫ್ತು ಆಧಾರಿತ ಘಟಕಗಳನ್ನು ಕಾರ್ಮಿಕ ಕಾನೂನುಗಳಿಂದ ಸಂಪೂರ್ಣವಾಗಿ ಮುಕ್ತವಾಗಿಸುವುದು, ಇತ್ಯಾದಿ ಸಲಹೆಗಳು ಕೇಂದ್ರ ಸರ್ಕಾರದ ಪತ್ರಿಕೆಯಲ್ಲಿದೆ. ಕಾರ್ಮಿಕರ ರಿಟ್ರೆಂಚ್‌ಮೆಂಟ್‌ನ್ನು ಸರಳಗೊಳಿಸುವುದು ಎಲ್ಲೆಡೆ ಕಾಂಟ್ರಾಕ್ಟ್ ಕಾರ್ಮಿಕರನ್ನು ತೆಗೆದುಕೊಳ್ಳುವುದನ್ನು ಕಾನೂನುಬದ್ಧ ಗೊಳಿಸುವುದು, ಕಾರ್ಮಿಕ ಸಂಘಗಳ ನೋಂದಣಿ ಮತ್ತು ಪರಿಗಣನೆಯನ್ನು ಕ್ಲಿಷ್ಟಗೊಳಿಸುವುದು, ಇತ್ಯಾದಿ ಬದಲಾಗುತ್ತಿರುವ ಹೊಸ ಸನ್ನಿವೇಶದ ಅಂಶಗಳಾಗಿವೆ. ಬಿಪಿಎಲ್‌ನಲ್ಲಿ ನಡೆಯುತ್ತಿರುವುದು ಇವೆಲ್ಲವುಗಳ ಕ್ರೋಢೀಕೃತ ಪ್ರಯತ್ನವಷ್ಟೇ.

ಬಿಪಿಎಲ್‌ನ ಬಹುಸಂಖ್ಯಾತ ಕಾರ್ಮಿಕರು ತಾತ್ಕಲಿಕ ಕಾರ್ಮಿಕರಾಗಿದ್ದರೆ, ಅದಕ್ಕೆ ಹೆಚ್ಚಿನ ಕಾರ್ಮಿಕರು ಶಾಶ್ವತವಲ್ಲದ ಮತ್ತು ಕಡಿಮೆ ಶಾಶ್ವತ ಕಾರ್ಮಿಕರು ಇರಬೇಕೆಂಬ (Small Core and large peiphery argument) ರೀತಿಯಲ್ಲಿ ಶ್ರಮ ಮಾರುಕಟ್ಟೆಯನ್ನು ನಿಯಂತ್ರಿಸುವ ನೂತನ ಟ್ರೆಂಡ್ ಕಾರಣವಾಗಿದೆ.

ರಾಜ್ಯ ಸರ್ಕಾರವು ಕಾರ್ಮಿಕ ಸಂಘಗಳನ್ನು ಅವಾಸ್ತವಗೊಳಿಸುವ ಆ ಮೂಲಕ ಶ್ರಮಶಕ್ತಿಯನ್ನು ಲೂಟಿ ಮಾಡುವ ಪ್ರಯತ್ನವನ್ನೇ ಮಾಡುತ್ತಿದೆ. ಪಟೇಲ್ ಸರ್ಕಾರದ ಇದುವರೆಗಿನ ದಾಖಲೆ ಇದನ್ನೇ ಹೇಳುತ್ತದೆ.

ಹೀಗಾಗಿ ಬಂಡವಾಳಶಾಹಿ ಜಗತ್ತಿನ ನೂತನ ಆಯಾಮಗಳನ್ನು ಯಥಾವತ್ತಾಗಿ ಅನುಸರಿಸುತ್ತಿರುವ ಬಿಪಿಎಲ್ ಮಾಲೀಕನ ವಿರುದ್ಧದ ಕಾರ್ಮಿಕ ಹೋರಾಟವು ಹೆಚ್ಚು ತಿಳುವಳಿಕೆಯ ಮತ್ತು ಜಾಗರೂಕತೆಯ ಹೋರಾಟವಾಗಬೇಕಿದೆ. ಒಬ್ಬ ಸಾಮಾನ್ಯ ಕೈಗಾರಿಕಾ ಮಾಲೀಕನ ವಿರುದ್ಧ ಹೋರಾಟದ ರೀತಿಯಲ್ಲಿ ಬಿಪಿಎಲ್ ಬಂಡವಾಳದಾರನ ವಿರುದ್ಧ ಹೋರಾಟ ಸಾಕಾಗುವುದಿಲ್ಲ.

ಅನಿಯಂತ್ರಿತ ಶ್ರಮ ಮಾರುಕಟ್ಟೆಯ ಕಾರಣದಿಂದ ಪೂರ್ವ ಏಷ್ಯಾ ದೇಶಗಳಲ್ಲಿ ಕಾರ್ಮಿಕ ವರ್ಗಕ್ಕೆ ಎಂತಹ ಪರಿಣಾಮಗಳನ್ನು ಉಂಟು ಮಾಡಿದೆ ಎಂಬುದನ್ನು ರಾಜ್ಯದ ಕಾರ್ಮಿಕ ವರ್ಗ ಪರಿಶೀಲಿಸಬೇಕಿದೆ. ಬಿಪಿಎಲ್ ಹೋರಾಟವನ್ನು ಒಂದು ಸಾಮಾನ್ಯ ಹೋರಾಟವಾಗಿ ಪ್ರತ್ಯೇಕವಾಗಿ ಮುನ್ನಡೆಸುವುದಾಗಲೀ ಅಥವಾ ಇಡೀ ಕಾರ್ಮಿಕ ವರ್ಗವನ್ನು ಇಂತಹ ಹೋರಾಟದ ಭಾಗವಾಗಿಸದೇ ಇರುವುದಾಗಲೀ ಭವಿಷ್ಯದಲ್ಲಿ ಬರಲಿರುವ ಅಪಾಯದ ಸೂಚನೆಗಳೇ ಆಗಲಿವೆ. ಆದ್ದರಿಂದ ಕಾರ್ಮಿಕ ಚಳುವಳಿ ಈ ನಿಟ್ಟಿನಲ್ಲಿ ತನ್ನನ್ನು ಬದಲಾಯಿಸಿ ಕೊಳ್ಳುವುದರಿಂದ ಪರಿಣಾಮ ಆಶಾದಾಯಕವಾಗಲಿದೆ.

ಜಾಗತಿಕವಾಗಿ ರಾಷ್ಟ್ರೀಯವಾಗಿ ಆಗುತ್ತಿರುವ ಎಲ್ಲಾ ಬದಲಾವಣೆಗಳ ಜೊತೆಯಲ್ಲೇ ಬಿಪಿಎಲ್ ಕೈಗಾರಿಕಾ ಸಮೂಹವನ್ನು ಅರ್ಥೈಸಿಕೊಳ್ಳುತ್ತಾ ಐಕ್ಯತೆಯ ಚಳುವಳಿಯನ್ನು ಕಟ್ಟಿಬೆಳೆಸುವ ರಾಜಕೀಯ ಕಣ್ಣೋಟ ಇಂದಿನ ಅಗತ್ಯವಾಗಿದೆ. ಹೀಗಾಗಿ ಬಿಪಿಎಲ್ ಕಾರ್ಮಿಕರ ಹೋರಾಟದ ತಕ್ಷಣದ ಫಲಿತಾಂಶ ಏನಾದರೂ, ಇದನ್ನು ರಾಜಕೀಯವಾಗಿ ಎದುರಿಸುವ ತಯಾರಿಯನ್ನು ಮಾಡಬೇಕಾಗಿದೆ. ಆಗ ಮಾತ್ರ ಪಟೇಲರ ಸರ್ಕಾರದ ವರ್ಗಗುಣವನ್ನು ಎದುರಿಸುವ ಮತ್ತು ಸೋಲಿಸುವ ದಾರಿ ಸಿಕ್ಕುತ್ತದೆ. ○

ಗುರುಕುಲ ಶಿಕ್ಷಣ ಪದ್ಧತಿಯನ್ನು ಹಿಮ್ಮೆಟ್ಟಿಸೋಣ

ಪುರಾಣದ ಏಕಲವ್ಯ ಕಥೆ ಹೋಲುವ ಗುರುಕುಲ ಶಿಕ್ಷಣ ಪದ್ಧತಿಯನ್ನು ಹಿಮ್ಮೆಟ್ಟಿಸೋಣ ಹೀಗೆಂದವರು ಎಸ್. ಎಫ್.ಐ.ನ ರಾಜ್ಯಾಧ್ಯಕ್ಷ ಕೆ.ಎನ್. ಉಮೇಶ್. ಅವರು ಜನವರಿ 23 ರಂದು ನಡೆದ ತುಮಕೂರು ಜಿಲ್ಲಾ ಎಸ್.ಎಫ್. ಐ.ನ 11 ನೇ ಸಮ್ಮೇಳನದ ಮುಖ್ಯ ಅತಿಥಿಗಳಾಗಿ ಮಾತನಾಡಿದರು. ಕೇಂದ್ರ ಸರ್ಕಾರ ಶಿಕ್ಷಣವನ್ನು ಮತ್ತಷ್ಟು ವ್ಯಾಪಾರಿಕರಿಸಿ ಅದರಲ್ಲಿ ಕೇಸರಿ ಬೇರಿಸುತ್ತಿರುದನ್ನು ವಿದ್ಯಾರ್ಥಿ ಸಮುದಾಯ ಹೋರಾಟದ ಮುಖಾಂತರ ಹಿಮ್ಮೆಟ್ಟಿಸ ಬೇಕೆಂದರು.

ಇಂದು ಮತೀಯ ಶಕ್ತಿಗಳು ವಿದ್ಯಾರ್ಥಿ ಯುವ ಜನರನ್ನು ದುರುಪಯೋಗ ಮಾಡಿಕೊಂಡು ದೇಶದ್ಯಾಂತ ಕೋಮು ವಿಷ ಬೀಜ ಬಿತ್ತುತ್ತಿವೆ ಎಂದು ವಿಷಾದಿಸಿದರು ಪ್ರೊ॥ ಎಸ್.ಜಿ. ಸಿದ್ಧರಾಮಯ್ಯ. ಇತ್ತಿಚೀನ ದಿನಗಳಲ್ಲಿ ಹೆಚ್ಚಾಗುತ್ತಿರುವ ಅಲ್ಪಸಂಖ್ಯಾತರ ಹಾಗೂ ಹಿಂದುಳಿದ ಮತ್ತು ಮಹಿಳೆಯರ ಮೇಲಿನ ಹಲ್ಲೆ ಮಾನವೀಯ ಸಮಾಜ ತಲೆ ತಗ್ಗಿಸುವಂತಾಗಿದೆ ಎಂದು ಸಿದ್ಧರಾಮಯ್ಯ ಈ ಹಲ್ಲೆಯನ್ನು ಖಂಡಿಸಿದರು.

ಸಮ್ಮೇಳನದಲ್ಲಿ ಬಿಜಿವಿಎಸ್‌ನ ಇ.ಬಸವರಾಜ್ ಹಾಗೂ ಕೆ. ಸುಬ್ರಮಣ್ಯ ಅವರು ಮಾತನಾಡಿದರು ನಿರೂಪ್‌ರಾವತ್ ನಿರೂಪಿಸಿದರೆ ನವೀನ್ ಸ್ವಾಗತಿಸಿ, ರಮೇಶ ವಂದಿಸಿದರು.

ನೂತನ ಜಿಲ್ಲಾ ಸಮಿತಿ:

ಅಧ್ಯಕ್ಷರು- ಎನ್. ರಮೇಶ್.

ಉಪಾಧ್ಯಕ್ಷರುಗಳು:- ವಸಂತ ಕುಮಾರ್ ಡಿ.ಬಿ. ನಾಗಭೋಷಣ ಹಾಗೂ ನಿರೂಪ್ ರಾವತ್

ಕಾರ್ಯದರ್ಶಿ:- ವೈ. ನವೀನ್.

ಸಹಕಾರ್ಯದರ್ಶಿಗಳು: ಅಂಜನ ಮೂರ್ತಿ, ಚಂದ್ರ ಮೋಹನ್, ಸೋಮಶೇಖರ್

ಹಟ್ಟಿಯಲ್ಲಿ ಪ್ರತಿಭಟನಾ ಮರವಣಿಗೆ

ರಾಯಚೂರು: ಸಿಪಿಐ(ಎಂ) ಹಟ್ಟಿ ಶಾಖೆಯ ನೇತೃತ್ವದಲ್ಲಿ ಕೇಂದ್ರ ಸರ್ಕಾರದ ಬೆಲೆ ಏರಿಕೆ ವಿರುದ್ಧ ಫೆಬ್ರವರಿ 9 ರಂದು ನೂರಕ್ಕೂ ಹೆಚ್ಚು ಪ್ರತಿಭಟನಾ ಕಾರರ ಮೆರವಣಿಗೆ ನಡೆಯಿತು.

ಪಂಚಾಯತ್ ಕಛೇರಿಯಿಂದ ಹುಚ್ಚ ಬುಡೇಶ್ವರ ಚೌಕ, ಸಂತೆ ಬಜಾರ್ ಮಾರ್ಗವಾಗಿ ಹಾದು ಬಂದ ಮೆರವಣಿಗೆಯು ಬಸ್ ನಿಲ್ದಾಣದಲ್ಲಿ ಬಹಿರಂಗ ಸಭೆಯಾಗಿ ಮಾರ್ಪಟ್ಟಿತು. ಸಭೆಯಲ್ಲಿ ಪಕ್ಷದ ಮುಖಂಡರಾದ ಕೆ. ಶಿವನಂದ ಕಾರ್ಯದರ್ಶಿ ಬಿ. ಅಮರೇಶ ಗುರಿಕಾರ, ಎಂ.ಸಿ. ನಿಂಗಪ್ಪ ಮಾತನಾಡಿದರು. ○

ಮಾನವ ಅಭಿವೃದ್ಧಿಗೆ ಅಮರ್ತ್ಯಸೇನ್‌ರ ಅಪಾರ ಕೊಡುಗೆ



ಪ್ರೊ. ಕಾಂತಿಬಿಸ್ವಾಸ್

ಮಾನವ ಅಭಿವೃದ್ಧಿಗೆ ನೋಬಲ್ ಪ್ರಶಸ್ತಿ ಮತ್ತು ಭಾರತ ರತ್ನ ಪ್ರಶಸ್ತಿ ವಿಜೇತರಾದ ಪ್ರೊ. ಅಮರ್ತ್ಯಸೇನ್ ಅಪಾರ ಕೊಡುಗೆ ನೀಡಿದ್ದಾರೆ ಎಂದು ಪ.ಬಂಗಾಳ ಎಡರಂಗ ಸರಕಾರದ ಶಿಕ್ಷಣ ಸಚಿವ ಪ್ರೊ. ಕಾಂತಿ ಬಿಸ್ವಾಸ್ ತಿಳಿಸಿದರು. ಅವರು ದಿ. 20 ರಂದು ಮುಂಜಾನೆ ಹುಬ್ಬಳ್ಳಿಯ ಮಹಿಳಾ ಕಾಲೇಜಿನಲ್ಲಿ ಜಾಗತೀಕರಣದ ಸಂದರ್ಭ ಅಮರ್ತ್ಯ ಸೇನರ ಅಭಿವೃದ್ಧಿ ಅರ್ಥಶಾಸ್ತ್ರದ ಚಿಂತನೆಗಳ ಕುರಿತು ನಡೆದ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಉದ್ಘಾಟಕರಾಗಿ ಮಾತನಾಡುತ್ತಿದ್ದರು.

ಅಮರ್ತ್ಯ ಸೇನರ ವಿಚಾರಧಾರೆಯನ್ನು ವಿವರಿಸುತ್ತಾ ಆರ್ಥಿಕ ಅಭಿವೃದ್ಧಿ ಎಂದರೆ ಹಣಕಾಸು ಹಾಗೂ ನೈಸರ್ಗಿಕ ಸಂಪನ್ಮೂಲಗಳ ಅಭಿವೃದ್ಧಿ ಮಾತ್ರ ಅಲ್ಲ, ಮಾನವ ಸಂಪನ್ಮೂಲದ ಅಭಿವೃದ್ಧಿಯೂ ಆಗಿದೆ ಎಂದರು ಕಾಂತಿ ಬಿಸ್ವಾಸ್. ಈ ದಿಸೆಯಲ್ಲಿ ಪ್ರಜಾಪ್ರಭುತ್ವದಲ್ಲಿ ಸರಕಾರ ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣ, ಎಲ್ಲರಿಗೂ ಆರೋಗ್ಯ, ವಸತಿ, ಕುಡಿಯುವ ನೀರು, ಜೀವನಾವಶ್ಯಕ ವಸ್ತುಗಳ ಸಾರ್ವಜನಿಕ ವಿತರಣೆ, ಭೂರಹಿತರಿಗೆ ಭೂಮಿಯ ವಿತರಣೆ, ಮಹಿಳೆಯರಿಗೆ ಸಮಾನ ಅವಕಾಶಗಳು, ಎಲ್ಲರಿಗೂ ಉದ್ಯೋಗವ ಕಾಶಗಳು ಮತ್ತು ಆ ಮೂಲಕ ಅವರ ಆದಾಯ ಹೆಚ್ಚಳದಿಂದ ಮಾರುಕಟ್ಟೆಯಲ್ಲಿ ಜನರು ಅಧಿಕ ಸಂಖ್ಯೆಯಲ್ಲಿ ಪಾಲುಗೊಳ್ಳುವುದು ಸಾಧ್ಯ ಎಂದು ಅಮರ್ತ್ಯಸೇನ್ ವಿಚಾರ ಧಾರೆಯಾಗಿದೆ ಎಂದರು ಸಚಿವರು. ಇಂತಹ ಮೂಲಭೂತ ಸೌಲಭ್ಯಗಳು ಜನರ ಹಕ್ಕುಗಳಾಗಿ ಗುರುತಿಸಲ್ಪಟ್ಟು, ಜನರು ಸಂಘಟಿತರಾಗಿ ಪ್ರಜಾಸತ್ತಾತ್ಮಕವಾಗಿ ಕೆಳಮಟ್ಟದವರೆಗೆ ಸರಕಾರದ ಮೇಲೆ ಒತ್ತಡ ತರಬೇಕೆಂದೂ ಅಮರ್ತ್ಯಸೇನ್‌ರ ಪ್ರತಿಪಾದನೆ ಆಗಿದೆ ಎಂದರು.

ಬರಗಾಲದಲ್ಲಿ ಜನರು ಸಾವು ನೋವುಗಳಿಗೆ ಒಳಗಾಗಿರುವುದು ಜೀವನಾವಶ್ಯಕ ವಸ್ತುಗಳ ಆಧಾರದಿಂದಲ್ಲ, ಬದಲು ಅವುಗಳ ವಿತರಣೆಯ ದಕ್ಷತೆ ಹಾಗೂ ಪ್ರಾಮಾಣಿಕತೆಯಲ್ಲಿನ ಅಭಾವ ಎಂದು ಅಮರ್ತ್ಯಸೇನರ ವಿಶೇಷ ಅಧ್ಯಯನಗಳಿಂದ ತಿಳಿದುಬರುತ್ತದೆ ಎಂದರು.

ಸ್ವಾತಂತ್ರ್ಯ ಪಡೆದು 50 ವರ್ಷಗಳಾದರೂ ಜಗತ್ತಿನ ಬಹುಪಾಲು ಬಡವರು, ಅನಕ್ಷರಸ್ಥರು, ಅನಾರೋಗ್ಯಸ್ಥರು, ಭಾರತದಲ್ಲಿಯೇ ಇರುವುದು ರಾಷ್ಟ್ರೀಯ ಅವಮಾನ ಎಂದರು ಕಾಂತಿ ಬಿಸ್ವಾಸ್. ಮಾನವ ಅಭಿವೃದ್ಧಿಯಲ್ಲಿ ಅಧಿಕಾರ ವಿಕೇಂದ್ರೀಕರಣದ ಮೂಲಕ ಪ.ಬಂಗಾಳದಲ್ಲಿ ಕಳೆದ ಎರಡು ದಶಕಗಳ ಕಾಲ ಎಡರಂಗ ಸರ್ಕಾರದ ಸಾಧನೆಗಳನ್ನು ಅವರು ಎತ್ತಿ ತೋರಿಸಿದರು. ನಾನು ಮಂತ್ರಿ ಆಗುವ ಬದಲು ಶಿಕ್ಷಕನಾಗಿರಲು ಬಯಸುತ್ತೇನೆ ಎಂದು ತಿಳಿಸಿ, ಶಿಕ್ಷಣದ ಮುಖ್ಯವಾಗಿ ಮಹಿಳಾ ಶಿಕ್ಷಣದ ಮಹತ್ವವನ್ನು ಒತ್ತಿ ಹೇಳಿದರು. ಅಮರ್ತ್ಯಸೇನ್‌ರಿಗೆ ಮತ್ತು ಮದರ್‌ಥೆರೇಸರಿಗೆ ನೋಬೆಲ್ ಪ್ರಶಸ್ತಿ ನೀಡಿರುವುದರಿಂದ ಕ್ರಿಶ್ಚಿಯನ್ ಮಿಶನರಿಗಳಿಗೆ ಪ್ರೋತ್ಸಾಹಿಸಿದಂತಾಗಿದೆ ಎಂಬ ವಿಶ್ವ ಹಿಂದು ಪರಿಷತ್‌ನ ವಾದ ತಿಳಿಗೇಡಿತನದ್ದಾಗಿದೆ ಎಂದರು ಕಾಂತಿ ಬಿಸ್ವಾಸ್.

ನಂತರ ಜೀವ ವಿಮಾ ನಿಗಮದ ನಿವೃತ್ತಾಧಿಕಾರಿಗಳೂ, ಸಮುದಾಯ-ಸಾಕ್ಷರತಾ-ಕಾರ್ಮಿಕ ಧುರೀಣರೂ ಆದ ಸಿ.ಆರ್.ಭಟ್ ಸದ್ಯದ ಖಾಸಗೀಕರಣ, ಉದಾರೀಕರಣ, ಜಾಗತೀಕರಣಗಳ ಹಿನ್ನೆಲೆಗಳನ್ನು ವಿವರಿಸಿದರು. ಅವುಗಳ ಅಪಾಯದಿಂದ ಪಾರಾಗಲು ಅಭಿವೃದ್ಧಿಯ ವಿಷಯದಲ್ಲಿ ಪ್ರಜಾಪ್ರಭುತ್ವದ .... ಮತ್ತು ಪ್ರಜೆಗಳ ಸಂಘಟಿತ ಒತ್ತಡದ ಮಹತ್ವವೇ ಅಮರ್ತ್ಯಸೇನರ ವಿಚಾರ ಧಾರೆಯ ಮುಖ್ಯಾಂಶವಾಗಿದೆ ಎಂದರು.

ನಾಗರಿಕ ಸಮಾಜದ ಆರ್ಥಿಕ ಅಭಿವೃದ್ಧಿಯನ್ನು ಅಳೆಯಲು ಕೇವಲ ರಾಷ್ಟ್ರೀಯ ಹಾಗೂ ಸರಾಸರಿ ಆದಾಯಗಳಷ್ಟೇ ಸಾಲದು, ನಾಗರಿಕರ ಜೀವನ ಮಟ್ಟಕ್ಕೆ ಸಂಬಂಧಿಸಿದ ಶಿಕ್ಷಣ, ಆರೋಗ್ಯ ಮುಂತಾದವುಗಳನ್ನು ಗಣನೆಗೆ ತೆಗೆದುಕೊಂಡು 'ಮಾನವ ಅಭಿವೃದ್ಧಿ ಸೂಚಿಯನ್ನು ಪ್ರಕಟಿಸಲು ಅಮರ್ತ್ಯಸೇನರು ವಿಶ್ವಸಂಸ್ಥೆಗೆ ಸಲಹೆ ನೀಡಿದ್ದರು. ಅದರಂತೆ 1998 ರ ಜಾಗತಿಕ ಮಾನವ ಅಭಿವೃದ್ಧಿ ಸೂಚ್ಯಂಕದಂತೆ 175 ದೇಶಗಳಲ್ಲಿ ಭಾರತ 139ನೇ ಸ್ಥಾನ ಪಡೆದಿರುವುದಾಗಿ ವಿಷಾಧಿಸಿದರು. ಅವಿರ್ಭಜಿತ ಜಾಗತೀಕರಣ ದೇಶದ ಸ್ವಾವಲಂಬನೆ, ಸ್ವಾತಂತ್ರ್ಯ, ಸಾರ್ವಭೌಮತೆಗಳಿಗೆ ಅಪಾಯ ಒಡ್ಡಲಿದೆ ಎಂದು ಸಿ.ಆರ್.ಭಟ್ ಎಚ್ಚರಿಸಿದರು. ಪ್ರೊ. ಎಲ್.ಆರ್.ಅಂಗಡಿ ಈ ಕಾರ್ಯಕ್ರಮ ಸಂಘಟಿಸಿದ್ದರು. ಈಗಾಗಲೇ ಇವರು ಅರ್ಥಶಾಸ್ತ್ರ ಪರಿಷತ್‌ನ ಆಶ್ರಯದಲ್ಲಿ ಹಲವಾರು ಕಾಲೇಜುಗಳಲ್ಲಿ ಅಮರ್ತ್ಯಸೇನರ ವಿಚಾರಧಾರೆಯ ಕುರಿತು ಸಿ.ಆರ್.ಭಟ್ ಅವರ ಉಪನ್ಯಾಸಗಳನ್ನು ಏರ್ಪಡಿಸಿದ್ದರು.

ವರದಿ: ಸಿ.ಆರ್.ಭಟ್

STATEMENT OF THE OWNERSHIP ETC. OF THE WEEKLY NEWSPAPER "AIKYARANGA"

Form IV
(see Rule 8)

1. Place of Publication	:	12,8th cross, S.R.Nagar Bangalore 560 027
2. Periodicity of Publication	:	Weekly
3. Printer's Name	:	S.Suryanarayana Rao
(Whether Citizen of India? If Foreigner, State the Country of Origin)	:	India
Address:	:	12, 18th Cross, S.R.Nagar, Bangalore-560027
4. Publisher's Name	:	S.Suryanarayana Rao
(Whether Citizen of India? if foreigner, State the Country of Origin)	:	Indian
Address Bangalore-560027	:	12, 18th Cross, SR. Nagar,
5. Editor's Name	:	S.Suryanarayana Rao
(Whether Citizen of India? If Foreigner, State the Country of Origin)	:	Indian
Address	:	12, 18th Cross, S.R.Nagar, Bangalore
6. Name and addresses of individuals who own the Newspaper and partners or shareholders holding more than one percent of the total capital.	:	Karnataka State Committee Communist Party of India (Marxist) 12, 18th Cross, S.R.Nagar, Bangalore-560 027

1. P.Ramachandra Rao hereby declare that the particulars given above are true to the best of my knowledge and belief

Sd/-

S.Suryanarayana Rao
Publisher

Date: 21..2.1999

'ಮೇಡಂ ಬೆಂಗಾಲ್'

ಎಂದಿನಂತೆ ಆಕೆ ಬೇಸ್ತು ಬಿದ್ದರು. ಈ ಬಾರಿ ಭರವಸೆಗಳ ಗಾಡಿಯಲ್ಲಿ. ತೃಣಮೂಲ ಕಾಂಗ್ರೆಸ್ ಮುಖ್ಯಸ್ಥೆ ಮಮತಾ ಬ್ಯಾನರ್ಜಿ ಬಹಳ ದಿನಗಳಿಂದ ಎಗರಾಡುತ್ತಿದ್ದರು. ಏಕೆಂದರೆ ಕೇಂದ್ರದಲ್ಲಿ ಬಿಜೆಪಿ 'ಬೆಂಗಾಲ್ ಪ್ಯಾಕೇಜ್'ನ ಭರವಸೆ ಈಡೇರಲಿಲ್ಲ. ಸಿಡಿಮಿಡಿಗೊಂಡು ಕೆಲವ ಸಮಯದ ಹಿಂದೆ ಕೇಂದ್ರದ ಸಮ್ಮಿಶ್ರ ಸರಕಾರದ ಸಂಯೋಜಕ ಸಮಿತಿಗೆ ರಾಜೀನಾಮೆ ನೀಡಿದ್ದರು. ನಂತರ ಫೆಬ್ರವರಿ 10 ರಂದು ಕಲ್ಕತ್ತೆಯ ಬ್ರಿಗೆಡ್ ಪರೇಡ್ ಗ್ರೌಂಡ್‌ನಲ್ಲಿ ರ್‍ಯಾಲಿ ಸಂಘಟಿಸಿದರು. ಇದು 'ಚಾಲೆಂಜ್ ಬ್ರಿಗೇಡ್' ಎಂದೆಲ್ಲಾ ಹೇಳಿಕೊಂಡರು. ಅವರು ಏನು ಹೇಳುತ್ತಾರೆ ಎಂದು ಕೇಳಲು ಬಂದ ಕೆಲವು ಸಾವಿರ ಜನ ಅವರ, ಅವರ ಗಲಭೆಗಳಲ್ಲಿ ಸಹಯೋಗಿ ಕೇಂದ್ರ ಪ್ರಸಾರ ಮಂತ್ರಿ ಪ್ರಮೋದ್ ಮಹಾಜನ್ ರ ಮಾತು ಕೇಳಿ ನಿರಾಶರಾಗಿ ಹಿಂದಿರುಗಿದರು. ರ್‍ಯಾಲಿಯಲ್ಲಿ ಹೊಸತೇನೂ ಇರಲಿಲ್ಲ. ಮತ್ತೆ-ಮತ್ತೆ ನೀಡಿದ ಭರವಸೆಗಳಿದ್ದವು, ಅವು ಕೂಡಾ ನಂತರದ ಘಟನೆಗಳು, ಅಂಚಿ-ಅಂಶಗಳಿಂದ ಸುಳ್ಳಿನ ಕಂತೆ ಎಂದು ಸಾಬೀತಾಯಿತು.


ಬಂಗಾಳಕ್ಕೆ ಕೇಂದ್ರ 'ಮಂಜೂರು' ಮಾಡಿದ ಯೋಜನೆ, ಕಾರ್ಯಕ್ರಮಗಳನ್ನು ಮಂತ್ರಿವರ್ಯರು ಪ್ರಕಟಿಸಿದರು. ಕೆಲವು ರೈಲು ಲೈನುಗಳು, ದಿಲ್ಲಿಯಲ್ಲೊಂದು ಟಾಗೋರ್ ಪ್ರತಿಮೆ, ಪುರುಲಿಯಾದಲ್ಲಿ ಕವಿ ನಜುರುತ್ ಜನ್ಮ ಸ್ಥಳಕ್ಕೆ ಸ್ವಲ್ಪಹಣ ಅಲ್ಲದೆ ಉತ್ಸಾಹದ ಭರದಲ್ಲಿ ಮಹಾಜನ್ ಇ.ಸಿ.ಎಲ್(ಈಸ್ಟರ್ನ್ ಕೋಲ್ ಫೀಲ್ಡ್ಸ್ ಲಿಮಿಟೆಡ್) ಮುಟ್ಟುವುದಿಲ್ಲ. ಒಬ್ಬನೇ ಒಬ್ಬ ಕಾರ್ಮಿಕನನ್ನು ರಿಟ್ರೆಂಚ್ ಮೆಂಟ್ ಮಾಡುವುದಿಲ್ಲ ಎಂದು ಸಾರಿಯೇಬಿಟ್ಟರು. ಪಾಪ, ಮಹಾಜನ್! ಏಕೆಂದರೆ ಅವರು ಹೀಗೆ ಸಾರುತ್ತಿದ್ದಾಗಲೇ ಅವರ ಸಹಯೋಗಿಯೊಬ್ಬ ಮುಖ್ಯಮಂತ್ರಿ ಜ್ಯೋತಿಬಸುರವರಿಗೆ ಒಂದು ಪತ್ರವನ್ನು ತರಾತುರಿಯಾಗಿ ಕಳಿಸಿದ್ದ - ಈ ಕಲ್ಲಿದ್ದಲು ಗಣಿಗಳು 'ಅಸಮರ್ಥ' ವಾಗಿವೆ ಎಂದು. ಮರುದಿನ ರಾಜ್ಯ ಹಣಕಾಸು ಮಂತ್ರಿ ಈ 'ಪ್ಯಾಕೇಜ್' ನ ನಿಜ ಸ್ವರೂಪ ವನ್ನು ಪತ್ರಿಕೆಯವರ ಮುಂದೆ ಬಿಚ್ಚಿಡುತ್ತಾ ಇದರಲ್ಲಿ ಹೊಸತೇನಿಲ್ಲ ಎಂದು ತೋರಿಸಿ ಕೊಟ್ಟರು, ಕೇಂದ್ರ ಕಲ್ಲಿದ್ದಲು ಮಂತ್ರಿ ಮುಖ್ಯ ಮಂತ್ರಿಗಳಿಗೆ ಇ.ಸಿ.ಎಲ್. ನಿರುಪಯೋಗಿ, ಅದನ್ನು ಉಳಿಸಲು ಸಾಧ್ಯವಿಲ್ಲ ಎಂದು ಬರೆದ ಪತ್ರವನ್ನು ತೋರಿಸಿದಾಗ ಮಹಾಜನ್ ಮುಖಕ್ಕೆ ಮೊಟ್ಟೆ ಎರಚಿದಂತಾಗಿರಬೇಕು.

ಸ್ವಾಭಾವಿಕವಾಗಿ ಬ್ಯಾನರ್ಜಿ ತಲ್ಲಣಗೊಂಡರು. ಮತ್ತೆ ಕೂಗಾಡಲು ಆರಂಭಿಸಿದರು - ಭಾವುಕರಾಗಿ "ನಾನಿನ್ನು ಬಂಗಾಲಕ್ಕಾಗಿ ಏನೂ ಕೇಳುವುದಿಲ್ಲ" ಎಂದರಂತೆ ಆಕೆ ಒಂದು ಪತ್ರಿಕೆಗೆ. ತನ್ನ ಮುದ್ದಿನ ಈ ವಿಚಾರ ಈಗ ಏಕೆ ಬೇಡವಾಯಿತೋ ಗೊತ್ತಿಲ್ಲ. ಅಂತೂ ಒಂದು ಸಂಗತಿಯಂತೂ ಸ್ಪಷ್ಟ. ಆಕೆಯೇನೇ ಹೇಳಲಿ, ಇಡೀ ದೇಶವನ್ನು ಕಾವಿಕೇಂದ್ರ ಬೇಸ್ತು ಬೀಳಿಸಿದಂತೆ ತಾನೂ ಬೇಸ್ತು ಬಿದ್ದೆ ಎಂಬುದು ಇತರರೆಲ್ಲರಿಗಿಂತಲೂ ಆಕೆಗೇ ಹೆಚ್ಚು ಸ್ಪಷ್ಟವಾಗಿರಬೇಕು.

ಮಮತಾ ಬ್ಯಾನರ್ಜಿ ಪಾಪ ಬಹಳ ಸಮಯದಿಂದ ರಾಜ್ಯಕ್ಕಾಗಿ ಕೂಗಾಡಿದ್ದಾರೆ, ಆದರೆ ರಾಜ್ಯಕ್ಕೆ ಕಿಂಚಿತ್ತೂ ಫಲ ಸಿಗಲಿಲ್ಲ. ತನ್ನ ಬದುಕನ್ನು ಈ 'ಮೇಡಂ ಬೆಂಗಾಲ್' ಬಿಟ್ಟು ನಿಜವಾದ ರಾಜಕೀಯ ನಡೆಸುವ ಗಂಭೀರ ಕೆಲಸಕ್ಕೆ ಇಳಿಯಬೇಕಾದ ಸಮಯವೀಗ ಬಂದಿದೆ. ಮಕ್ಕಳಿಗೂ ಕೂಡಾ ಆಟವಾಡಿ ಸ್ವಲ್ಪ ಹೊತ್ತು ದಣಿವಾಗುತ್ತದಲ್ಲವೇ?

(ಕೃಪೆ: ಗಣಶಕ್ತಿ ಆನ್‌ಲೈನ್)

('ಗಣಶಕ್ತಿ' ಆನ್‌ಲೈನ್‌ನಲ್ಲಿ ಈ ಬರಹ ಪ್ರಕಟವಾದ ನಂತರ ಮಮತಾ ಬ್ಯಾನರ್ಜಿಯವರು ಬಜೆಟ್ ಸಲ್ಲಿಸಿದ ನಂತರ ಕೇಂದ್ರ ಸಂಪುಟ ಸೇರುವ ಬಗ್ಗೆ ಯೋಚಿಸುವುದಾಗಿ ಹೇಳಿದ್ದಾರೆ ಎಂದು ವರದಿಯಾಗಿದೆ. ಬಜೆಟ್ ಒಳ್ಳೆಯದಿರ ಬೇಕಂತೆ! ಒರಿಸ್ಸಾ, ಗುಜರಾತ್‌ನ ಘಟನೆಗಳಂತೆ? ಪಡಿತರ ಬೆಲೆಯೇರಿಕೆಯಂತೆ? ಗೃಹಮಂತ್ರಿ ಅಡ್ವಾಣಿ ರಾಜೀನಾಮೆ ಕೊಡಬೇಕು ಎಂದು, ಪಡಿತರ ಬೆಲೆಯೇರಿಕೆ ಅನೈತಿಕ, ಪ್ರಧಾನಿ ನಿವಾಸದೆದುರು ಧರಣಿ ಮಾಡುತ್ತೇನೆ ಎಂದು ಕೂಗಾಡಿದವರು ಈಕೆಯೇ ಅಲ್ಲವೇ?)





ಇ.ಎಂ.ಎಸ್ ಭವನ ನಿಧಿ

ಹಿಂದಿನಮೊತ್ತ	ರೂ. 8,69,261-00
ಸಿಪಿಐ(ಎಂ) ಧಾರವಾಡ ಜಿಲ್ಲಾ ಸಮಿತಿ ಮೂಲಕ	
ಕೃಷ್ಣಮೂರ್ತಿ (ಕೆ.ಎಲ್.ಭಟ್, ದಾವಣಗೆರೆ ಇವರ ಮಗ) ಮದುವೆಯ ಸವಿನೆನಪಿಗಾಗಿ	1,000-00
ಅಶೋಕ್ (ಕೆ.ಎಲ್.ಭಟ್, ದಾವಣಗೆರೆ ಇವರ ಮಗ)	2,000-00
ಈ. ಬಸವರಾಜು, ಬಿಜಿವಿಎಸ್, ಬೆಂಗಳೂರು	250-00
ಎಸ್.ಎಂ.ನ್ಯಾಗೇರಿಮಠ, ಬೆಂಗಳೂರು	500-00
ಒಟ್ಟು	8,73,011-00

Reg. No. 17015/64 KRNM/BGS-405 MAG (2) PRB DECR 319-79/79 AIKYARANGA WEEKLY

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು: ಜಿ.ಎನ್ ನಾಗರಾಜ್, ಸಂಪಾದಕೀಯ ಕಛೇರಿ: ನಂ.12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು-1
Printed & Published by Communist Party of India (Marxist), Karnataka State Committee. Editor: G.N. NAGARAJ